ಉಡುಪಿ ತಾಲೂಕಿನ ಮೊಗವೀರ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ (ಅಭಿವೃದ್ಧಿ ಅಧ್ಯಯನ) ಹಂಪಿಗೆ
ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಹರಿಣಾಕ್ಷಿ

ನೋಂದಣಿ ಸಂಖ್ಯೆ: ಕೆಟಿಎಸ್‌ಎಂಡಿಎಸ್‌೦೦೯೪

ಮಾರ್ಗದರ್ಶಕರು

ಡಾ. ದುಗ್ಗಪ್ಪ ಕಜೆಕಾರ್

ವಿಭಾಗ ಮುಖ್ಯಸ್ಥರು ಸಮಾಜಕಾರ್ಯ ಸ್ನಾತಕೋತ್ತರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು
ಸ್ನಾತಕೋತ್ತರ ಅಧ್ಯಯನ ಕೇಂದ್ರ,
ತೆಂಕನಿಡಿಯೂರು, ಉಡುಪಿ.

ಅಧ್ಯಯನ ಕೇಂದ್ರ

ಕರ್ನಾಟಕ ಥಿಯೋಲಾಜಿಕಲ್ ಸಂಸ್ಥೆ

ಬಲ್ಮಠ ಮಂಗಳೂರು

ಜುಲೈ -೨೦೧೪

ಉಡುಪಿ ತಾಲೂಕಿನ ಮೊಗವೀರ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಒಂದುಅಧ್ಯಯನ

ಕನ್ನಡ ವಿಶ್ವವಿದ್ಯಾನಿಲಯ (ಅಭಿವೃದ್ಧಿಅಧ್ಯಯನ) ಹಂಪಿಗೆ ಎಂ.ಫಿಲ್
ಪದವಿಗಾಗಿ ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು

ಹರಿಣಾಕ್ಷಿ

ನೋಂದಣಿ ಸಂಖ್ಯೆ: ಕೆಟಿಎಸ್ಎಂಡಿಎಸ್೦೦೬೯೪

ಮಾರ್ಗದರ್ಶಕರು

ಡಾ. ದುಗ್ಗಪ್ಪಕಜೆಕಾರ್
ವಿಭಾಗ ಮುಖ್ಯಸ್ಥರು ಸಮಾಜಕಾರ್ಯ ಸ್ನಾತಕೋತ್ತರ ವಿಭಾಗ
ಸರಕಾರಿ ಪ್ರಥಮದರ್ಜೆಕಾಲೇಜು ಮತ್ತು
ಸ್ನಾತಕೋತ್ತರಅಧ್ಯಯನಕೇಂದ್ರ,
ತೆಂಕನಿಡಿಯೂರು, ಉಡುಪಿ.

ಅಧ್ಯಯನಕೇಂದ್ರ
ಕರ್ನಾಟಕಥಿಯೋಲಾಜಿಕಲ್ ಸಂಸ್ಥೆ
ಬಲ್ಮಠ – ಮಂಗಳೂರು

ಜುಲೈ –೨೦೧೪

1145

ಅಭ್ಯರ್ಥಿಯದೃಢೀಕರಣಪತ್ರ

ಉಡುಪಿ ತಾಲೂಕಿನ ಮೊಗವೀರ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಒಂದುಅಧ್ಯಯನ ಎಂಬ ಪ್ರಬಂಧವನ್ನು ಡಾ.ದುಗ್ಗಪ್ಪಕಜೆಕಾರ್‌ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಅಭಿವೃದ್ಧಿ ಅಧ್ಯಯನ ವಿಭಾಗಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೇ ಪೂರ್ಣವಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Harinakshi

ಹರಿಣಾಕ್ಷಿ

ಸ್ಥಳ: ಉಡುಪಿ.

ದಿನಾಂಕ:

ದೃಢೀಕರಣಪತ್ರ

ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಇಲ್ಲಿಗೆ ಅರ್ಪಿಸುತ್ತಿರುವ **'ಉಡುಪಿ ತಾಲೂಕಿನ ಮೊಗವೀರ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಒಂದು ಅಧ್ಯಯನ'** ಎಂಬ ಎಂ.ಫಿಲ್. ಪ್ರಬಂಧವನ್ನು ಶ್ರೀಮತಿ ಹರಿಣಾಕ್ಷಿ ಅವರು ನನ್ನ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ಸಿದ್ಧಪಡಿಸಿದ್ದಾರೆಂದು ದೃಢೀಕರಿಸುತ್ತೇನೆ. ಈ ಮೊದಲು ಈ ಎಂ.ಫಿಲ್ ಪ್ರಬಂಧವನ್ನು ಭಾಗಶ:ವಾಗಿಯಾಗಲಿ, ಪೂರ್ಣವಾಗಿಯಾಗಲಿ ಯಾವುದೇ ವಿಶ್ವ ವಿದ್ಯಾನಿಲಯದ ಪದವಿ ಅಥವಾ ಡಿಪ್ಲೊಮಾ ಗಳಿಸಲು ಯಾವ ಭಾಷೆಯಲ್ಲೂ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: **ಉಡುಪಿ**
ದಿನಾಂಕ:

ಡಾ. ದುಗ್ಗಪ್ಪ ಕಜೆಕಾರ್
ವಿಭಾಗ ಮುಖ್ಯಸ್ಥರು ಸಮಾಜಕಾರ್ಯ ಸ್ನಾತಕೋತ್ತರ ವಿಭಾಗ
ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು
ಸ್ನಾತಕೋತ್ತರ ಅಧ್ಯಯನ ಕೇಂದ್ರ,
ತೆಂಕನಿಡಿಯೂರು, ಉಡುಪಿ.

Dr. DUGGAPPA KAJEKAR
Coordinator
Department of P.G. Studies in Social Work
Govt. First Grade College
Thenkanidiyur, Udupi - 576 106

ಪರಿವಿಡಿ

ಕೋಷ್ಟಕಗಳ ಪಟ್ಟಿ

ಅಧ್ಯಾಯ - ೧

ಅಧ್ಯಾಯ ೧

ಉಡುಪಿ ತಾಲೂಕಿನ ಮೊಗವೀರ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಒಂದು ಅಧ್ಯಯನ

ಪೀಠಿಕೆ

ಕರ್ನಾಟಕದ ಕರಾವಳಿಯು ಸುಮಾರು ೩೨೦ ಕಿ.ಮೀ ಉದ್ದವಿದ್ದು, ಇದು ಭಾರತದ ಕಡಲ ತೀರದ ಸುಮಾರು ೧/೫ ರಷ್ಟಿದೆ ಎನ್ನಬಹುದು. ಕರ್ನಾಟಕದಲ್ಲಿ ಮೀನುಗಾರಿಕೆಯು ಬೇಸಾಯದಂತೆ ಅತ್ಯಂತ ಪ್ರಮುಖ ಉದ್ಯೋಗವಾಗಿದೆ. ಉತ್ತರದ ಕಾರವಾರದಿಂದ ದಕ್ಷಿಣದ ಉಳ್ಳಾಲದವರೆಗಿನ ಕರಾವಳಿಯ ಭೂ ಭಾಗವು ಮೀನುಗಾರಿಕೆಗೆ ಅತ್ಯಂತ ಪ್ರಶಸ್ತವಾದ ನೆಲವೆಂದು ಖ್ಯಾತಿಯಿದೆ.

ಉಡುಪಿ ಜಿಲ್ಲೆಯಲ್ಲಿ ಸುಮಾರು ೧೦೮ ಕಿ.ಮೀ ಕರಾವಳಿ ತೀರವಿದ್ದು, ಕಡಲ ಮೀನುಗಾರಿಕೆಯು ಪ್ರಾಮುಖ್ಯವಾದ ಉದ್ಯಮವಾಗಿದೆ. ಉಡುಪಿ ಜಿಲ್ಲೆಯ ಕರಾವಳಿ ತಾಲೂಕುಗಳಾದ ಉಡುಪಿ, ಕುಂದಾಪುರ ಹಾಗೂ ಒಳನಾಡು ತಾಲೂಕು ಕಾರ್ಕಳವನ್ನು ಒಳಗೊಂಡಿರುತ್ತದೆ. ಮೀನುಗಾರಿಕೆಯು ಪೌಷ್ಟಿಕ ಆಹಾರ ಮತ್ತು ವಿದೇಶಿ ವಿನಿಮಯದ ಒಂದು ಪ್ರಮುಖ ಸಂಪನ್ಮೂಲವಾಗಿರುವುದರಿಂದ, ಉಡುಪಿ ಜಿಲ್ಲೆಯ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಉಡುಪಿ ಜಿಲ್ಲೆಯಲ್ಲಿ ಅಂದಾಜು ೧,೯೯,೯೫೩ ಮೀನುಗಾರರು ಇದ್ದು, ಅವರಲ್ಲಿ ಸುಮಾರು ೬೧,೨೭೪ ಜನರು ಮಾತ್ರ ವೃತ್ತಿಪರರಾಗಿದ್ದಾರೆ. ಪ್ರಸ್ತುತ ಜಿಲ್ಲೆಯಲಿ ಸುಮಾರು ೮೬ ಪರ್ಸೀನ್ ದೋಣಿಗಳು, ೧೧೯೯ಟ್ರಾಲರ್ ದೋಣಿಗಳು, ೨,೭೨೨ ಮೋಟರೀಕೃತ ದೋಣಿಗಳು ಹಾಗೂ ೧೫೨೬ ಯಾಂತ್ರೀಕೃತವಲ್ಲದ ನಾಡದೋಣಿಗಳು ಮೀನುಗಾರಿಕೆಯಲ್ಲಿ ಕಾರ್ಯನಿರತವಾಗಿವೆ. ಉಡುಪಿ ಜಿಲ್ಲೆಯಲ್ಲಿ ಸುಮಾರು ೬೪ ಮೀನುಗಾರಿಕಾ ಗ್ರಾಮಗಳಿದ್ದು ಅದರಲ್ಲಿ ೧,೯೯,೯೫೩ ಮೀನುಗಾರರು ವಾಸಿಸುತ್ತಿದ್ದಾರೆ. ಅದರಲ್ಲಿ ಸುಮಾರು ೪೫,೫೫೧ ಮೀನುಗಾರರು ಪೂರ್ಣಕಾಲ ಹಾಗೂ ೧೮,೨೨೦ ಮೀನುಗಾರರು ಭಾಗಶ: ಮೀನುಗಾರಿಕಾ ಮತ್ತು ಮೀನು ಮಾರಾಟ ವೃತ್ತಿಯಲ್ಲಿ ನಿರತರಾಗಿರುತ್ತಾರೆ.ಪ್ರಸ್ತುತ ಉಡುಪಿ ಜಿಲ್ಲೆಯಲ್ಲಿ ೫೦ ಮೀನುಗಾರರ ಸಹಕಾರಿ ಸಂಘಗಳಿದ್ದು, ಅವುಗಳಲ್ಲಿ ೧೫ ಮೀನುಗಾರ ಮಹಿಳೆಯರ ಸಹಕಾರಿ ಸಂಘಗಳಿವೆ. ಇದರಲ್ಲಿ ೧ ಪರಿಶಿಷ್ಟ ಜಾತಿ ಮೀನುಗಾರರ ಮಹಿಳೆಯರ ಸಹಕಾರಿ ಸಂಘ ಕೂಡ ಸೇರಿರುತ್ತದೆ. ಇದರಲ್ಲಿ ೬೭೨೪೬ ಸದಸ್ಯರಿದ್ದು ಈ ಪೈಕಿ ೨೨೬೦ ಸದಸ್ಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮೀನುಗಾರರಾಗಿರುತ್ತಾರೆ.

ಭಾರತದಲ್ಲಿ ಮಹಿಳೆಯರ ಸ್ಥಾನಮಾನಗಳ ಏರಿಳಿತಗಳನ್ನು ಕುರಿತು ಚಿಂತನೆ, ವಿಶ್ಲೇಷಣೆ ಮತ್ತು ಬರಹಗಳು ಹೆಚ್ಚಾಗುತ್ತಿವೆ. ಕಳೆದ ದಶಕಗಳಲ್ಲಿ ಮಹಿಳೆಯರ ಸ್ಥಾನಮಾನದಲ್ಲಿ ಬದಲಾವಣೆಗಳಾಗಿದ್ದು, ಇದಕ್ಕೆ ಮುಖ್ಯವಾಗಿ ಶಿಕ್ಷಣವೇ ಕಾರಣವಾಗಿದೆ. ಆದರೂ ಸಹ ಹಿಂದುಳಿದ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳನ್ನು ಪಡೆಯುವ ಕನಸು ನನಸಾಗದೇ ಉಳಿದಿರುವುದು ಸಮಕಾಲೀನ ಸಾಮಾಜಿಕ ಸತ್ಯಗಳಲ್ಲಿ ಒಂದು.ಸಮಾಜ ಎಂದರೆ ಸಾಮಾಜಿಕ ಸಂಬಂಧಗಳ ಬಲೆ. ಈ ಸಮಾಜದ ಒಟ್ಟು ಜೀವನ ಶೈಲಿಯನ್ನು ಪ್ರತಿಬಿಂಬಿಸುವ ಒಂದು ವ್ಯವಸ್ಥೆಯಾದ ಸಂಸ್ಕೃತಿಯಲ್ಲಿ ಭೌತಿಕ ಮತ್ತು ಅಭೌತಿಕ ಅಂಶಗಳೆರಡೂ ಸೇರಿದ್ದು, ಸಾಮಾಜಿಕ ವ್ಯವಸ್ಥೆಯಲ್ಲಿ ಮಾರ್ಪಾಡುಗಳು ಉಂಟಾಗುತ್ತಿವೆ.

ಮೊಗವೀರ ಸಮುದಾಯದ ಮಹಿಳೆಯರನ್ನು ಕುರಿತು ಸಾಮಾಜಿಕ ಚಿತ್ರಣಗಳು, ಅವರ ಸಾಂಸ್ಕೃತಿಕ ವ್ಯವಸ್ಥೆಯ ನಿರ್ಮಾಣವಾಗಿದೆ. ಸಮಾಜವು ಮಹಿಳೆಯರ ಸ್ಥಾನಮಾನವನ್ನು ಮೃದು ಸ್ವಭಾವ, ಅಧೈರ್ಯ, ಸ್ಥಿರತೆ, ಹೊಟ್ಟೆಕಿಚ್ಚು ಇಂತಹ ದೃಷ್ಟಿಕೋನಗಳಿಂದ ಪ್ರಭಾವಿಸಿಕೊಳ್ಳುತ್ತದೆ. ಮೊಗವೀರರ ಸಾಂಸ್ಕೃತಿಕ, ಧಾರ್ಮಿಕ ಆಚರಣೆಗಳಲ್ಲಿ ಮಹಿಳೆಗೆ ಮುಖ್ಯ ಸ್ಥಾನವನ್ನು ನೀಡಲಾಗಿದೆ. ಹೆಣ್ಣನ್ನು ಭೂಮಿಗೆ ಹೋಲಿಸುವ ಮತ್ತು ಗೌರವಿಸುವ ಪರಂಪರೆ ಇವರಲ್ಲಿದೆ. ಬುಡಕಟ್ಟು ಸಮುದಾಯದಲ್ಲಿ ಇರುವಂತೆ ಮೊದಲ ಮಗು ಹೆಣ್ಣಾದರೆ ಅದು ಸಮೃದ್ಧಿಯ ಸಂಕೇತ ಎಂಬ ನಂಬಿಕೆ ಮೊಗವೀರರದು. ಹೆಣ್ಣಿನ ಸೌಂದರ್ಯ,ಸ್ವಭಾವ, ಲಕ್ಷಣ, ಧೈರ್ಯ,ಆತ್ಮವಿಶ್ವಾಸ ಕುರಿತಾದ ಅನೇಕ ಹಾಡು, ಜನಪದ ಕಥೆಗಳು ಇವರ ಸಾಹಿತ್ಯದಲ್ಲಿವೆ. ಇಷ್ಟೆಲ್ಲಾ ಸ್ಥಾನಮಾನಗಳನ್ನು ಇವರಿಗೆ ನೀಡಿದ್ದರೂ ಬಡತನದ ಕಾರಣದಿಂದ ದುಸ್ಥಿರವಾಗಿರುವ ಜೀವನದಲ್ಲಿ ಶೈಕ್ಷಣಿಕವಾಗಿ ಮಹಿಳೆ ಅತ್ಯಂತ ಹಿಂದುಳಿದಿದ್ದಾಳೆ.೨೦-೩೦ ವರ್ಷಗಳ ಹಿಂದೆ ಪುರುಷರು ಹಿಡಿದು ತರುವ ಮೀನುಗಳನ್ನು ಬುಟ್ಟಿಯಲ್ಲಿ ಹೊತ್ತು ಅಕ್ಕ-ಪಕ್ಕದ ಊರುಗಳಲ್ಲಿ ಮಾರಲು ಹೋಗುತ್ತಿದ್ದ ಈ ಮಹಿಳೆಯರು ಕಾಲ ಬದಲಾದಂತೆ ತಮ್ಮ ಆರ್ಥಿಕ ಜೀವನಕ್ಕಾಗಿ ಬೇರೆ ವೃತ್ತಿಗಳನ್ನು ಅನುಸರಿಸತೊಡಗಿದರು.

ಇತ್ತೀಚಿನ ದಿನಗಳಲ್ಲಿ ಮೀನುಗಾರಿಕೆ ವೃತ್ತಿಗೆ ತೆರಳುವುದನ್ನು ವಿರೋಧಿಸಿ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವ ಉದ್ದೇಶವನ್ನು ಮೊಗವೀರ ಮಹಿಳೆಯರು ಹೊಂದಿರುವುದು ಕಂಡುಬರುತ್ತಿವೆ. ಕೆಲವೊಂದು ಮೊಗವೀರ ಕುಟುಂಬಗಳು ಹೆಣ್ಣು ಮಕ್ಕಳಿಗೆ ಶಿಕ್ಷಣದ ಬಗ್ಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿವೆ. ಮೊಗವೀರ ಸಮುದಾಯವು ಕೂಡಾ ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿವೆ. ಸಾಮಾಜಿಕ ಅಭಿವೃದ್ಧಿಯ ನಿಟ್ಟಿನಲ್ಲಿ ಶಿಕ್ಷಣದ ಅಗತ್ಯ ಹಾಗೂ ಅತ್ಯಾವಶ್ಯಕ ಎಂಬುದನ್ನರಿತ ಈ ಸಮುದಾಯ ಮಕ್ಕಳ ವಿದ್ಯಾಭ್ಯಾಸದತ್ತ ಕಾಳಜಿವಹಿಸುತ್ತಿದ್ದಾರೆ. ಮೊಗವೀರ ಸಮುದಾಯವು ಹಿಂದುಳಿದ ಸಮುದಾಯವಾಗಿದೆ. ಈ ಸಮುದಾಯದವು ಆರ್ಥಿಕವಾಗಿ ದು:ಸ್ಥಿತಿಯಲ್ಲಿದ್ದರೂ ಸರ್ಕಾರ ನೀಡುತ್ತಿರುವ ಶೈಕ್ಷಣಿಕ ಸೌಲಭ್ಯಗಳಿಂದ ಪ್ರೇರಿತರಾಗಿ ಶಿಕ್ಷಣ ಕೊಡಿಸುವತ್ತ ಮುಂದಾಗಿದ್ದಾರೆ.

ಮೊಗವೀರ ಸಮುದಾಯ:

ಕರ್ನಾಟಕದ ಬೆಸ್ತರನ್ನು ಮೊಗವೀರ, ಮರಕಾಲ (ತುಳು) ಮೊಗೇರ, ಪಟ್ಟಣದವ, ಬೋವಿ, ನಾಯಕ(ನಾವಿಕ) ಗಂಗಾಮತಸ್ಥ, ಅಂಬಿಕ, ಖಾರ್ವಿ ಮುಂತಾದ ನಾನಾ ಹೆಸರುಗಳಿಂದ ಗುರುತಿಸಲಾಗುತ್ತದೆ. ಕರಾವಳಿಯ ಕರ್ನಾಟಕದ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬೆಸ್ತರು ಹಿಂದೆ 'ಮೊಗೇರ' ಎಂಬ ಪದದಿಂದ ಗುರುತಿಸಲ್ಪಡುತ್ತಿದ್ದರೆಂದು ಸ್ಟರಕ್, ಬುಚನನ್, ಥರ್ಸ್ಟನ್ ಮುಂತಾದವರ ಲೇಖನಗಳಿಂದ ತಿಳಿದುಬರುತ್ತದೆ. ಮರಕಾಲ ಎನ್ನುವುದು ಇನ್ನೊಂದು ಹೆಸರು, ಮೊಗೇರ, ಮರಕಾಲ, ಎಂಬ ಹೆಸರುಗಳ ಬಳಕೆ ವಿರಳವಾಗುತ್ತಾ ಬಂದು ಈಗ ' ಮೊಗವೀರ' ಎಂಬ ಹೆಸರೇ ಸಾರ್ವತ್ರಿಕವಾಗಿ ರೂಢಿಯಲ್ಲಿದೆ.

ಮರೆಕಾಲ-ಮರಕಲ, ಮೊಗೇರ ಎಂಬುದು ಮೊಗವೀರ ಸಮಾಜದ ಅತಿ ಪ್ರಾಚೀನವಾದ ಹೆಸರುಗಳು. ಮೊಗವೀರ ಎಂಬುದು ಮೊಗೇರ ಪದದ ಪರಿಷ್ಕೃತ ನಾಮ. ಮೊಗೇರ ಪದದ ನಿಷ್ಪತ್ತಿಯ ಬಗ್ಗೆ ಅನೇಕ ಊಹಾಪೋಹಗಳಿವೆ.

'ಮೊ' ಅಂದರೆ ನೀರು, 'ಗೇರ್' ಎಂದರೆ ಗೆದ್ದವ- ಮೊಗೇರ್ ಅಂತ ಒಬ್ಬರು ಮೊಗವೀರರು ಹೇಳಿದರೆ, ಮರಿಗಿ ಅತೀ ಪ್ರಾಚೀನವಾದ ಪುಟ್ಟ ದೋಣಿ, ಮರಿಗಿಯವರೇ ಮೊಗೇರರು ಅಂತ.ಮೊಗೆ ಎಂಬುದಕ್ಕೆ ಕಿಟ್ಟೆಲ್ ಕೋಶದಲ್ಲಿ **" ಎ ಸ್ಮಾಲ್ ಎರ್ಥನ್ ವೆಸೆಲ್ ಫಾರ್ ಲೇಡಿಂಗ್ ಔಟ್ ಪುಟಬೇಧ''** ಎಂಬ ಅರ್ಥ ಕೊಡಲಾಗಿದೆ.ಬುಚನನು ತನ್ನ ಗ್ರಂಥದಲ್ಲಿ ಮೊಗೇರರನ್ನು ಮೊಗೆಯರ್ ಎಂದು ಕರೆದಿರುವನು. ಮಲೆಯಾಳದಲ್ಲಿ ಮುಕವರ್ ಎಂಬ ಪದಕ್ಕೆ ನೀರನ್ನು ಮೊಗೆದು ತೆಗೆಯುವವರು ಎಂಬ ಅರ್ಥವಿದೆ.ಮೊಗೆ ಎಂಬ ಮೂಲಧಾತು ಕನ್ನಡದಲ್ಲೂ ಅದೇ ಅರ್ಥದಲ್ಲಿ ಬಳಕೆಯಲ್ಲಿದೆ.ಅಂತೂ ನೀರನ್ನು ಮೊಗೆಯುವವರು ನೀರನ್ನು ಮೊಗೆದು ಮೀನನ್ನು ತೆಗೆಯುವವರು ಎಂಬ ಅರ್ಥದ ವ್ಯಾಪ್ತಿಯಲ್ಲಿ ಮೊಗೇರ ಪದವು ಹುಟ್ಟಿದೆ.

ಮೊಗವೀರರ ವಾಸಸ್ಥಳಕ್ಕೆ ಪಟ್ನ ಎಂಬ ಹೆಸರು ಇರವುದರಿಂದ ಅವರನ್ನು "ಪಟ್ನದವರು" ಎಂದು ಕರೆಯುವ ರೂಢಿ ಬಂದಿದೆ. ಹಾಗೆಯೇ ನಾಯಕ ಎಂಬುದು ನಾವಿಕ ಪದದ ಜನ್ಯ ರೂಪ, ನಾಯಕ್ ಎಂಬುದು ಈಗ ಉಪನಾಮವಾಗಿಯೂ ರೂಢಿಯಲ್ಲಿದೆ. ಪುರಾಣ ಕಾಲದ ದಶರಾಜನ ಸಂತತಿಯವರು ಎಂಬರ್ಥದಲ್ಲಿ **'ದಾಶ'** ಎಂಬ ಹೆಸರು ಬಂದಿದೆ.

ಭೋರ್ಗರೆವ ಕಡಲು, ಸರ್ಪದ ಹೆಡೆಯಂತೆ, ದಡಕ್ಕೆ ಅಪ್ಪಳಿಸುವ ತೆರೆಗಳು, ಆಳ ಅಗಲ ಅರಿಯದ ನೀರ ಪ್ರವಾಹ, ಅನಿರೀಕ್ಷಿತ ಬಿರುಗಾಳಿಯ ಭಯ, ಇಂತಹ ಕಡಲನ್ನು ದುಡಿಮೆಯ ಅಂಗಳವಾಗಿ ಮಾಡಿಕೊಂಡ ಬೆಸ್ತರ ಬದುಕು ನಿಜಕ್ಕೂ ಸಾಹಸಮಯ. ಪ್ರಪಂಚದುದ್ದಕ್ಕೂ ಬೆಸ್ತ ಬದುಕಿನ ಪರಂಪರೆಯಿದೆ. ಮಾನವನ ವೃತ್ತಿ ಜೀವನಕ್ಕೆ ಮಣ್ಣಿನಂತೆ ಕಡಲೂ ಒಂದು ಆಸರೆ. ಕಡಲಿನ ಆಹಾರ ಉತ್ಪನ್ನ ನಮ್ಮ ದೇಶವನ್ನು ಅತ್ಯಂತ ಸಮೃದ್ಧವನ್ನಾಗಿ ಮಾಡಿದೆ.ದೇಶದ ಜನಸಂಖ್ಯೆಯಲ್ಲಿ ೨/೫ರಷ್ಟು ಜನರು ಮೀನುಗಾರಿಕೆಯನ್ನೇ ಅವಲಂಬಿಸಿ ಜೀವನ ಮಾಡುತ್ತಿದ್ದಾರೆ. ಮೀನುಗಾರಿಕೆ ನಮ್ಮ ರಾಷ್ಟ್ರದ ಅತಿ ದೊಡ್ಡ ಉದ್ಯಮವೆನ್ನಬಹುದು. ಮೂರು ಭಾಗವೂ ಸಮುದ್ರದಿಂದ ಆವೃತ್ತವಾಗಿದ್ದು, ಒಂದು ಪರ್ಯಾಯ ದ್ವೀಪವೆನಿಸಿದ ಭಾರತದಲ್ಲಿ ಮೀನುಗಾರಿಕೆಗೆ ಸಾಕಷ್ಟು ಅವಕಾಶಗಳಿವೆ.

ಫ್ರಾನ್ಸಿಸ್ ಬುಚನನ್- "ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರರನ್ನು ಮೊಗೆಯರ್ ಎಂದೂ ಅವರು ತುಳು ಮಾತಾನಾಡುವವರೆಂದೂ ತನ್ನ ಯಾತ್ರಾವರದಿಯಲಿ ತಿಳಿಸಿರುವನ್ನು. ಅಲ್ಲದೆ ಅವರು ಮಲಯಾಳ ಮಾತಾಡುವ ಮುಕುವರನ್ನು ಹೋಲುವರಾದರೂ ಮುಕುವರಿಗೂ ಮೊಗೆಯರಿಗೂ ಯಾವುದೇ ಸಂಬಂಧ ಇಲ್ಲವೆಂದೂ ತಿಳಿಸಿರುವನು".

ಎಡ್ಗರ್‌ಥರ್ಸ್ಟನನು–"ದಕ್ಷಿಣ ಕನ್ನಡ ಜಿಲ್ಲೆಯ ಮೊಗೇರರು ತುಳು ಮಾತಾಡುವವರು ಹೆಚ್ಚಿನವರು ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುವವರು. ಆದರೆ ಜಿಲ್ಲೆಯ ಉತ್ತರ ಭಾಗದಲ್ಲಿ ವಾಸಿಸುವವರು ಕನ್ನಡ ಮಾತೃಭಾಷೆಯವರು ಮತ್ತು ಮಕ್ಕಳ ಸಂತಾನ ಪದ್ಧತಿಯನ್ನು ಅನುಸರಿಸುವವರು ಎಂದಿದ್ದಾನೆ".

ಜೆ. ಸ್ಟರಕ್-"ಮೊಗೇರರು ದೀರ್ಘ ಸುಂದರಕಾಯರು ಮತ್ತು ಧೈರ್ಯಶಾಲಿಗಳು ಅವರು ವೈಷ್ಣವರಾಗಿದ್ದು, ತಿರುಪತಿ ವೆಂಕಟರಮಣ ದೇವರನ್ನು ವಿಶೇಷ ಭಕ್ತಿಯಿಂದ ಪೂಜಿಸುತ್ತಾರೆ. ಪ್ರತಿ ವರ್ಷದ ಹೊಸಕ್ಕಿಯೂಟದ ಸಮಾರಂಭಕ್ಕಿಂತ ಮೊದಲು ತಿರುಪತಿ ದೇವರಿಗೆ ಕಾಣಿಕೆ ಸಲ್ಲಿಸುತ್ತಾರೆ. ಆದರೆ ಅವರ ಮುಖ್ಯ ಕುಲದೇವರ ಮಾಸ್ತಮ" ಎನ್ನುತ್ತಾರೆ.

ಕರ್ನಾಟಕ ಸ್ಟೇಟ್‌ಗಜೆಟಿಯರಿನಲ್ಲಿ "ಮೊಗವೀರರ ಪರಂಪರಾಗತ ವೃತ್ತಿಯು ಮೀನು ಗಾರಿಕೆಯಾಗಿದೆ. ಜಿಲ್ಲೆಯ ಪ್ರಧಾನ ಮೀನುಗಾರರೂ ಮತ್ತು ನಾವಿಕರೂ ಆಗಿರುವ ಅವರು ಹೆಚ್ಚಾಗಿ ಕಡಲ ತೀರದಲ್ಲೇ ನೆಲೆಸಿರುತ್ತಾರೆ. ಅಳಿಯ ಸಂತಾನ ಪದ್ಧತಿಯನ್ನು ಅವಲಂಬಿಸಿರುವ ಮೊಗವೀರರ ಅನೇಕ ಬಳಿಗಳಿವೆ. ವಿದ್ಯಾವಂತರಾದ ಕೆಲವು ಮೊಗವೀರರು ಮಾತ್ರ ಬೇರೆ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ" ಎಂದು ವಿವರಿಸಿದೆ.

ಬುಚನನ್ ಅವರ ಗ್ರಂಥವಾದ **"ಗಜೆಟಿಯರ್ ಆಫ್ ಇಂಡಿಯಾ ಸೌತ್ ಕೆನರಾ"**ದಲ್ಲಿ- "ಮೊಗವೀರರು ತುಳು ಜನರು. ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಾರೆ ಎಂದೂ ಉಲ್ಲೇಖಿಸಿದ್ದಾರೆ. ಅಂದರೆ ಪಾರಂಪರಿಕವಾಗಿ ತಾಯಿಯಿಂದ ತಾಯಿಯ ಮಗಳಿಗೆ ಅಥವಾ ಮಾವನಿಂದ ತಂಗಿಯ ಮಗನಿಗೆ ವರ್ಗಾಯಿಸಲ್ಪಡುತ್ತದೆ" ಎಂದು ವಿವರಿಸಲಾಗಿದೆ.

ಸಮಸ್ಯೀಕರಣ

ಮೊಗವೀರ ಮಹಿಳೆಯರ ಬಗ್ಗೆ ಹಲವಾರು ಅಧ್ಯಯನಗಳು ಈಗಾಗಲೇ ನಡೆದಿವೆ. ಬಹುತೇಕ ಅಧ್ಯಯನಗಳು ಮಹಿಳೆಯರ ಸಾಮಾಜಿಕ ಸ್ಥಾನಮಾನ, ಸಾಮಾಜಿಕ ಬದಲಾವಣೆ ಹಾಗೂ ಸಮಸ್ಯೆಗಳ ಬಗ್ಗೆ ಗಮನ ಹರಿಸಿವೆ. ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಯಲ್ಲಿ ಮೊಗವೀರ ಸಮುದಾಯದ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ಶಿಕ್ಷಣ ಮತ್ತು ಆರ್ಥಿಕ ಸುಸ್ಥಿತಿಯು ಮೊಗವೀರ ಮಹಿಳೆಯರಲ್ಲಿ ಸಬಲೀಕರಣ ತರುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಇತರ ಸಮುದಾಯದ ಮಹಿಳೆಯರಿಗಿಂತ ಮೊಗವೀರ ಮಹಿಳೆಯರ ಹೇಗೆ ಭಿನ್ನವಾಗಿದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗುವುದು.ಜೊತೆಗೆ ಪರಿಸ್ಥಿತಿ ಅವರು ಎದುರಿಸುತ್ತಿರುವ ಅಭಿವೃದ್ಧಿಯ ಸಮಸ್ಯೆಗಳು, ಮಹಿಳಾ ಮೀಸಲಾತಿ ಹಾಗೂ ಇತರ ಸರಕಾರಿ ಸವಲತ್ತುಗಳ ನೆಲೆಯಲ್ಲಿ ಅವರ ಭಾಗವಹಿಸುವಿಕೆಯ ಕುರಿತು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗುವುದು.

ಹೀಗೆ ಅನೇಕ ಮೊಗವೀರ ಮಹಿಳೆಯರ ಕುರಿತಾಗಿ ಹುಟ್ಟುವ ಅನೇಕ ಸಾಮಾಜಿಕ ಹಾಗೂ ಆರ್ಥಿಕ ಪರಿಕಲ್ಪನೆಯ ನಾನಾ ಪ್ರಶ್ನೆಗಳನ್ನು ಉತ್ತರಿಸಲು ನಡೆಸುವ ಪ್ರಯತ್ನವೇ ಈ ಅಧ್ಯಯನ.

ಸಾಹಿತ್ಯ ವಿಮರ್ಶೆ

ಶಶಿಕಲಾ ಇವರು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್ ಸಂಶೋಧನಾ ಪ್ರಬಂಧ **"ಮೊಗವೀರ ಸಮುದಾಯದ ಮಹಿಳೆಯರ ಶೈಕ್ಷಣಿಕ ಸಾಧನೆಗಳ ನಿರ್ಧಾರಕಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ"**, ೨೦೧೦ ರ ಪ್ರಬಂಧದಲ್ಲಿ ಪ್ರಸ್ತುತ ಮೊಗವೀರ ಸಮುದಾಯದಲ್ಲಿರುವ ಶಿಕ್ಷಣದ ಪ್ರಮಾಣ, ಮೊಗವೀರರು ತಮ್ಮ ಮಕ್ಕಳಿಗೆ ಕೊಡಲು ಬಯಸುವ ಶಿಕ್ಷಣದ ಅಪೇಕ್ಷೆ, ಪುರುಷ ಮತ್ತು ಸ್ತ್ರೀಯರ ಮಧ್ಯೆ ಇರುವ ಶೈಕ್ಷಣಿಕ ವ್ಯತ್ಯಾಸ, ಮಹಿಳಾ ಶಿಕ್ಷಣಕ್ಕೆ ಮೊಗವೀರರು ಕೊಡುತ್ತಿರುವ ಪ್ರಾಮುಖ್ಯತೆ,ಸರಕಾರಿ ಶಾಲೆಗಳ ಬಗ್ಗೆ ಮೊಗವೀರರಿಗೆ ಇರುವ ಧೋರಣೆ, ಶಿಕ್ಷಣದಿಂದಾಗಿ ಮಹಿಳಾ ಸ್ಥಾನಮಾನದಲ್ಲಿ ಆಗಿರುವ ಬದಲಾವಣೆ ಇತ್ಯಾದಿಗಳ ಕುರಿತಾಗಿ ವಿಶ್ಲೇಷಿಸಿದ್ದಾರೆ. ಅವರ ಪ್ರಕಾರ ಇತ್ತೀಚಿನ ದಿನಗಳಲ್ಲಿ ಪುರುಷರಷ್ಟು ಮಹಿಳಾ ಶಿಕ್ಷಣಕ್ಕೂ ಮೊಗವೀರರು ಆದ್ಯತೆ ನೀಡುತ್ತಿದ್ದಾರೆ.ಶಿಕ್ಷಣದಿಂದಾಗಿ ಮೊಗವೀರ ಸಮುದಾಯದಲ್ಲಿ ಮಹಿಳಾ ಅಂತಸ್ತು ಶೇಕಡಾ ೯೭ರಷ್ಟು ಬದಲಾವಣೆಯಾಗಿದೆ ಎಂಬುದನ್ನು ತಮ್ಮ ಪ್ರಬಂಧದಲ್ಲಿ ದಾಖಲಿಸಿದ್ದಾರೆ.

ಅನಿತಾ, ೨೦೧೧ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಕೋರ್ಸಿನ ಭಾಗವಾಗಿ ಸಲ್ಲಿಸಿದ **"ಎ ಸ್ಟಡಿ ಓನ್ ಸ್ಟೇಟಸ್ ಆಫ್ ಮೊಗವೀರ ಕಮ್ಯೂನಿಟಿ ಇನ್‌ವಾಲ್ವಿಂಗ್ ಇನ್ ಫಿಶಿಂಗ್ ಇನ್ ಮಲ್ಪೆ"**, ಎಂಬ ಪ್ರಬಂಧದಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೊಗವೀರ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಕುರಿತಾಗಿ ಅಧ್ಯಯಿಸಿದ್ದಾರೆ. ಅವರ ಪ್ರಬಂಧದಲ್ಲಿ ಮೊಗವೀರ ಮನೆಗಳಿಗಿರುವ ಸವಲತ್ತುಗಳು, ಮೊಗವೀರರ ಆಸ್ತಿ, ಮೊಗವೀರರ ಉಳಿತಾಯ, ಸ್ವಸಹಾಯ ಗುಂಪುಗಳಲ್ಲಿ ಮೊಗವೀರರ ಪಾತ್ರ, ಮೀನುಗಾರಿಕೆಯಲ್ಲಿ ಮೊಗವೀರರು ಎದುರಿಸುತ್ತಿರುವ ಸಮಸ್ಯೆಗಳು, ಮೊಗವೀರ ಸಂಘಟನೆಗಳು, ಮೊಗವೀರ ಮಹಿಳೆಯರಿಗೆ ಶಿಕ್ಷಣ ಪಡೆಯುವ ಸ್ವಾತಂತ್ರ್ಯ, ಸರಕಾರಿ ಮೀಸಲಾತಿ, ಮೊಗವೀರ ಸಂಘಟನೆಗಳು ಸಮುದಾಯದ ಶೈಕಣಿಕ ಪ್ರಗತಿಗೆ ನೀಡಿರುವ ಕೊಡುಗೆ ಇತ್ಯಾದಿಗಳ ಕುರಿತಾಗಿ ಅಧ್ಯಯನ ನಡೆಸಿದ್ದಾರೆ. ಮಲ್ಪೆ ಪ್ರದೇಶದ ಮೊಗವೀರ ವಿದ್ಯಾರ್ಥಿಗಳಿಗೆ ಜಾತಿ ಸಂಘಟನೆಗಳು ವಿವಿಧ ರೀತಿಯಲ್ಲಿ ಸಹಕರಿಸುತ್ತಿರುವುದನ್ನು ಪ್ರಬಂಧದಲ್ಲಿ ವಿಶ್ಲೇಷಿಸಿದ್ದಾರೆ.

ಸುಪ್ರೀತಾ ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಕೋರ್ಸಿನ ಭಾಗವಾಗಿ **"ಸೋಶಿಯೋ-ಎಕಾನಮಿಕ್ ಕಂಡೀಷನ್ಸ್ ಆಫ್ ಖಾರ್ವಿ ಕಮ್ಯೂನಿಟಿ ಎ ಸ್ಟಡಿ ಇನ್ ಕುಂದಾಪುರ ತಾಲೂಕು"** ೨೦೧೨ ರ ಪ್ರಬಂಧದಲ್ಲಿ ಕುಂದಾಪುರ ತಾಲೂಕಿನ ಮೀನುಗಾರಿಕಾ ಸಮುದಾಯವಾದ ಖಾರ್ವಿ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತಾಗಿ ಅಧ್ಯಯನ ನಡೆಸಿದ್ದಾರೆ. ಕುಂದಾಪುರ ಪ್ರದೇಶದ ಮೀನುಗಾರಿಕೆಯಲ್ಲಿ ಶಿಕ್ಷಣದ ಮಟ್ಟ ಶೇಕಡಾ ೬೫ ರಷ್ಟಿದ್ದು ಬಹುತೇಕ ಕುಟುಂಬಗಳು ಮೀನುಗಾರಿಕೆಯಲ್ಲಿ ತೊಡಗಿದೆ.ಶಿಕ್ಷಣದಲ್ಲಿ ಬಹುಪಾಲು ಮಂದಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಗಳಿಸಿದ್ದು ಅವರು ಪಡೆದ ಶಿಕ್ಷಣದ ಬಗ್ಗೆ ತೃಪ್ತಿಯನ್ನು ವ್ಯಕ್ತ ಪಡಿಸಿರುತ್ತಾರೆ. ತಲೆಮಾರುಗಳ ಮಧ್ಯೆ ಇರುವ ಸಂಬಂಧ ಕುರಿತಾಗಿ ಅಧ್ಯಯನ ನಡೆಸಿರುವ ಸುಪ್ರೀತಾರವರು ಕಿರಿಯರು ಹಿರಿಯರಿಗೆ ವಿಧೇಯರಾಗಿದ್ದಾರೆ ಎಂದು ದಾಖಲಿಸಿದ್ದಾರೆ. ಖಾರ್ವಿ ಸಮುದಾಯದಲ್ಲಿ ಪಾಶ್ಚಾತ್ಯ ಸಾಂಸ್ಕೃತಿಕ ಪ್ರಭಾವ ಶೇಕಡಾ ೬೫ ರಷ್ಟಿದೆ ಎಂದು ವಿಶ್ಲೇಷಿಸಿದ್ದಾರೆ. ಆರ್ಥಿಕವಾಗಿ ಖಾರ್ವಿ ಸಮುದಾಯದವರು ಮೊಗವೀರ ಸಮುದಾಯದಷ್ಟು ಸದೃಢವಾಗಿಲ್ಲ ಎಂದು ತಮ್ಮ ಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ.ಈ ಸಮುದಾಯದ ಪ್ರಧಾನ ಆರ್ಥಿಕ ಮೂಲ ಮೀನುಗಾರಿಕೆ.

ವೆಂಕಟರಾಜು ಪುಣಿಂಚತ್ತಾಯ, ೧೯೯೩, ರ **"ಮೊಗವೀರ ಸಂಸ್ಕೃತಿ"** ಎನ್ನುವ ಪುಸ್ತಕದಲ್ಲಿ ಮೊಗವೀರ ಸಂಸ್ಕೃತಿ, ಮೊಗವೀರ ಧಾರ್ಮಿಕತೆ, ಆರಾಧನಾ ಕ್ರಮ, ಕುಲಮಹಾಸ್ತ್ರೀ, ಮಾರಿಯಮ್ಮ, ಭೂತರಾದನೆ, ಇತ್ಯಾದಿಗಳ ಕುರಿತಾದ ವಿವರಣೆ ಇದೆ. ಈ ಪುಸ್ತಕವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ.

ಬುಚಾನಿನ ಫ್ರಾನ್ಸಿಸ್, ೧೮೦೭, ರ **"ಎ ಜರ್ನಿ ಫ್ರಮ್ ಮೆಡ್ರಸ್ ಥ್ರೂ ದ ಕಂಟ್ರೀಸ್ ಆಫ್ ಮೈಸೂರು"** ಎನ್ನುವ ಪುಸ್ತಕದಲ್ಲಿ ಮದ್ರಾಸ್ ಪ್ರಾಂತ್ಯದ ಸಮುದಾಯಗಳು ಮತ್ತು ಅವುಗಳ ಸಂಸ್ಕೃತಿ ಕುರಿತಾಗಿ ಬರೆದಿದ್ದಾರೆ. ಮೊಗವೀರ ಸಮುದಾಯದ ಕುರಿತಾಗಿ ಉಲ್ಲೇಖಿಸಿರುವ ಅವರು ಇತಿಹಾಸದುದ್ದಕ್ಕೂ ಮೊಗವೀರ ಪಾತ್ರ ಮತ್ತು ಮೊಗವೀರರಿಗಿದ್ದ ವಿವಿಧ ಹೆಸರುಗಳು ಅವರ ಸಾಂಸ್ಕೃತಿಕ ವ್ಯವಸ್ಥೆಗಳ ಕುರಿತಾಗಿ ಅಧ್ಯಯನಿಸಿದ್ದಾರೆ.

ಎಡ್ಗರ್ ಥರ್ಸ್ಟನ್, ೨೦೦೧ ರ **"ಕಾಸ್ಟಸ್ ಅಂಡ್ ಟ್ರೈಬ್ಸ್ ಅಫ್ ಸೌದರ್ನ್ ಇಂಡಿಯಾ"** ಎಂಬ ಗ್ರಂಥದಲ್ಲಿ ಮೊಗವೀರರು ದಕ್ಷಿಣ ಭಾರತದ ಜಾತಿಗಳಲ್ಲಿ ಒಂದು ಎಂದು ಉಲ್ಲೇಖಿಸಿದ್ದಾರೆ. ಈ ಗ್ರಂಥದಲ್ಲಿ ಮೊಗವೀರ ಹುಟ್ಟು ಮತ್ತು ಬೆಳವಣಿಗೆಯ ಕುರಿತಾದ ಸಂಕ್ಷಿಪ್ತ ವಿವರಣೆ ಇದೆ.

ಶಾಲಿನಿ, ೨೦೦೯ರ **"ಇಂಫ್ಯಾಕ್ಟ್ ಅಫ್ ಎಜುಕೇಶನಲ್ ಎಂಡ್ ಸೋಶಿಯಲ್ ಚೇಂಜ್ ಅಮೊಂಗ್ ಮೊಗವೀರ ವುಮೆನ್",** ವಿನಾಯಕ ಮಿಷನ್ಸ್ ಯುನಿವರ್ಸಿಟಿ, ಸೇಲಂ ತಮಿಳುನಾಡು, ಎಂಬ ಪ್ರಬಂಧದಲ್ಲಿ ಮೊಗವೀರ ಮಹಿಳೆಯರ ಮೇಲೆ ಶಿಕ್ಷಣವು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗೆ ಅವಕಾಶ ಮಾಡಿಕೊಟ್ಟ ಬಗೆಗೆ ಅಧ್ಯಯನ ನಡೆಸಿದ್ದಾರೆ. ಅವರ ಪ್ರಬಂಧದಲ್ಲಿ ಶಿಕ್ಷಣದಿಂದಾಗಿ ಮೊಗವೀರ ಮಹಿಳೆಯರು ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸಿದ ಬಗ್ಗೆ ಉಲ್ಲೇಖಿಸಿದ್ದಾರೆ. ಅದೇ ರೀತಿ ಶಿಕ್ಷಣದಿಂದಾಗಿ ಆರ್ಥಿಕ ಮೂಲಗಳ ಅರಿವು ಮತ್ತು ಆಯ್ಕೆ ಇವುಗಳ ಬಗೆಗೂ ದತ್ತಾಂಶಗಳಿವೆ. ಆರ್ಥಿಕವಾಗಿಯೂ ಮಹಿಳೆಯ ದುಡಿಮೆ ಕುಟುಂಬದ ಸಬಲೀಕರಣಕ್ಕೆ ಕಾರಣವಾದ ಬಗ್ಗೆ ಮತ್ತು ಮಹಿಳೆಯ ಉಡುಗೆ, ಪುರುಷರೊಂದಿಗೆ ಸಮಾನವಾದ ನಿರ್ಧಾರ, ಹಕ್ಕು ಪಡೆಯುತ್ತಿರುವ ಬಗ್ಗೆಯೂ ದಾಖಲಿಸಿದ್ದಾರೆ.

ಸಂಜೀವಎಸ್.ಎಮ್, ೨೦೦೮, ರ **"ಮೊಗವೀರ ಸಿಂಚನ"**ಕೃತಿಯಲ್ಲಿ ಮೊಗವೀರ ಜೀವನ ಪದ್ಧತಿ, ಸಂಪ್ರದಾಯ, ನಂಬಿಕೆಗಳು, ಆಚಾರಣೆಗಳು, ಸಂಘಟನೆಗಳು, ಗುರಿಕಾರ ವ್ಯವಸ್ಥೆ ಕುರಿತಾಗಿ ದಾಖಲಿಸಿದ್ದಾರೆ. ಅವರ ಪ್ರಕಾರ ಗುರಿಕಾರ ವ್ಯವಸ್ಥೆಯು ಮೊಗವೀರ ಪುರುಷ ಮತ್ತು ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ.

ಉಚ್ಚಿಲ ಎಸ್.ಕೆ., ಎಂಬವರು ೨೦೧೩ರಲ್ಲಿ ಬರೆದು ಪ್ರಕಟಿಸಿರುವ **"ಎ ಸ್ಟಡಿ ಓನ್ ಮೊಗವೀರ ಕಮ್ಯೂನಿಟಿ"** ಎಂಬ ಪುಸ್ತಕದಲ್ಲಿ ಮೊಗವೀರರ ಆಚರಣಾ ಪದ್ಧತಿಗಳ ಬಗ್ಗೆ ವಿವರಿಸುತ್ತಾ ಅಳಿಯ ಸಂತಾನ ಕಟ್ಟು, ಗೃಹಪ್ರವೇಶ, ವಿವಾಹ, ಸೀಮಂತ, ವಿವಾಹ ವಿಚ್ಛೇದನ, ಮಗುವಿನ ಹುಟ್ಟು, ಒಳಾಂಗಣ ಹಾಗೂ ಹೊರಾಂಗಣ ಆಟಗಳು, ಸ್ಥಳೀಯ ಕ್ರೀಡೆಗಳು, ಕಲೆ ಕೋಲ ಮತ್ತು ಮೊಗವೀರ ಸಮುದಾಯದ ಹಬ್ಬ ಹರಿದಿನಗಳ ಬಗ್ಗೆ ಬರೆದಿದ್ದಾರೆ. ಅದೇ ರೀತಿ ಉಚ್ಚಿಲರವರು ಶಿವರಾತ್ರಿ ಆಚರಣೆ, ರಥೋತ್ಸವ, ಗಡಿಯಾರ, ಮನೆ ದೈವಗಳ ತಂಬಿಲ, ಕೋಲಸೇವೆ, ಮೂಲಸ್ಥಾನಗಳಲ್ಲಿನ ವಾರ್ಷಿಕ ಪೂಜೆ, ಆಟಿದ ಅಮಾವಸ್ಯೆ, ನಾಗರ ಪಂಚಮಿ, ಗೋಕುಲಾಷ್ಟಮಿ, ಚೌತಿ, ದೀಪಾವಳಿಯ ಬಗ್ಗೆ ವಿವರವಾಗಿ ಬರೆದಿದ್ದಾರೆ. ಮೊಗವೀರ ಸಮುದಾಯದ ಉದ್ಯೋಗಗಳ ಬಗ್ಗೆ ಬರೆದಿರುವ ಕೃತಿಕಾರರು ಮೀನುಗಾರಿಕೆ, ರಂಪಣಿ, ಕೈರಂಪಣಿ, ಮೀನುಗಳ ನಾನಾ ಹೆಸರುಗಳು, ಉದ್ಯೋಗದಲ್ಲಿನ ಸಂಘಟನೆಗಳು, ಸಮಿತಿಗಳು, ಮೀನುಗಾರಿಕೆ ಹಾಗೂ ಮೀನು ವ್ಯಾಪಾರ ಮಾರುಕಟ್ಟೆಗಳು, ಮೊಗವೀರರ ಹಾಗೆಯೇ ಮೊಗವೀರ ಸಮುದಾಯದ ವ್ಯಾಪಾರಸ್ಥರ ಬಗ್ಗೆ ಇತರ ಉದ್ಯೋಗಗಳಲ್ಲಿರುವ ಮೊಗವೀರರ ಬಗ್ಗೆ ವಿವರಿಸಿರುತ್ತಾರೆ. ಮೊಗವೀರ ಸಂಘಟನೆಗಳು, ಮೊಗವೀರ ಗ್ರಾಮ ಸಭೆಗಳು, ಮೊಗವೀರ ಮಹಾಜನ ಸೇವಾಸಂಘ, ಮಹಿಳಾ ಸಂಘಟನೆಗಳು, ಮಹಿಳಾ ಸಮಾಜ, ಮೊಗವೀರರ ಧಾರ್ಮಿಕ ಸಂಘಟನೆಗಳ ಬಗ್ಗೆ ತಾಲೂಕು ಹಾಗೂ ಜಿಲ್ಲಾ ಮಟ್ಟದ ಯುವ ಸಂಘಟನೆಗಳ ಬಗ್ಗೆ ಅದೇ ರೀತಿ ಮೊಗವೀರರ ಧಾರ್ಮಿಕ ಪದ್ಧತಿಗಳಾದ ಪ್ರಕೃತಿ ಪೂಜೆ, ಆದಿ, ಭೂತಾರಾದನೆ, ಬೊಬ್ಬರ್ಯದೈವ, ಶ್ರೀ ಕುಲಾಮಹಾಸ್ತ್ರೀ ಅಮ್ಮನವರ ದೇವಾಲಯ ಬೆಣ್ಣೆಕುದ್ರು, ಮೊಗವೀರರ ಕುಲಗುರುಗಳು, ಶ್ರೀ ಮಹಾಲಕ್ಷ್ಮೀ ದೇವಾಸ್ಥಾನ, ಮೊಗವೀರರ ಮೂಲಸ್ಥಾನಗಳು, ಶ್ರೀ ಆದಿಲಕ್ಷ್ಮೀ ದೇವಸ್ಥಾನ ನಂದಳಿಕೆ, ಶ್ರೀ ಮಹಿಷಾಮರ್ದಿನಿ ದೇವಸ್ಥಾನ, ಬಗ್ವಾಡಿ, ಕುಂದಾಪುರ, ಭಜನಾ ಮಂದಿರಗಳ ಬಗ್ಗೆ ವಿಶ್ಲೇಶಿಸಿದ್ದಾರೆ.

ಅಕ್ಷತಾ ಅವರು ೨೦೧೦ ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಕೋರ್ಸಿನ ಭಾಗವಾಗಿ ಸಲ್ಲಿಸಿದ **"ಎ ಸ್ಟಡಿ ಆನ್ ಸೋಶಿಯೋ ಇಕಾನಮಿಕ್ ಪ್ರೊಬ್ಲಮ್ಸ್ ಆಫ್ ಫಿಶ್ ವೆಂಡಿಂಗ್ ಮೊಗವೀರ ವುಮೆನ್ ಇನ್ ಉಡುಪಿ ತಾಲೂಕ್",** ಎಂಬ ಸಂಶೋಧನಾ ವರದಿಯಲ್ಲಿ ಮೊಗವೀರ ಮೀನುಗಾರ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ದಾಖಲಿಸಿದ್ದಾರೆ. ಅವರ ಪ್ರಕಾರ ಮೀನುಗಾರ ಮಹಿಳೆಯರಿಗೆ ಮಾರುಕಟ್ಟೆಯಲ್ಲಿ ಸ್ಪರ್ಧೆ, ಮನೆಯಲ್ಲಿ ಮಕ್ಕಳ ಜವಾಬ್ದಾರಿ, ಮನೆಯೊಳಗಿನ ಕೆಲಸಗಳು, ಮೀನಿನ ಅಲಭ್ಯತೆ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂದು ವಿಶ್ಲೇಷಿಸಿದ್ದಾರೆ. ಮೀನಿನ ಸಾಗಾಟವೂ ಇನ್ನೊಂದು ಸಮಸ್ಯೆಯಾಗಿ ಮೊಗವೀರ ಮಹಿಳೆಯರನ್ನು ಕಾಡುತ್ತಿದೆ ಎಂದಿದ್ದಾರೆ.

ಅಧ್ಯಯನ ಕ್ಷೇತ್ರದ ಕುರಿತ ಪರಿಚಯ

ಉಡುಪಿ ತಾಲೂಕಿನ ಮೊಗವೀರ ಮಹಿಳೆಯರ ಕುರಿತ ಅಧ್ಯಯನವನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. ಮುಖ್ಯವಾಗಿ ಉಡುಪಿ ತಾಲೂಕನ್ನು ಅಧ್ಯಯನಕ್ಕಾಗಿ ಗುರುತಿಸಲು ಕಾರಣ ಮೊಗವೀರರ ಸಂಖ್ಯೆ ಈ ತಾಲೂಕಿನಲ್ಲಿ ಹೆಚ್ಚಾಗಿದೆ. ಅದಲ್ಲದೆ ಮೀನುಗಾರಿಕೆಯೂ ಉಡುಪಿ ತಾಲೂಕಿನಲ್ಲಿ ವಿಪುಲವಾಗಿದೆ. ಮಲ್ಪೆ, ಉದ್ಯಾವರ, ಬ್ರಹ್ಮಾವರ ಇತ್ಯಾದಿ ಪ್ರದೇಶಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಉಡುಪಿ ಜಿಲ್ಲೆಯಲ್ಲಿ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಅಧಿಕವಾಗಿದ್ದು, ಮಹಿಳೆಯರ ವಿವಿಧ ಸಮಸ್ಯೆಗಳ ಕುರಿತಾಗಿ ಅಧ್ಯಯನದ ನಡೆಸುವ ಅವಶ್ಯಕತೆಯಿದೆ. ಮೊಗವೀರ ಮಹಿಳೆಯರು ಹಲವು ವಿಧಧ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಮಾತ್ರವಲ್ಲದೆ ಉಳಿದ ಸಮುದಾಯದ ಮಹಿಳೆಯರಿಗಿಂತ ಭಿನ್ನವಾಗಿ ಗೋಚರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಮಹಿಳಾ ಶಿಕ್ಷಣಕ್ಕೆ ಸರಕಾರ ಮತ್ತು ಸಮುದಾಯಗಳು ಒತ್ತು ನೀಡುತ್ತಿದ್ದು, ಇದರಿಂದಾದ ಬದಲಾವಣೆಗಳನ್ನು ವಿಶ್ಲೇಷಿಸುವುದೂ ಇಂದಿನ ಅಗತ್ಯ.ಮಾತ್ರವಲ್ಲದೆ ಮಹಿಳಾ ದೌರ್ಜನ್ಯದ ಅಂಕಿ ಅಂಶಗಳೂ ದೇಶದಾದ್ಯಂತ ಗಣನೀಯವಾಗಿ ಏರಿಕೆಯಾಗುತ್ತಿದ್ದು ಸಂಶೋಧನಾ ವರದಿಗಳು ಕಾನೂನು ರಚನೆಕಾರರಿಗೆ ನೆರವಾಗಬಲ್ಲದು.

ಮೇಲಿನ ಎಲ್ಲಾ ಕಾರಣಗಳಿಗಿಂತಲೂ ಮಿಗಿಲಾಗಿ ಮೊಗವೀರರ ಕುರಿತ ಸಂಶೋಧನೆಗಳು ನಡೆದಿರುವುದು ಬಹಳಷ್ಟು ಕಡಿಮೆ. ಆಗಿರುವ ಸಂಶೋಧನಾ ವರದಿಗಳೂ ಅಧ್ಯಯನ ನಡೆಸಿಲ್ಲ. ಈಗಾಗಲೇ ಆಗಿರುವ ಸಂಶೋಧನೆಗಳು ಯಾವುದೇ ಉದ್ದೇಶಕ್ಕೂ ಉಪಯೋಗವಾಗಿಲ್ಲ. ಕಾರಣ ವೈಯಕ್ತಿಕ ಪದವಿ ಯಾ ಹಣಕಾಸಿನ ಉದ್ದೇಶಕ್ಕೋಸ್ಕರ ನಡೆದ ಸಂಶೋಧನೆಗಳು ಈವರೆಗಿನವು ಮೊಗವೀರ ಸಮುದಾಯ ಸಂಬಂಧಿತ ಅದರಲ್ಲಿ ಮಹಿಳಾ ಸಮಸ್ಯೆಗಳು, ಸ್ಥಾನಮಾನ, ಶಿಕ್ಷಣ, ಉದ್ಯೋಗ ಇತ್ಯಾದಿಗಳನ್ನು ಬಿಂಬಿಸುವ ಅಧ್ಯಯನದ ಅಗತ್ಯ ಇಂದು ಕಂಡು ಬಂದಿದೆ. ಉಡುಪಿ ತಾಲೂಕಿನ ಮೊಗವೀರ ಮಹಿಳೆಯರ ಮತ್ತು ಮೀನುಗಾರ ಮಹಿಳೆಯ ಮೇಲೆ ಸಮಗ್ರ ವಿಶ್ಲೇಷಣೆ ಮಾಡುವ ಉದ್ದೇಶದಿಂದ ಈ ಸಂಶೋಧನೆಯನ್ನು ಸಂಶೋಧನಾ ಕ್ಷೇತ್ರವಾಗಿ ಆಯ್ದು ಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶಗಳು

೧. ಮೊಗವೀರ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಅಧ್ಯಯನ.
೨. ಮೊಗವೀರ ಮಹಿಳೆಯರ ವೃತ್ತಿ ಬದುಕಿನ ವಿವರಣೆ.
೩. ಮೊಗವೀರ ಮಹಿಳೆಯರ ಶೈಕ್ಷಣಿಕ ಅಭಿವೃದ್ದಿಯ ವಿಶ್ಲೇಷಣೆ.
೪. ಮೊಗವೀರ ಮಹಿಳೆಯರ ಸಾಮಾಜಿಕ ಬದಲಾವಣೆಗೆ ಕಾರಣವಾದ ಅಂಶಗಳ ಅಧ್ಯಯನ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಮೊಗವೀರ ಸಮುದಾಯದ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತ್ಯಂತರಗಳನ್ನು ಆಧಾರಿಸಿರುವುದಾಗಿದೆ. ಮೀನುಗಾರಿಕಾ ಪ್ರದೇಶಗಳಲ್ಲಿ ವಾಸಿಸುವ ಮಹಿಳೆಯರ ಸ್ಥಿತಿಗತಿಯು ಬಗ್ಗೆ ಗಮನ ಹರಿಸಲಾಗಿದೆ. ಮೊಗವೀರ ಸಮುದಾಯದದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಕೌಟುಂಬಿಕ, ಶೈಕ್ಷಣಿಕ, ಸಾಂಸ್ಕೃತಿಕ ಜೀವನದದ ಹಿನ್ನಲೆಯನ್ನು ನೋಡಲಾಗಿದೆ. ಇದರಿಂದ ಎಷ್ಟರ ಮಟ್ಟಿಗೆ ಮೊಗವೀರರು ತಮ್ಮ ಸ್ಥಾನಮಾನಗಳಲ್ಲಿ ಬದಲಾವಣೆಗಳನ್ನು ಹೊಂದಿದ್ದಾರೆ ಎಂದು ಕಂಡು ಹಿಡಿಯುವ ಪ್ರಯತ್ನ ಮಾಡಲಾಗಿದೆ. ಹಿಂದುಳಿದ ಜಾತಿಗೆ ಸೇರಿದ ಮೊಗವೀರ ಸಮುದಾಯದ ಜನಜೀವನದ ಮೇಲೆ ಶಿಕ್ಷಣ, ನಗರೀಕರಣ, ಕೈಗಾರಿಕೀಕರಣ, ಸಂಪರ್ಕ ಮಾಧ್ಯಮಗಳು ಎಷ್ಟರ ಮಟ್ಟಿಗೆ ಪರಿಣಾಮ ಬೀರಿದೆ ಎಂಬ ಅಂಶಗಳನ್ನು ತಿಳಿದುಕೊಳ್ಳುವುದು, ಪ್ರಸ್ತುತ ಅಧ್ಯಯನದ ಸ್ವರೂಪವಾಗಿದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಉಡುಪಿ ತಾಲೂಕಿನ ವ್ಯಾಪ್ತಿಗೆ ಸೀಮಿತಗೊಳಿಸಲಾಗಿದೆ. ಮೊಗವೀರ ಸಮುದಾಯದ ೧೦೦ ಜನ ಮಹಿಳಾ ಮಾಹಿತಿದಾರರನ್ನು ಸಂದರ್ಶಿಸಿ ಅವರಿಂದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ.

ಅಧ್ಯಯನದ ಊಹೆಗಳು (ಪ್ರಾಕ್ ಕಲ್ಪನೆಗಳು)

೧. ಮೊಗವೀರ ಮಹಿಳೆಯರಲ್ಲಿ ಶಿಕ್ಷಣದಿಂದಾಗಿ ಅನೇಕ ಸಾಮಾಜಿಕ ಬದಲಾವಣೆಗಳಾಗಿವೆ.
೨. ಶಿಕ್ಷಣದಿಂದ ವಂಚಿತರಾದ ಮೊಗವೀರ ಮಹಿಳೆಯರಲ್ಲಿ ಬದಲಾವಣೆಗೆ ಅಡ್ಡಿಯಾಗುವ ಹಲವು ಅಂಶಗಳನ್ನು ಕಾಣಬಹುದಾಗಿದೆ.

ಅಧ್ಯಯನದ ವಿಧಾನ :

ಮೊಗವೀರ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗಳ ಮಾಹಿತಿಯನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಪಡೆಯಲಾಗಿದೆ. ಮೊಗವೀರ ಮಹಿಳೆಯರ ಒಟ್ಟು ಸಂಖ್ಯೆ ಹಾಗೂ ಶೈಕ್ಷಣಿಕ ದಾಖಲಾತಿಗೆ ಸಂಬಂಧಪಟ್ಟ ಮಾಹಿತಿಯನ್ನು ಅನುಷಂಗೀಕ ಮೂಲಗಳಿಂದ ಪಡೆಯಲಾಗಿದೆ. ಈ ಅಧ್ಯಯನವು ಒಂದು ಸಮುದಾಯಿಕ ಅಧ್ಯಯನವಾದುದರಿಂದ ಬಹುತೇಕ ಪ್ರಾಥಮಿಕ ದತ್ತಾಂಶವನ್ನು ಅವಲಂಬಿಸಿದೆ.ಮಹಿಳೆಯರ ಪಾತ್ರ, ಆರ್ಥಿಕ ಸ್ಥಿತಿಗತಿ ಹಾಗೂ ಸಮಸ್ಯೆಗಳ ಮಾಹಿತಿಯನ್ನು ಪ್ರಾಥಮಿಕ ದತ್ತಾಂಶದ ಮೂಲಗಳಾದ ಅವಲೋಕನ, ಪ್ರಶ್ನಾವಳಿ ಮತ್ತು ಸಂದರ್ಶನದ ಮೂಲಕ ಸಂಗ್ರಹಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ಸರಾಸರಿ ವಿಧಾನದಿಂದ ಅಂಕಿ ಅಂಶಗಳನ್ನು ಕೋಷ್ಟಕಗಳಿಗೆ ಪರಿವರ್ತಿಸಿ ವಿಶ್ಲೇಷಿಸಲಾಗಿದೆ. ಈ ರೀತಿಯಲ್ಲಿ ಬಳಸಿಕೊಂಡ ಮಾಹಿತಿಯನ್ನು ಅನುಕ್ರಮವಾಗಿ ಐದು ಅಧ್ಯಾಯಗಳಲ್ಲಿ ವರದಿ ಮಾಡಲಾಗಿದೆ.

ಮಹಿಳೆಯರನ್ನು ಸಂದರ್ಶಿಸಲು ಅವರ ಸಮಯಕ್ಕೆ ಅಂದರೆ ಅವರ ಬಿಡುವಿನ ಸಮಯವನ್ನು ಆಯ್ದುಕೊಂಡು ಸುಮಾರು ೪೫-೫೦ ನಿಮಿಷಗಳ ಕಾಲಾವಧಿಯನ್ನು ಬಳಸಿಕೊಂಡು ಪ್ರಶ್ನೆಗಳನ್ನು ಸರಳವಾಗಿ ಅವರಿಗೆ ಅರ್ಥವಾಗುವಂತೆ ಅವರ ಆಡುಭಾಷೆಯಾದ ತುಳುವಿನಲ್ಲಿ ಹಾಗೂ ಕನ್ನಡದಲ್ಲಿ ಕೇಳಲಾಯಿತು.

ಅನುಷಂಗಿಕ ಮಾಹಿತಿಯನ್ನು ಸರಕಾರಿ ಹಾಗೂ ಅರೆ ಸರಕಾರಿ ಕಛೇರಿಗಳಿಂದ ಪಡೆಯಲಾಗಿದೆ. ಅಲ್ಲದೆ ಲೇಖನಗಳು, ಪುಸ್ತಕಗಳು, ಗೆಜೆಟಿಯರ್, ಸಂಶೋಧನಾ ಪ್ರಬಂಧಗಳು, ಅಂಕಿ – ಅಂಶಗಳು ಮತ್ತು ಆರ್ಥಿಕ ಸಾಂಖಿಕ ನಿರ್ದೇಶನಾಲಯಗಳು ಹಾಗೂ ಉಡುಪಿ ಜಿಲ್ಲಾ ಪಂಚಾಯತ್‌ನಿಂದ ಸಂಗ್ರಹಿಸಲಾಯಿತು.

ಒಟ್ಟು ಮಾಡಿದ ಪ್ರಾಥಮಿಕ ಮತ್ತು ಮಾಧ್ಯಮಿಕ ದತ್ತಾಂಶಗಳನ್ನು ಸಂಪಾದಿಸಿ ನಂತರ ಕೋಡಿಂಗ್ ಮಾಡಿ ತದನಂತರ ಕೋಷ್ಟಕಗಳಿಗೆ ಪರಿವರ್ತಿಸಲಾಗಿದೆ. ಕೋಷ್ಟಕಗಳನ್ನು ವಿಶ್ಲೇಷಣೆ ಮಾಡಿ ಕಾರಣಗಳನ್ನು ನೀಡಲಾಗಿದೆ.

ಸಂಶೋಧಕಿಯು ಅದೇ ಸಮುದಾಯದವರಾಗಿದ್ದರಿಂದ ಸೂಕ್ತ ವ್ಯಕ್ತಿಗಳನ್ನು ಭೇಟಿಯಾಗಿ ಮಾಹಿತಿ ಸಂಗ್ರಹಿಸುವುದು ಸುಲಭ ಪ್ರಕ್ರಿಯೆಯಾಯಿತು. ಉದ್ಯಾವರ ಮತ್ತು ಬ್ರಹ್ಮಾವರ ಪ್ರದೇಶಗಳಲ್ಲಿ ಮೊಗವೀರ ಮಿತ್ರರನ್ನು ಕ್ಷೇತ್ರಕಾರ್ಯಕ್ಕೆ ಕರೆಯಬೇಕಾಯಿತು. ಮತ್ತು ಅದರಿಂದಾಗಿ ಸ್ಥಳೀಯರ ಸಂಪರ್ಕ ಮತ್ತು ಅಧ್ಯಯನದ ಉದ್ದೇಶವನ್ನು ವಿವರಿಸುವುದು ಸುಲಭವಾಯಿತು. ಸಂಶೋಧಕಿ ಮೊಗವೀರ ಸಮುದಾಯಕ್ಕೆ ಸೇರಿದವರಾಗಿದುದರಿಂದ ಮಾಹಿತಿ ಸಂಗ್ರಹಣೆ ಇನ್ನಷ್ಟು ಸುಲಭವಾಯಿತು. ಸೂಕ್ತ ವ್ಯಕ್ತಿಗಳನ್ನು ಮಾಹಿತಿದಾರರಾಗಿ ಆಯ್ದುಕೊಳ್ಳಲಾಯಿತು.

ಅಧ್ಯಯನದ ಮಹತ್ವ

ಭಾರತದಲ್ಲಿ ಮಹಿಳೆಯರ ಸ್ಥಾನಮಾನಗಳ ಏರಿಳಿತಗಳನ್ನು ಕುರಿತು ಚಿಂತನೆ, ವಿಶ್ಲೇಷಣೆ, ಮತ್ತು ಬರಹಗಳು ಹೆಚ್ಚಾಗುತ್ತಿವೆ. ಕಳೆದ ದಶಕಗಳಲ್ಲಿ ಮಹಿಳೆಯರ ಸ್ಥಾನಮಾನದಲ್ಲಿ ಬದಲಾವಣೆಗಳಾಗಿದ್ದು, ಇದಕ್ಕೆ ಮುಖ್ಯವಾಗಿ ಶಿಕ್ಷಣವೇ ಕಾರಣವಾಗಿದೆ. ಆದರೂ ಸಹ ಹಿಂದುಳಿದ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳನ್ನು ಪಡೆಯುವ ಕನಸು ನನಸಾಗದೇ ಉಳಿದಿರುವುದು ಸಮಕಾಲೀನ ಸಾಮಾಜಿಕ ಸತ್ಯಗಳಲ್ಲಿ ಒಂದು.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ. ಹಲವು ಸಮುದಾಯಗಳು, ಧರ್ಮಗಳು ಈ ರಾಷ್ಟ್ರದಲ್ಲಿರುವುದು ಹೆಮ್ಮೆಯ ವಿಷಯವಾಗಿದೆ. ಈ ಸಮುದಾಯಗಳ ಸಂಸ್ಕೃತಿಯಲ್ಲಿ ಭಿನ್ನತೆಯನ್ನು ಗುರುತಿಸಬಹುದಾಗಿದೆ. ಸಮುದಾಯಗಳು ಕ್ರೂರ ಮೃಗಗಳ ಭಯದಿಂದ ಅಥವಾ ತಾನು ತನ್ನವರೆಂಬ ಭಾವನೆಯಿಂದ ಗುಂಪುಗಳಾಗಿ ಸಾಮಾಜಿಕ ಪರಿಸರದಲ್ಲಿ ಜೀವನ ನಡೆಸಿಕೊಂಡು ಬಂದಿರುವುದು ಪ್ರಾಚೀನ ಕಾಲದ ಸತ್ಯ.ನಂತರ ಈ ಗುಂಪುಗಳೇ ಸಮುದಾಯಗಳಾಗಿ ರೂಪುಗೊಂಡಿವೆ. ಭಾರತದಲ್ಲಿರುವ ಸಮುದಾಯಗಳು ಸಾಮಾನ್ಯವಾಗಿ ವೃತ್ತಿಗಳ ಆಧಾರದ ಮೇಲೆ ಉಗಮವಾಗಿವೆ. ಇಂತಹ ಹಲವು ಸಮುದಾಯಗಳಲ್ಲಿ ಮೊಗವೀರ ಸಮುದಾಯವೂ ಒಂದು.

ಮೊಗವೀರ ಸಮುದಾಯದ ಕುರಿತು ಈ ಹಿಂದೆ ಅಧ್ಯಯನಗಳು ನಡೆದಿದ್ದರೂ ಕೂಡ ಹೆಚ್ಚಿನ ಅಧ್ಯಯನಗಳು ಮೊಗವೀರ ಮಹಿಳೆಯರ ಸ್ಥಾನಮಾನದ ಕುರಿತು ಬೆಳಕು ಚೆಲ್ಲಲಿಲ್ಲ. ಮೊಗವೀರ ಸಮುದಾಯದ ಮಹಿಳೆಯರ ಶಿಕ್ಷಣ, ಕುಟುಂಬದಲ್ಲಿನ ಸ್ಥಾನಮಾನ, ಉಡುಗೆ-ತೊಡುಗೆ, ಮದುವೆ, ಸಂಪ್ರದಾಯ, ನಗರೀಕರಣ, ಪಾಶ್ಚ್ಯಾತೀಕರಣ, ಸಮೂಹ ಮಾಧ್ಯಮ ಮುಂತಾದವುಗಳಿಂದ ಪ್ರಭಾವಿತರಾಗಿದ್ದಾರೆ ಎಂಬ ಕುರಿತು ಅಧ್ಯಯನಗಳು ಕೇವಲ ಅಲ್ಪ ಪ್ರಮಾಣದಲ್ಲಿ ಮತ್ತು ಮೇಲು ಸ್ತರದಲ್ಲಿ ಮಾತ್ರ ಆಗಿದೆ. ಅಲ್ಲದೆ ಶೈಕ್ಷಣಿಕ ಸಾಧನೆಯಿಂದ ಯಾವ ರೀತಿಯಾದ ಬದಲಾವಣೆಗಳಾಗಿದೆ ಎಂಬುದನ್ನು ತಿಳಿಯುವುದು ತುಂಬಾ ಅವಶ್ಯಕವಾಗಿದೆ. ಈ ಹಿನ್ನೆಲೆಯಲಿ ಅಧ್ಯಯನವು ಮಹತ್ವದ್ದಾಗಿದೆ.

ವರದಿಯ ಅಧ್ಯಾಯವಾರು ವಿಂಗಡನೆ

ಮೊದಲನೆಯ ಅಧ್ಯಾಯವು ಅಧ್ಯಯನದ ವಿಷಯ, ಸ್ವರೂಪ, ವ್ಯಾಪ್ತಿ, ಉದ್ದೇಶ, ವಿಧಾನ, ಅಧ್ಯಯನ ಕ್ಷೇತ್ರದ ಪರಿಚಯ, ಪ್ರಾಕ್- ಕಲ್ಪನೆಗಳು, ಪರಿಕಲ್ಪನೆಗಳು, ಸಾಹಿತ್ಯ ವಿಮರ್ಶೆ, ಪರಿಕಲ್ಪನೆಗಳ ಮಹತ್ವ ಹಾಗೂ ಅಧ್ಯಾಯಗಳ ವಿನ್ಯಾಸವನ್ನು ಒಳಗೊಂಡಿದೆ. ಈ ಅಧ್ಯಯನಕ್ಕಾಗಿ ಉಡುಪಿ ತಾಲೂಕನ್ನು ಆಯ್ಕೆ ಮಾಡಲಾಗಿದ್ದು. ಒಟ್ಟು ೧೦೦ ಜನ ಮಾಹಿತಿದಾರರನ್ನು ಸರಳ ಯಾದೃಚ್ಛಿಕ ಮಾದರಿಯಲ್ಲಿ ಆಯ್ಕೆ ಮಾಡಲಾಗಿದೆ. ಈ ಮಾಹಿತಿದಾರರನ್ನು ಮೊದಲೇ ಸಿದ್ದಪಡಿಸಿದ ಸಂದರ್ಶನ ಸೂಚಿಯ ಮೂಲಕ ಸಂದರ್ಶನ ಮಾಡಿ ಅವರಿಂದ ಪ್ರಾಥಮಿಕ ಮಾಹಿತಿ ಸಂಗ್ರಹಿಸಿ ಅಧ್ಯಯನಕ್ಕೆ ಸಂಬಂಧಪಟ್ಟಂತಹ ಮಾಹಿತಿಯನ್ನು ಪಡೆದುಕೊಳ್ಳಲಾಯಿತು.

ಎರಡನೆಯ ಅಧ್ಯಾಯವು ಮೊಗವೀರ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ, ಅವರ ಸ್ಥಾನಮಾನ, ವೈವಾಹಿಕ ಸ್ಥಿತಿ, ಶೈಕ್ಷಣಿಕ ಮಟ್ಟ, ಉದ್ಯೋಗ, ಆದಾಯ ಮುಂತಾದ ಅಂಶಗಳನ್ನು ಒಳಗೊಂಡಿದೆ. ಮಾತ್ರವಲ್ಲ ದಿನಪತ್ರಿಕೆಗಳ ಜ್ಞಾನ, ಕುಟುಂಬದ ಸ್ವರೂಪ, ಮನೆಯ ಮಾದರಿ ಈ ಮುಂತಾದ ಅಂಶಗಳನ್ನು ಕುರಿತಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮೊಗವೀರರ ಶೈಕ್ಷಣಿಕ ಪ್ರಗತಿಗೆ ನಿರ್ಧಾರಕವಾಗುವ ಅಂಶಗಳನ್ನು ವಿವರಿಸಲಾಗಿದೆ. ಶಿಕ್ಷಣವು ಜೀವನದ ಬದಲಾವಣೆಯಲ್ಲಿ ಮಹತ್ತರವಾದ ಪಾತ್ರ ವಹಿಸಿದ್ದು ಆದಾಯ, ರಾಜಕೀಯ ಪಾತ್ರ, ಆರ್ಥಿಕ ಕೊಡುಗೆಗಳ ಬಗ್ಗೆ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮೊಗವೀರರ ಸಂಸ್ಕೃತಿಯ ಕುರಿತಾಗಿ ವಿವರಿಸಲಾಗಿದೆ. ಇಲ್ಲಿ ಮೊಗವೀರರ ಜೀವನಾವರ್ತ ಆಚರಣೆಗಳು, ಹಬ್ಬ ಹರಿದಿನಗಳು, ಆರಾಧನಾ ಕ್ರಮ, ಭಾಷೆ ಮತ್ತು ಇತರ ಸಾಂಸ್ಕೃತಿಕ ಅಂಶಗಳ ಬಗ್ಗೆ ವಿಶ್ಲೇಷಣೆಗಳಿವೆ.

ಐದನೆಯ ಅಧ್ಯಾಯವು ಕೊನೆಯ ಅಧ್ಯಾಯವಾಗಿದ್ದು, ಸಂಶೋಧನೆಯ ಫಲಿತಗಳನ್ನು ನೀಡಲಾಗಿದೆ. ಮುಂದಿನ ಸಂಶೋಧನೆಗೆ ಅಗತ್ಯ ಸಲಹೆಗಳನ್ನು ನೀಡಲಾಗಿದೆ. ಮೊಗವೀರ ಮಹಿಳೆಯರ ಅಭ್ಯುದಯಕ್ಕೆ ಕೆಲವೊಂದು ಸೂಚನೆಗಳನ್ನು ನೀಡಲಾಗಿದೆ. ಅಧ್ಯಯನದ ಉಪಸಂಹಾರವೂ ಈ ಅಧ್ಯಾಯದಲ್ಲಿದೆ.

ಅಧ್ಯಾಯ-೨

ಅಧ್ಯಾಯ -೨

ಮೊಗವೀರ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ

ಯಾವುದೇ ವ್ಯಕ್ತಿಯ ಸ್ಥಾನಮಾನವನ್ನು ನಿರ್ಧರಿಸುವಲ್ಲಿ ಜನ್ಮ, ಲಿಂಗ, ವಯಸ್ಸು, ಉದ್ಯೋಗ, ಶಿಕ್ಷಣಮಟ್ಟ, ಸಂವಿಧಾನಿಕ ಲಕ್ಷಣಗಳು, ಜೈವಿಕ ಅಂಶಗಳು ಪ್ರಮುಖವಾದ ಪಾತ್ರವಹಿಸುತ್ತವೆ. ಮೊಗವೀರ ಸಮುದಾಯದ ಮಹಿಳೆಯರು ಧೈರ್ಯವಂತರು, ಅತಿಥಿ ಸತ್ಕಾರ ಮಾಡುವಲ್ಲಿ ನಿಸ್ಸೀಮರು ಹಾಗೂ ಶ್ರಮಜೀವಿಗಳು. ಒಟ್ಟಿನಲ್ಲಿ ಹೇಳುವುದಾದರೆ, ಮೊಗವೀರ ಸಮುದಾಯದ ಮಹಿಳೆಯರನ್ನು ಇತರ ಸಮುದಾಯದ ಮಹಿಳೆಯರಿಗೆ ಹೋಲಿಸಿದಾಗ ಇವರು ತುಂಬ ಬಲಯುತವಾದ ಮಹಿಳೆಯರಾಗಿದ್ದಾರೆ.ಈ ಸಮುದಾಯದಕ್ಕೆ ಸೇರಿದ ಮಹಿಳೆಯರು ಮನೆಯ ಎಲ್ಲಾ ಜವಾಬ್ದಾರಿಯನ್ನು ವಹಿಸಿಕೊಂಡವರಾಗಿದ್ದು, ಖರ್ಚು-ವೆಚ್ಚಗಳನ್ನು ನಿಭಾಯಿಸುವುದರ ಜೊತೆಗೆ ಮಕ್ಕಳ ಶಿಕ್ಷಣದ ಬಗ್ಗೆಯೂ ಕೂಡ ಕಾಳಜಿಯನ್ನು ಹೊಂದಿದವರಾಗಿದ್ದಾರೆ. ಕೈಗಾರಿಕೀಕರಣ ಮತ್ತು ಆಧುನಿಕ ಉದ್ಯೋಗಗಳು ಮೊಗವೀರ ಸಮುದಾಯದ ಮಹಿಳೆಯರ ಜೀವನದಲ್ಲಿ ಬಹಳಷ್ಟು ರೀತಿಯಾದ ಬದಲಾಣೆಗಳನ್ನು ಉಂಟು ಮಾಡಿದೆ.

ಮೊಗವೀರ ಸಮುದಾಯದಲ್ಲಿ ಹೆಚ್ಚಿನ ಮಹಿಳೆಯರು ಆರ್ಥಿಕವಾಗಿ ಸ್ವತಂತ್ರ ಜೀವನವನ್ನು ನಡೆಸುತ್ತಿದ್ದಾರೆ. ಇವರು ಕುಟುಂಬದಲ್ಲಿ ತಮ್ಮದೇ ಆದ ರೀತಿಯಲ್ಲಿ ಗುರುತಿಸಿಕೊಂಡಿದ್ದಾರೆ. ಇತ್ತೀಚಿನ ಆರ್ಥಿಕ ಸ್ಥಿತಿಯನ್ನು ಗಮನಿಸಿದಾಗ ಇವರು ತುಂಬಾ ಸಂತೋಷದಾಯಕವಾದ ಜೀವನವನ್ನು ನಡೆಸುತ್ತಾರೆ. ಸಾಂಪ್ರದಾಯಿಕವಾಗಿ ಮೊಗವೀರ ಸಮುದಾಯದಲ್ಲಿ ಮಹಿಳೆಯು ಕುಟುಂಬದ ಮುಖ್ಯಸ್ಥೆಯಾಗಿರುತ್ತಾಳೆ. ಕಾರಣ, ಇವರು ಆರ್ಥಿಕವಾಗಿ ಸ್ವತಂತ್ರರಾಗಿದ್ದು ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ. ಮಾತ್ರವಲ್ಲದೆ ಪುರುಷನಿಗೆ ಸರಿಸಮನವಾಗಿ ದುಡಿಯುವವರೂ ಆಗಿದ್ದಾರೆ. ಆದರೂ ಕೂಡ ಸ್ವತಂತ್ರ ಮಹಿಳೆಯರು ಎಲ್ಲಾ ವಿಧದಲ್ಲೂ ಅಧೀನಳಾಗಿರುವ ಮಹಿಳೆಯನ್ನು ಸಮಾನ ರೀತಿಯಲ್ಲಿ ನೋಡುವುದು ಈ ಸಮುದಾಯದ ಒಂದು ವಿಶೇಷವಾಗಿದೆ.

ಯಾವುದೇ ಒಂದು ಜನಾಂಗದ ಸ್ಥೂಲ ಪರಿಚಯ ಮಾಡಿಕೊಳ್ಳಬೇಕಾದರೆ, ಅವರ ಸಾಮಾಜಿಕ ಅಂಶಗಳಾದ ಲಿಂಗ, ಜಾತಿ, ಕುಟುಂಬದ ಪ್ರಕಾರಗಳು, ವೈವಾಹಿಕ ಸಂಬಂಧ, ಶೈಕ್ಷಣಿಕ ಮಟ್ಟ, ಉದ್ಯೋಗ, ವಾರ್ಷಿಕ ಆದಾಯ ಮುಂತಾದವುಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಈ ಅಂಶಗಳು ತುಂಬ ಸ್ಥಾನಮಾನ, ಸಾಮಾಜಿಕ, ಆರ್ಥಿಕ ಹಿನ್ನಲೆಯ ಕುರಿತು ಚರ್ಚೆ ಮಾಡಲಾಗಿದೆ.

ಮೀಸಲಾತಿ ಮತ್ತು ಮೊಗವೀರ ಮಹಿಳೆಯರು:

ಭಾರತದಲ್ಲಿ ಸ್ವಾತಂತ್ರ್ಯನಂತರ ಸಮುದಾಯಗಳ ಅಭಿವೃದ್ಧಿಯ ದೃಷ್ಟಿಯಿಂದ ಜಾತಿ ಸಮುದಾಯಗಳಿಗೆ ಮೀಸಲಾತಿಯನ್ನು ನೀಡಲಾಯಿತು. ಸಾಮಾಜಿಕ ಸಮಾನತೆ ಮತ್ತು ಜಾತಿ ಸಮುದಾಯಗಳು ರಾಜ್ಯದಿಂದ ರಾಜ್ಯಕ್ಕೆ ಸಂಖ್ಯೆಯಲ್ಲಿ ಹಾಗೂ ಸಾಂಸ್ಕೃತಿಕ ಹಿನ್ನಲೆಯಲ್ಲಿ ಭಿನ್ನವಾಗಿರುವುದರಿಂದ ರಾಜ್ಯವಾರು ಮೀಸಲಾತಿಯನ್ನು ಸರಕಾರ ಘೋಷಿಸಿತು.

ಕರ್ನಾಟಕದಲ್ಲಿಯೂ ಕೂಡಾ ಸಮಯದಿಂದ ಸಮಯಕ್ಕೆ ಮೀಸಲಾತಿ ಆಯೋಗಗಳು ರಚನೆಯಾದವು. ಪ್ರಸ್ತುತ ಚಿನ್ನಪ್ಪರೆಡ್ಡಿ ಆಯೋಗದಲ್ಲಿ ಮೊಗವೀರ ಸಮುದಾಯ ಪ್ರವರ್ಗ-೧ ರಲ್ಲಿ ಪರಿಗಣಿಸಲ್ಪಟ್ಟಿದೆ. ಮೀಸಲಾತಿಯಿಂದಾಗಿ ಮೊಗವೀರರಲ್ಲಿ ರಾಜಕೀಯ, ಔದ್ಯೋಗಿಕ ಮತ್ತು ಶೈಕಣಿಕ ಬದಲಾವಣೆಗಳು ತೀವ್ರಗತಿಯಲ್ಲಿದ್ದರೂ ಉಡುಪಿ ತಾಲೂಕಿನಲ್ಲಿ ಅಂಕಿ ಅಂಶಗಳು ಭಿನ್ನವಾಗಿವೆ.

ವಿವಾಹ ಪದ್ಧತಿ ಮತ್ತು ಮೊಗವೀರ ಮಹಿಳೆಯರು

ಮೊಗವೀರ ಸಮುದಾಯದಲ್ಲಿ ಉಡುಪಿ ಜಿಲ್ಲೆಯ ಇತರ ಹಿಂದೂ ಸಮುದಾಯಗಳಂತೆ ವಿವಾಹ ಸಂಸ್ಕಾರ ನಡೆಯುತ್ತದೆ. ಈ ಸಮುದಾಯದಲ್ಲಿ ಶಿಕ್ಷಣ ಮತ್ತು ಆರ್ಥಿಕ ಪ್ರಗತಿಯ ಹೊರತಾಗಿಯೂ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ವಿವಾಹ ನಡೆಯುತ್ತದೆ. ಮೊಗವೀರ ಮಹಿಳೆಯರು ವಿವಾಹದ ನಿಯಮಗಳನ್ನು ಮತ್ತು ಸಂಸ್ಕೃತಿಯನ್ನು ಗೌರವಿಸುತ್ತಾರೆ. ವಿವಾಹ ಎಂಬುದು ಒಂದು ಸಾಮಾಜಿಕ ಸಂಸ್ಥೆಯಾಗಿದೆ. ಪುರಾಣಗಳಲ್ಲೆ ವಿವಾಹದ ಬಗ್ಗೆ ಉಲ್ಲೇಖಗಳಿವೆ. ವಿವಾಹಿತನಾದವನು ಎಲ್ಲಾ ಪೂಜಾ ವಿಧಿವಿಧಾನಗಳಲ್ಲಿ ಭಾಗವಹಿಸಲು ಅರ್ಹನಾದವನು ಎಂದು ಉಲ್ಲೇಖಿಸಲಾಗಿದೆ. ಹಾಗೆಯೇ ಪ್ರತಿಯೊಂದು ಸಮುದಾಯದಲ್ಲಿ ಕೂಡ ತಮ್ಮದೇ ಆದ ವೈವಾಹಿಕ ಸಂಪ್ರದಾಯಗಳು ರೂಢಿಯಲ್ಲಿರುವುದು ಭಾರತದಲ್ಲಿ ಕಂಡು ಬರುತ್ತದೆ. ಬೇರೆಬೇರೆ ಸಮುದಾಯಗಳಲ್ಲಿ ಬೇರೆ ಬೇರೆ ರೀತಿಯಾದ ವಿವಾಹ ವಿಧಿ-ವಿಧಾನಗಳು ಬೆಳೆದು ಬಂದಿದೆ. ಹಾಗೆಯೇ ಮೊಗವೀರ ಸಮುದಾಯದಲ್ಲಿಯೂ ಕೂಡಾ ವಿಶಿಷ್ಟವಾದ ವಿವಾಹ ಪದ್ಧತಿ ಆಚರಣೆಯಲ್ಲಿರುವುದು ಕಂಡು ಬರುತ್ತದೆ. ವಿಧಿ ವಿಧಾನಗಳಿಂದ ನಡೆಯುವ ವಿವಾಹ ಪದ್ಧತಿಯು ಕಾಲ ಕಳೆದಂತೆ ಬದಲಾವಣೆ ಆಗಿ ಸರಳ ರೀತಿಯಾದ ವಿವಾಹ ಪದ್ಧತಿಯು ಜಾರಿಯಲ್ಲಿರುವುದು ಕಂಡು ಬರುತ್ತದೆ. ಹಿಂದಿನ ಕಾಲದಲ್ಲಿ ವಿವಾಹ ಸಮಾರಂಭಕ್ಕಾಗಿ ಒಂದು ತಿಂಗಳ ಮೊದಲೇ ತಯಾರಿ ನಡೆಸಲಾಗುತ್ತಿತ್ತು. ಸುಮಾರು ಒಂದು ವಾರಗಳ ಕಾಲ ವಿವಾಹ ನಡೆಯುತ್ತಿತ್ತು. ಆದರೆ ಕಾಲ ಬದಲಾದಂತೆ ವಿವಾಹ ಪದ್ಧತಿ, ಸಮಾರಂಭಗಳಲ್ಲಿ ಕೆಲವೊಂದು ಬದಲಾವಣೆ ಕಂಡು ಬರುತ್ತದೆ.

ಒಂದೇ ಬರಿ ಅಥವಾ ಬಳಿಗಳ ನಡುವೆ ವಿವಾಹ ನಡೆಯುವುದಿಲ್ಲ. ಇವರು ಪರಸ್ಪರ ಸಹೋದರತ್ವ ಸಂಬಂಧವನ್ನು ಹೊಂದಿರುತ್ತಾರೆ ಎಂಬ ಕಲ್ಪನೆ ಇದೆ.ಆದರೆ ವಿರುದ್ಧ ಬರಿಗಳ ನಡುವೆ ವಿವಾಹ ಸಂಬಂಧ ಏರ್ಪಡುತ್ತದೆ. ಬಹಳ ಹಿಂದೆ ಕನ್ಯೆಯನ್ನು ಆಯ್ಕೆ ಮಾಡುವಾಗ ಈ ಅಂಶವನ್ನು ಮುಂದಿಟ್ಟುಕೊಂಡು ಆಯ್ಕೆ ಮಾಡುತ್ತಿದ್ದರು. ಮಾತ್ರವಲ್ಲ ಜಾತಿಯು ಕೂಡ ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಅನ್ಯ ಜಾತಿಯವರನ್ನು ಅಥವಾ ಅನ್ಯ ಧರ್ಮದವರನ್ನು ವಿವಾಹವಾದರೆ ಆಂತರಿಕ ಕುಟುಂಬವನ್ನು ತಮ್ಮ ಜಾತಿಯಿಂದ ಹೊರಗೆ ಇಡುತ್ತಿದ್ದರು. ಅಂತರ್ಜಾತಿ ಅಥವಾ ಅಂತರ್‌ಧರ್ಮಿ ವಿವಾಹ ಆದಂತವರನ್ನು ಊರಿಗೆ ಸೇರಿಸಿಕೊಳ್ಳುತ್ತಿರಲಿಲ್ಲ. ಅವರಿಗೆ ಸಮುದಾಯದಿಂದಲೇ ಹೊರಗೆ ಹಾಕಲಾಗುತ್ತಿತ್ತು.

ವಿವಾಹಕ್ಕೆ ಸಂಬಂಧಪಟ್ಟ ಹಾಗೆ ವಧು-ವರರನ್ನು ಕುಟುಂಬದ ಹಿರಿಯರೇ ಆಯ್ಕೆ ಮಾಡುತ್ತಿದ್ದರು. ಇಲ್ಲಿ ಆಯ್ಕೆ ಸಂಬಂಧಪಟ್ಟಂತೆ ವಧೂ-ವರರಿಗೆ ಯಾವುದೇ ಅವಕಾಶವಿರಲಿಲ್ಲ. ವಿವಾಹ ಸಂಬಂಧ ಬಯಸಿ ಬರುವಂತಹ ವರನ ಕಡೆಯವರು ಸಂಬಂಧ ಒಪ್ಪಿಗೆಯಾಗುವ ಮೊದಲು ವಧುವಿನ ಮನೆಯಲ್ಲಿ ತಯಾರಿಸಿದ ಯಾವುದೇ ಬಗೆಯಾದ ಆಹಾರ ಸೇವನೆಗೆ ಅವಕಾಶವಿರಲಿಲ್ಲ. ಆಧುನಿಕತೆ ಬೆಳೆದಂತೆ ಹಿಂದೆ ಇದ್ದಂತಹ ಕಟ್ಟು ನಿಟ್ಟಿನ ಕ್ರಮಗಳು ಕ್ರಮೇಣ ನಶಿಸಿ ಹೋಗತೊಡಗಿದವು. ವಿಶೇಷವೇನೆಂದರೆ ಅಂತರ್‌ಜಾತಿ, ಅಂತರ್ ಧರ್ಮಿ ವಿವಾಹಗಳಿಗೆ ಊರಿನ ಹಿರಿಯ ಮುಖಂಡರು ಎನಿಸಿಕೊಂಡವರು ಇಂತಹ ವಿವಾಹ ಸಮಾರಂಭಗಳಿಗೆ ಹಾಜರಾಗುತ್ತಿರಲಿಲ್ಲ. ಊರಿನ ಹಿರಿಯರ ಅನುಪಸ್ಥಿತಿಯಲ್ಲಿ ಯಾವುದೇ ರೀತಿಯಾದ ಸಮಾರಂಭಗಳು ನಡೆಯುತ್ತಿರಲಿಲ್ಲ. ವಿವಾಹ ಸಂಬಂದ ನಿಶ್ಚಯವಾಗುವ ಸಂದರ್ಭದಲ್ಲಿ ಸಮುದಾಯದ ಮುಖಂಡನ ಪಾತ್ರ ಅಗತ್ಯವಿತ್ತು. ಸಮುದಾಯದ ಮುಖಂಡರು ವೀಳ್ಯದೆಲೆ ಬದಲಾಯಿಸಿಕೊಂಡರೆ ವಿವಾಹ ನಿಶ್ಚಿತಾರ್ಥ ಆದಂತೆ. ಆದರೆ ಇಂತಹ ಪರಿಸ್ಥಿತಿಯು ಇತ್ತೀಚಿನ ದಿನಗಳಲ್ಲಿ ಕಂಡು ಬರುವುದಿಲ್ಲ. ಶಿಕ್ಷಣ, ನಗರೀಕರಣ ಹಾಗೂ ಔದ್ಯೋಗೀಕರಣದಿಂದಾಗಿ ಈ ವ್ಯವಸ್ಥೆಯಲ್ಲಿ ಸಾಕಷ್ಟು ರೀತಿಯಾದ ಬದಲಾವಣೆಗಳಾಗಿವೆ.

ತುಳುನಾಡಿನ ಅತಿ ಪ್ರಾಚೀನ ಜನಾಂಗದ ಮೊಗವೀರರು ವಂಶಾನುಕ್ರಮವಾಗಿ ಅನೇಕ ಬಳಿಗಳನ್ನು ಹೊಂದಿದ್ದಾರೆ. ಬಳಿ ಎಂದರೆ ಗೋತ್ರವೆಂದು ಅರ್ಥ. ತುಳುವಿನಲ್ಲಿ ಇದನ್ನು ಬರಿ ಎನ್ನುತ್ತಾರೆ. ವಿವಾಹಾದಿ ಸಂದರ್ಭಗಳಲ್ಲಿ ನೆಂಟಸ್ತಿಕೆಯನ್ನು ನಿಶ್ಚಯಿಸುವಾಗ ವಧೂವರರ ಗೋತ್ರಗಳನ್ನು ಪರಸ್ಪರ ಕೇಳಿ ತಿಳಿದುಕೊಳ್ಳುತ್ತಾರೆ. ಇತರ ಜನಾಂಗಗಳಂತೆ ಮೊಗವೀರರಲ್ಲಿಯೂ ಸಗೋತ್ರ ವಿವಾಹ ನಿಷಿದ್ಧವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಾಗಿರುವ ಕೆಲವು ಬಳಿಗಳು ಅಮ್ಮಣ್ಣಾಯ, ಕಂಚಿನ್ನಾಯ, ಕರ್ಬುರನ್ನಾಯ, ಕುಂದನ್ನಾಯ, ಕೋಟ್ಯನ್ನಾಯ, ತಿಂಗಳನ್ನಾಯ, ತೋಳರಬನ್ನಾಯ, ದೋರಣ್ಣಾಯ, ಪುತ್ರನ್ನಾಯ, ಬಂಗಾರಣ್ಣಾಯ, ಮಂಡನ್ನಾಯ, ಮೈಂದಣ್ಣಾಯ, ಸಾಲೆನ್ನಾಯ, ಸಿರಿಯ್ನನಾಯ ಹಾಗೆಯೇ ಕುಂದಾಪುರ ತಾಲೂಕಿನ ಶೀರೂರು ಬಳಿ ಪ್ರಚಲಿತವಾಗಿರುವ ಬಳಿಯ ಹೆಸರುಗಳು: ಆನೆಬಳಿ, ಕಂಚಿನಬಳಿ, ಚಂದನ್‌ಬಳಿ, ಶೆಟ್ಟಿಬಳಿ ಹಾಲಿನ ಬಳಿ, ಹೊನ್ನಬಳಿ, ಸಿರಿನ್‌ಬಳಿ, ಬೇರೆ ಬೇರೆ ಬಳಿಗಳಿಗೆ ಅನುಸಾರವಾಗಿ ಅನೇಕ ಉಪನಾಮಗಳು ರೂಢಿಯಲ್ಲಿವೆ ಅವುಗಳು ಅಮಿನ್, ಕರ್ಕೇರ, ಕಾಂಚನ್, ಕುಂದರ್, ಕೋಟ್ಯಾನ್, ತಿಂಗಳಾಯ, ತೋಳಾರ್, ಪುತ್ರನ್, ಬಂಗೇರ, ಮೆಂಡನ್, ಮೈಂದನ್, ಶ್ರೀಯಾನ್, ಸಾಲಿಯಾನ್, ಸುವರ್ಣ, ಚಂದನ್, ಗುಜರಾನ್.

ಸರಕಾರಿ ಸವಲತ್ತುಗಳು ಮತ್ತು ಮೊಗವೀರ ಮಹಿಳೆ

ಆಧುನಿಕ ಸಮಾಜದಲ್ಲಿ ಸರಕಾರಿ ನೌಕರಿಯನ್ನು ಸ್ಪರ್ಧಾತ್ಮಕವಾಗಿ ಪಡೆದುಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದ್ದು ಮೊಗವೀರ ಸಮುದಾಯದಲ್ಲಿ ಮೀಸಲಾತಿಯನ್ನು ಬಳಸಿಕೊಂಡು ಸರಕಾರಿ ಉದ್ಯೋಗಗಳಿಗೆ ಅರ್ಜಿ ಸಲ್ಲಿಸುವವರ ಸಂಖ್ಯೆ ಕಡಿಮೆ ಎಂದೇ ಹೇಳಬಹುದು. ಇದಕ್ಕೆ ಕಾರಣ ಶೈಕಣಿಕ ಸಾಧನೆ ಮಾಡಿರುವುದಿಲ್ಲ. ಮೊಗವೀರ ಪುರುಷರು ಮೀನುಗಾರಿಕೆ ಅಥವಾ ಇತರ ವ್ಯವಹಾರ ಉದ್ಯಮಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿಲ್ಲ. ಮಹಿಳೆಯರಷ್ಟೇ ಸರಕಾರಿ ಉದ್ಯೋಗವನ್ನರಸಿ ಮೀಸಲಾತಿಯನ್ನು ಬಳಸಿಕೊಳ್ಳುತ್ತಾರೆ.

ಸ್ಥಳೀಯ ಆಡಳಿತ ಮತ್ತು ಮೊಗವೀರ ಮಹಿಳೆಯರು

ಸ್ಥಳೀಯ ಆಡಳಿತದಲ್ಲಿ ಎಲ್ಲಾ ಹಿಂದುಳಿದ ವರ್ಗಗಳು ರಾಜಕೀಯ ಮೀಸಲಾತಿಯ ನಂತರ ತಮ್ಮ ಸಮುದಾಯದ ಪ್ರಾತಿನಿಧ್ಯವನ್ನು ಕಂಡುಕೊಂಡು ಅದೇ ಮೊಗವೀರ ಸಮುದಾಯವು ಸರ್ಕಾರಿ ನಿಗದಿ ಪಡಿಸಿದ ಮೀಸಲಾತಿಯ ಹಿನ್ನಲೆಯಲ್ಲಿ ಅಲ್ಲಲ್ಲಿ ಪ್ರಾತಿನಿಧ್ಯತೆಯನ್ನು ಪಡೆದುಕೊಂಡು ರಾಜಕೀಯ ಪ್ರಜ್ಞೆಯ ಕೊರತೆಯಿಂದಾಗಿ ಇತರೆ ಹಿಂದುಳಿದ ಸಮುದಾಯಗಳಂತೆ ಹೆಚ್ಚಿನ ಪ್ರಭಾವವನ್ನು ಬೀರಿರುವರು. ಇದಕ್ಕೆ ಹಲವಾರುಕಾರಣಗಳಿವೆ. ಆದರೆ ದೇವರಾಜು ಅರಸ್‌ರವರ ನಂತರ ಬಂದ ರಾಜಕರಣದಲ್ಲಿ ಉಂಟಾದ ಬದಲಾವಣೆಗಳಿಂದಾಗಿ ಮೊಗವೀರ ಸಮುದಾಯವು ಮುಂಚೂಣಿಗೆ ಬಂದದ್ದು ಇತಿಹಾಸದಲ್ಲಿ ಸ್ಪಷ್ಟವಾಗುತ್ತದೆ. ಸ್ಥಳೀಯ ಆಡಳಿತದಲ್ಲಿ ಮೀಸಲಾತಿ ಇಲ್ಲದೆ ಸಾಮಾಜಿಕ ಕಾರಣಗಳಿಂದಾಗಿ ಮೊಗವೀರ ಸಮುದಾಯದ ಪ್ರಭಾವೀ ವ್ಯಕ್ತಿಗಳು ಸ್ಥಳೀಯ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿರುವುದನ್ನು ಕರಾವಳಿ ಪ್ರದೇಶಗಳಲ್ಲಿ ನಾವು ಕಾಣಬಹುದು.

ಕೋಷ್ಟಕ-೨.೧.

ಮೀಸಲಾತಿಯ ಬಳಸಿಕೊಂಡವರ ವಿವರ

ಕ್ರ.ಸಂ	ಮೀಸಲಾತಿ ಬಳಸಿಕೊಂಡವರು	ಸಂಖ್ಯೆ	ಶೇಕಡಾ
೧	ಹೌದು	೩೫	೩೫
೨	ಇಲ್ಲ	೬೫	೬೫
	ಒಟ್ಟು	೧೦೦	೧೦೦




ಉಡುಪಿ ತಾಲೂಕಿನ ಮೊಗವೀರರ ಅಂಕಿ ಅಂಶಗಳನ್ನು ತೆಗೆದುಕೊಂಡಾಗ ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯದಲ್ಲಿ ತಮ್ಮದೇ ಆದ ಪ್ರಗತಿಯನ್ನು ಸಾಧಿಸಿದ್ದಾರೆ. ಆದರೆ ಸರ್ಕಾರಿ ಮೀಸಲಾತಿಯನ್ನು ಬಳಸಿಕೊಂಡವರ ಸಂಖ್ಯೆ ತೀರ ವಿರಳ. ಎಲ್ಲ ರಂಗಗಳು ಸೇರಿದಂತೆ, ಸರಕಾರಿ ಮೀಸಲಾತಿಯನ್ನು ಉಪಯೋಗಿಸಿಕೊಂಡವರ ಸಂಖ್ಯೆ ಕೇವಲ ಶೇಕಡಾ ೩೫ . ಗೊತ್ತಿದ್ದು ಯಾ ಗೊತ್ತಿಲ್ಲದೆಯೋ ಮೀಸಲಾತಿಯನ್ನು ಬಳಸಿಕೊಳ್ಳದವರ ಸಂಖ್ಯೆ ಹೆಚ್ಚು. ಇದರ ಅರ್ಥ. ಮೀಸಲಾತಿಯ ಸಂಪೂರ್ಣ ಅರಿವಿಲ್ಲ ಎಂದಲ್ಲ. ಮೀಸಲಾತಿ ಕುರಿತು ಮಾಹಿತಿ ಇದ್ದು ನಿರ್ಲಕ್ಷಿಸಿದವರ ಸಂಖ್ಯೆ ಗುರುತರವಾದುದು. ಇದಕ್ಕೆ ಕಾರಣ ಅವರ ಆರ್ಥಿಕ ಸ್ಥಿತಿ ಮತ್ತು ಕೆಲವರ ರಾಜಕೀಯ ಪ್ರಾಬಲ್ಯತೆ.

ಕೋಷ್ಟಕ-೨.೨

ಜಾತಿ ಮೀಸಲಾತಿಯ ವಿವರ


ಕ್ರ.ಸಂ	ಜಾತಿ ಮೀಸಲಾತಿಯ ಅರಿವು	ಸಂಖ್ಯೆ	ಶೇಕಡಾ
೧	ಇದೆ	೬೫	೬೫
೨	ಇಲ್ಲ	೩೫	೩೫
	ಒಟ್ಟು	೧೦೦	೧೦೦



ಮೇಲಿನ ಕೋಷ್ಟಕದ ಪ್ರಕಾರ ಉಡುಪಿ ತಾಲೂಕಿನ ಮೊಗವೀರರಲ್ಲಿ ಶೇಕಡಾ ೬೫ ಕುಟುಂಬಗಳಿಗೆ ಜಾತಿ ಮೀಸಲಾತಿಯ ಅರಿವಿದೆ. ಆದರೆ ಶಿಕ್ಷಣ ಮತ್ತು ರಾಜಕೀಯ ಅಭಿವೃದ್ಧಿಯ ಹೊರತಾಗಿಯೂ ಶೇಕಡಾ ೩೫ ಕುಟುಂಬಗಳಿಗೆ ಇಂದಿಗೂ ಮೀಸಲಾತಿಯ ಕುರಿತ ಅರಿವಿಲ್ಲ. ಕಾರಣ ಗ್ರಾಮಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮತ್ತು ನಗರ ಸಭೆಯಲ್ಲಿ ಸದಸ್ಯರಾಗಿ ಅಥವಾ ಉದ್ಯೋಗಿಗಳಾಗಿ ಇರುವ ಮೊಗವೀರರು ತಮ್ಮ ಸಂಬಂಧ ಹಾಗೂ ಸಂಪರ್ಕ ಇರುವವರಿಗೆ ಈ ಕುರಿತ ಮಾಹಿತಿಯನ್ನು ರವಾನಿಸುತ್ತಿರುವುದು ಅಧ್ಯಯನದಿಂದ ಕಂಡು ಬಂದಿದೆ. ಉಳಿದಂತೆ ಅನಕ್ಷರಸ್ಥ ಯಾ ಸಾಂಸ್ಕೃತಿಕ ಕೃಷಿ ಸಂಬಂಧಿ ಉದ್ಯೋಗ ಅವಲಂಬಿಸಿರುವ ಮೊಗವೀರರಲ್ಲಿ ಮೀಸಲಾತಿ ಅರಿವಿನ ಕೊರತೆ ಇದೆ.

ಕೋಷ್ಟಕ-೨.೩

ಕ್ರ.ಸಂ	ಮೀಸಲಾತಿಯ ಕ್ಷೇತ್ರ	ಸಂಖ್ಯೆ	ಶೇಕಡಾ
೧	ಶಿಕ್ಷಣ	೩೦	೩೦
೨	ಉದ್ಯೋಗ	೦೫	೦೫
೩	ರಾಜಕೀಯ	೦	೦
೪	ಯಾವುದೇ ಮೀಸಲಾತಿ ಬಳಸಿಕೊಳ್ಳದವರು	೬೫	೬೫
	ಒಟ್ಟು	**೧೦೦**	**೧೦೦**




ಕ್ಷೇತ್ರಕಾರ್ಯದಲ್ಲಿ ಒಟ್ಟು ಮಾಡಿದ ದತ್ತಾಂಶದ ಪ್ರಕಾರ ಶೇಕಡಾ ೩೦ ಮಂದಿ ಮಹಿಳೆಯರು ಮೊಗವೀರರಲ್ಲಿ ಶಿಕ್ಷಣದ ಮೀಸಲಾತಿ ಬಳಸಿಕೊಂಡಿದ್ದಾರೆ. ಉದ್ಯೋಗದ ಬಗ್ಗೆ ವಿಚಾರಿಸಿದಾಗ ಶೇ.೫ ಮಂದಿ ಮಾತ್ರ ಮೀಸಲಾತಿಯನ್ನು ಬಳಸಿಕೊಂಡು ಸರ್ಕಾರಿ ಉದ್ಯೋಗವನ್ನು ಪಡೆದಿದ್ದಾರೆ. ಆದರೆ ರಾಜಕೀಯದಲ್ಲಿ ಮೀಸಲಾತಿಯನ್ನು ಬಳಸಿಕೊಂಡ ಮಹಿಳೆಯರ ಸಂಖ್ಯೆ ಶೂನ್ಯ. ಶೇಕಡಾ ೬೫ ಮಂದಿ ಯಾವುದೇ ಮೀಸಲಾತಿಯನ್ನು ಬಳಸಿಕೊಂಡಿಲ್ಲ.

ಮೇಲಿನ ದತ್ತಾಂಶವನ್ನು ಅವಲೋಕಿಸಿದಾಗ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಮೊಗವೀರ ಮಹಿಳೆಯರು ಮೀಸಲಾತಿಯನ್ನು ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಮೊಗವೀರ ಮಹಿಳೆಯರು ಉದ್ಯೋಗದಲ್ಲಿ ಮೀನುಗಾರಿಕೆಯನ್ನೇ ಆಯ್ಕೆ ಮಾಡಿಕೊಳ್ಳುವುದರಿಂದ ಸರಕಾರಿ ಯಾ ಇತರ ಉದ್ಯೋಗಗಳತ್ತ ಗಮನ ಹರಿಸದೇ ಇರುವುದು, ಉದ್ಯೋಗದ ಸ್ಪಷ್ಟ ಚಿತ್ರಣವಾಗಲೀ ಯಾ ಮಾಹಿತಿಯಾಗಲೀ ದೊರಕದೇ ಇರುವುದು ಕೂಡಾ ಮೀಸಲಾತಿಯನ್ನು ಉದ್ಯೋಗಕ್ಕಾಗಿ ಪಡೆದುಕೊಳುವಲ್ಲಿನ ಸಂಖ್ಯೆ ತೀರ ಕಡಿಮೆಯಾಗಿದೆ. ಹಾಗೆಯೇ ಈ ಪ್ರದೇಶದಲ್ಲಿ ಮೀಸಲಾತಿಯ ಅರಿವಿನ ಕೊರತೆ ಮತ್ತು ಆರ್ಥಿಕವಾಗಿ ಉನ್ನತ ಮಟ್ಟದಲ್ಲಿರುವ ಕುಟುಂಬಗಳು ಮೀಸಲಾತಿಯ ಬಗ್ಗೆ ಗಮನಹರಿಸದಿರುವುದು ಸ್ಪಷ್ಟವಾಗುತ್ತದೆ. ಮೀಸಲಾತಿಯನ್ನು ಬಳಸಿಕೊಂಡಿರುವ ಕುಟುಂಬಗಳ ಆರ್ಥಿಕ ಸ್ಥಿತಿಗತಿಯನ್ನು ಅವಲೋಕಿಸಿದಾಗ ಈ ಎಲ್ಲ ಕುಟುಂಬಗಳು ಮಧ್ಯಮವರ್ಗ ಯಾ ಕೆಳವರ್ಗದಲ್ಲಲಿರುವುದು ಗೋಚರಿಸುತ್ತದೆ.

ಕೋಷ್ಟಕ-೨.೪

ವಿವಾಹ ಸಂದರ್ಭದಲ್ಲಿ ಬಳಿ ಅಥವಾ ಬರಿಯ ಆಧಾರ

ಕ್ರ.ಸಂ	ಬಳಿ ಅಥವಾ ಬರಿ ಆಧಾರ	ಸಂಖ್ಯೆ	ಶೇಕಡಾ
೧	ಹೌದು	೯೨	೯೨
೨	ಇಲ್ಲ	೦೮	೦೮
	ಒಟ್ಟು	**೧೦೦**	**೧೦೦**



ವಿವಾಹ ಸಂದರ್ಭದಲ್ಲಿ ಬಳಿ ಅಥವಾ ಬರಿಗೆ ಕೊಡುವ ಪ್ರಾಮುಖ್ಯತೆ- ಬಳಿ ಎಂದರೆ ಜಾತಿ ಒಳಗಿನ ಉಪಪಂಗಡ ಅಥವಾ ಒಂದೇ ತಲೆಮಾರಿನಿಂದ ಬಂದ ರಕ್ತ ಸಂಬಂಧಿಗಳು ಎಂದರ್ಥ. ಬಳಿ ಯಾ ಬರಿ ಒಟ್ಟು ವ್ಯಕ್ತಿಯ ತಾಯಿಯಿಂದ ಬರುತ್ತದೆ. ಈ ವ್ಯವಸ್ಥೆಯಲ್ಲಿ ಮಾತೃ ಪ್ರಾಧಾನ್ಯತೆ ಎದ್ದು ಕಾಣುತ್ತದೆ. ಒಂದೇ ಬಳಿಯ ಗಂಡು ಹೆಣ್ಣು ವಿವಾಹವಾದರೆ ಅಣ್ಣ ತಂಗಿ ವಿವಾಹವಾದಂತೆ ಎಂಬ ನಂಬಿಕೆ ಇದೆ. ಆದ್ದರಿಂದ ಸಾಮಾನ್ಯವಾಗಿ ಉಡುಪಿ ದಕ್ಷಿಣ ಕನ್ನಡದ ತುಳು ಸಮುದಾಯದಲ್ಲಿ ಈ ಪದ್ಧತಿಯನ್ನು ಚಾಚೂ ತಪ್ಪದೇ ಪಾಲಿಸುತ್ತಾರೆ. ಉಡುಪಿ ತಾಲೂಕಿನ ಮೊಗವೀರರಲ್ಲಿಯೂ ಶೇಕಡಾ ೯೨ ಮಂದಿ ವಿವಾಹ ಸಂದರ್ಭದಲ್ಲಿ ಬಳಿ ಪದ್ಧತಿಯ ನಿರ್ಣಯವನ್ನು ಆಚರಿಸುತ್ತಾರೆ. ಕೇವಲ ಶೇಕಡಾ ೮ ಮಂದಿ ಇದಕ್ಕೆ ಆರೋಪವೆನಿಸುತ್ತಾರೆ. ಕಾರಣ ಕೆಲವೊಮ್ಮೆ ಪ್ರೇಮ ವಿವಾಹ ಅಥವಾ ಹುಡುಗ-ಹುಡುಗಿಯ ಶೈಕ್ಷಣಿಕ ಹಾಗೂ ಔದ್ಯೋಗಿಕ ಮಟ್ಟದಲ್ಲಿ ಸಮಾನತೆ ಬಂದಾಗ ಇವುಗಳನ್ನು ಗೌಣವಾಗಿರುವುದು ಇತ್ತೀಚಿನ ವಾಡಿಕೆ.

ಕೋಷ್ಟಕ-೨.೫

ವಿಧವಾ ವಿವಾಹದ ವಿವರ

ಕ್ರ.ಸಂ	ವಿಧವಾ ವಿವಾಹದ ಸಮ್ಮತಿಸುವಿಕೆ	ಸಂಖ್ಯೆ	ಶೇಕಡಾ
೧	ಹೌದು	೧೫	೧೫
೨	ಇಲ್ಲ	೮೫	೮೫
	ಒಟ್ಟು	**೧೦೦**	**೧೦೦**

ಮೊಗವೀರರು ಸೇರಿದಂತೆ ಕರಾವಳಿ ಕರ್ನಾಟಕದ ಹಿಂದೂ ಜನಾಂಗಗಳಲ್ಲಿ ವಿಧವಾ ವಿವಾಹಕ್ಕೆ ಸಮ್ಮತಿ ಇರುವುದು ಅತ್ಯಂತ ಕಡಿಮೆ ಇದ್ದರೂ ಆ ವಿವಾಹವನ್ನು ಸಾಂಪ್ರದಾಯಕ ವಿವಾಹದ ಜೊತೆಗೆ ಸ್ವೀಕರಿಸುವವರು ಕಡಿಮೆ.

ಈ ಅಧ್ಯಯನದ ಪ್ರಕಾರ ಉಡುಪಿ ತಾಲೂಕಿನ ಮೊಗವೀರರಲ್ಲಿ ಶೇಕಡಾ ೧೫ ವಿಧವೆಯರಿಗೆ ಪುನರ್ ವಿವಾಹವಾಗಿದೆ. ಉಳಿದಂತೆ, ಶೇಕಡಾ ೮೫ ಮಂದಿ ವಿವಾಹವಾಗದೇ ಜೀವನ ಸಾಗಿಸುತ್ತಿದ್ದಾರೆ. ಪುನರ್ ವಿವಾಹವಾಗದೇ ಇರುವ ವಿಧವೆಯರಿಗೆ ತಮ್ಮದೇ ಆದ ಕಾರಣ ಇದೆ.ಅವುಗಳಲ್ಲಿ ಮೊದಲನೆಯದು ತಮ್ಮ ४५ ಯಾ ೫೦ರ ನಂತರ ಗಂಡನನ್ನು ಕಳೆದುಕೊಂಡಿರುವುದು, ಎರಡನೆಯದಾಗಿ ಓದುತ್ತಿರವ ಮಕ್ಕಳಿರುವವರು, ಮೂರನೆಯದಾಗಿ ಬೇರೆ ಗಂಡಸರನ್ನು ಮದುವೆಯಾಗಲು ಮನಸ್ಸೇ ಒಪ್ಪದಿರುವವರು. ವಿವಾಹವಾದವರಲ್ಲಿ ಬಹುತೇಕ ಮಂದಿ ೨೫ ರಿಂದ ೩೫ ವರ್ಷ ಪ್ರಾಯದವರು.ಇತ್ತೀಚಿನ ದಿನಗಳಲ್ಲಿ ಉಳಿದ ಸಮುದಾಯಗಳಂತೆ ಮೊಗವೀರರಲ್ಲೂ ವಿಧವಾ ಪುನರ್ ವಿವಾಹಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಪ್ರಾಯಶಃ ಇದೊಂದು ಮಹಿಳಾ ಸಬಲೀಕರಣದ ಸಂಕೇತ.

ಕೋಷ್ಟಕ-೨.೬

ಸರಕಾರಿ ಸವಲತ್ತುಗಳ ಅರಿವು


ಕ್ರ.ಸಂ	ಸರಕಾರಿ ಸವಲತ್ತುಗಳ ಅರಿವು	ಸಂಖ್ಯೆ	ಶೇಕಡಾ
೧	ಇದೆ	೩೮	೩೮
೨	ಇಲ್ಲ	೬೨	೬೨
	ಒಟ್ಟು	**೧೦೦**	**೧೦೦**

ಕೋಷ್ಟಕ ೨.೬ ರಲ್ಲಿ ಮೊಗವೀರ ಮಹಿಳೆಯರಲ್ಲಿ ಸರಕಾರಿ ಸವಲತ್ತುಗಳ ಅರಿವನ್ನು ಗಮನಿಸಿದಾಗ ಶೇಕಡಾ ೩೮ ಮಂದಿ ಮಾತ್ರ ಪ್ರಶ್ನೆಗೆ ಪರವಾದ ಉತ್ತರ ನೀಡಿದ್ದಾರೆ. ಶೇಕಡಾ ೬೨ ಮಂದಿಗೆ ಸರಕಾರಿ ಸವಲತ್ತುಗಳ ಅರಿವೇ ಇಲ್ಲ. ಈ ದತ್ತಾಂಶವನ್ನು ಗಮನಿಸಿದಾಗ ೨ ಮುಖ್ಯವಾದ ಅಂಶಗಳು ಗೋಚರವಾಗುತ್ತದೆ. ಒಂದು ಮಹಿಳೆಯರಲ್ಲಿ ಶಿಕ್ಷಣದ ಕೊರತೆ. ಎರಡು ಮೊಗವೀರರಲ್ಲಿ ಆರ್ಥಿಕ ಸಂಪನ್ಮೂಲಕ್ಕೆ ಒತ್ತು ಕೊಡುವವರು ಹೆಚ್ಚು.ಆದ್ದರಿಂದ ಬಂದರಿನಲ್ಲಿ ಅಥವಾ ಮೀನು ಮಾರುಕಟ್ಟೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಈ ರೀತಿಯ ಸರಕಾರಿ ಸವಲತ್ತುಗಳ ಕುರಿತಾದ ಮಾಹಿತಿಯನ್ನು ಗಳಿಸುವಲ್ಲಿ ಆಸಕ್ತಿ ತೋರಿಸುವುದಿಲ್ಲ. ಅನಕ್ಷರಸ್ಥ ಮತ್ತು ಆರೋಗ್ಯವಂತ ಮಹಿಳೆಯರು ಮೀನಿನ ಉದ್ಯಮದಲ್ಲಿ ತೊಡಗಿಸಿಕೊಳ್ಳುವುದು ಉಡುಪಿ ತಾಲೂಕಿನಲ್ಲಿ ಕಂಡುಬರುತ್ತದೆ. ಶಿಕ್ಷಿತ ಮತ್ತು ಸರಕಾರಿ ಉದ್ಯೋಗದತ್ತ ಒಲವು ತೋರಿಸುವ ಮಹಿಳೆಯರು ಸರಕಾರಿ ಸವಲತ್ತುಗಳ ಕುರಿತಾಗಿ ತಿಳಿದುಕೊಂಡಿದ್ದಾರೆ.

ಕೋಷ್ಟಕ-೨.೭

ಸರಕಾರಿ ಸವಲತ್ತುಗಳನ್ನು ತಿಳಿದುಕೊಂಡ ಕ್ಷೇತ್ರದ ವಿವರ

ಕ್ರ.ಸಂ	ಸರಕಾರಿ ಸವಲತ್ತುಗಳನ್ನು ತಿಳಿದುಕೊಂಡ ಕ್ಷೇತ್ರಗಳು	ಸಂಖ್ಯೆ	ಶೇಕಡಾ
೧	ಮನೆಯವರಿಂದ	೦೭	೭
೨	ಪಂಚಾಯತ್ ಸದಸ್ಯರಿಂದ	೦೪	೪
೩	ಸ್ಥಳೀಯ ನಾಯಕರಿಂದ	೧೨	೧೨
೪	ಇತರ ಮೂಲಗಳಿಂದ	೧೫	೧೫
	ಒಟ್ಟು	**೧೦೦**	**೧೦೦**




ಸರಕಾರಿ ಸವಲತ್ತುಗಳಿಗೆ ಉಡುಪಿಯ ಮೊಗವೀರ ಮಹಿಳೆಯರು ತಿಳಿದುಕೊಂಡ ಮೂಲಗಳ ಬಗ್ಗೆ ಪಡೆದ ಅಂಕಿ ಅಂಶಗಳನ್ನು ತೆಗೆದುಕೊಂಡಾಗ ಸರಕಾರಿ ಸವಲತ್ತುಗಳ ಬಗ್ಗೆ ನಾನಾ ಮೂಲಗಳಿಂದ ತಿಳಿದುಕೊಂಡಿದ್ದು, ಅವುಗಳಲ್ಲಿ ಮನೆಯವರ ಮುಖೇನ ಶೇಕಡಾ ೦೭, ಪಂಚಾಯತ್ ಸದಸ್ಯರಿಂದ ಶೇಕಡಾ ೦೪, ಸ್ಥಳೀಯ ನಾಯಕರುಗಳಿಂದ ಶೇಕಡಾ ೧೨ ಹಾಗೂ ಇತರ ಮೂಲಗಳಿಂದ ಶೇಕಡಾ ೧೦ ಮಂದಿ ಅರಿವು ಪಡೆದಿರುತ್ತಾರೆ. ಸ್ಥಳೀಯ ನಾಯಕರಿಂದ ಮತ್ತು ಪಂಚಾಯತ್ ಸದಸ್ಯರಿಂದ ಮಾಹಿತಿ ಪಡೆದವರೇ ಹೆಚ್ಚಾಗಿರಲು ಕಾರಣ ಅವರ ರಾಜಕೀಯ ಸಂಪರ್ಕ. ಪಂಚಾಯತ್ ಸದಸ್ಯರಿಂದಿಗೆ ಹೆಚ್ಚಿನವರು ಸಕಾರಾತ್ಮಕ ಸಂಬಂಧ ಹೊಂದಿದ್ದಾರೆ. ಇತರೆ ಮೂಲಗಳೆಂದರೆ ಇಲಾಖೆಗಳು ಮತ್ತು ಮಾಧ್ಯಮಗಳು.

ಕೋಷ್ಟಕ-೨.೮

ಸರಕಾರಿ ಸವಲತ್ತುಗಳನ್ನು ಬಳಸಿಕೊಂಡವರು

ಕ್ರ.ಸಂ	ಸರಕಾರಿ ಸವಲತ್ತುಗಳ ಬಳಸಿಕೊಳ್ಳಿರುವಿಕೆ	ಸಂಖ್ಯೆ	ಶೇಕಡಾ
೧	ಹೌದು	೪೨	೪೨
೨	ಇಲ್ಲ	೫೮	೫೮
	ಒಟ್ಟು	೧೦೦	೧೦೦



ಕೋಷ್ಟಕ ೨.೮ನ್ನು ಗಮನಿಸಿದಾಗ ಮೊಗವೀರರಲ್ಲಿಯೂ ಸರಕಾರಿ ಸವಲತ್ತುಗಳನ್ನು ಬಳಸಿಕೊಂಡವರು ಶೇಕಡಾ ೪೨ ಆಗಿರುತ್ತದೆ. ಶೇಕಡಾ ೫೮ ಮಂದಿ ಸರಕಾರಿ ಸವಲತ್ತುಗಳನ್ನು ಬಳಸಿಕೊಳ್ಳದಿರುವುದು ಈ ಕೋಷ್ಟಕದಿಂದ ತಿಳಿದು ಬರುತ್ತದೆ. ಇಲ್ಲಿ ವ್ಯಕ್ತವಾಗುವ ಅಂಶವೆಂದರೆ ಶಿಕ್ಷಣ ಪಡೆದಿದ್ದರೂ ಮೊಗವೀರ ಯುವಕ ಯುವತಿಯರು ವ್ಯಾಪಾರದತ್ತ ಒಲವು ತೋರಿಸಿರುವುದು ಕಡಿಮೆ. ಮಲ್ಪೆ, ಉದ್ಯಾವರ, ಬೆಂಗ್ರೆ, ಇತ್ಯಾದಿ ಪ್ರದೇಶಗಳಲ್ಲೂ ಮೀನುಗಾರಿಕೆ ಯುಕ್ತ ಯುವ ಜನತೆಯನ್ನು ಆಕರ್ಷಿಸುವ ಅಂಶಗಳು ಹೆಚ್ಚಾಗಿವೆ. ಮಹಿಳೆಯರಲ್ಲಿ ಶಿಕ್ಷಣದ ಮಟ್ಟ ಏರುತ್ತಿದ್ದರೂ ಸರಕಾರಿ ಉದ್ಯೋಗಗಳತ್ತ ಒಲವು ತೋರಿಸುವವರ ಸಂಖ್ಯೆ ಕಡಿಮೆ.

ಕೋಷ್ಟಕ-೨.೯

ಸ್ಥಳೀಯ ಆಡಳಿತದಲ್ಲಿ ಭಾಗವಹಿಸುವಿಕೆ

ಕ್ರ.ಸಂ	ಸ್ಥಳೀಯ ಆಡಳಿತದಲ್ಲಿ ಭಾಗವಹಿಸುವಿಕೆ	ಸಂಖ್ಯೆ	ಶೇಕಡಾ
೧	ಹೌದು	೩೪	೩೪
೨	ಇಲ್ಲ	೬೬	೬೬
	ಒಟ್ಟು	೧೦೦	೧೦೦

ಈ ಮೇಲಿನ ಕೋಷ್ಟಕದಲ್ಲಿ ಸ್ಥಳೀಯ ಆಡಳಿತದಲ್ಲಿ ಯಾ ರಾಜಕೀಯದಲ್ಲಿ ಭಾಗವಹಿಸುವಿಕೆಯು ಶೇಕಡಾ ೩೪ ರಷ್ಟಿದ್ದು ಶೇಕಡಾ ೬೬ ರಷ್ಟು ಮಂದಿ ಸ್ಥಳೀಯ ಆಡಳಿತದಿಂದ ದೂರವಿರುವುದನ್ನು ಕಾಣಬಹುದು. ಕಾರಣ ಬಹುತೇಕ ಜನರಿಗೆ ಆಡಳಿತದ ಕುರಿತಾದ ಮಾಹಿತಿ ಇಲ್ಲ. ಎಂದರೆ ರಾಜಕೀಯ ಪಾಲುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆಯು ರಾಜಕೀಯದಲ್ಲಿ (ವಿವಧ ಪಕ್ಷಗಳಲ್ಲಿ) ತೊಡಗಿಸಿಕೊಳ್ಳುವುದುನ್ನು ಗಮನಿಸಬಹುದಾಗಿದೆ. ಪ್ರತ್ಯಕ್ಷ ಮತ್ತು ಪರೋಕ್ಷ ರಾಜಕೀಯ ಪಾಲುಗಾರಿಗೆ ಮೊಗವೀರರಲ್ಲಿದೆ.

ಕೋಷ್ಟಕ-೨.೧೦

ಸ್ಥಳೀಯ ಆಡಳಿತದಲ್ಲಿ ಭಾಗವಹಿಸುವಿಕೆಯ ಕ್ಷೇತ್ರ

ಕ್ರ.ಸಂ	ಕ್ಷೇತ್ರಗಳು	ಸಂಖ್ಯೆ	ಶೇಕಡಾ
೧	ಗ್ರಾಮ ಪಂಚಾಯತ್	೦೩	೦೩
೨	ತಾಲೂಕು ಪಂಚಾಯತ್	೦	೦
೩	ಜಿಲ್ಲಾ ಪಂಚಾಯತ್	೦	೦
೪	ಅನ್ವಯಿಸುವುದಿಲ್ಲ	೯೭	೯೭
	ಒಟ್ಟು	೧೦೦	೧೦೦

ಕ್ಷೇತ್ರ ಕಾರ್ಯದಲ್ಲಿ ಪಡೆದ ಮಾಹಿತಿಯ ಪ್ರಕಾರ ಶೇಕಡಾ ೦೩ ಮಂದಿ ಮಹಿಳೆಯರು ಗ್ರಾಮ ಪಂಚಾಯತ್ ಸದಸ್ಯರಾಗಿ ವಿವಿಧ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ನಲ್ಲಿ ಮೊಗವೀರ ಮಹಿಳೆಯರ ರಾಜಕೀಯ ಪಾತ್ರ ಶೂನ್ಯವೆನ್ನಬಹುದು. ರಾಜಕೀಯ ಮೀಸಲಾತಿಯ ತೊಂದರೆಯೂ ಈ ಅಂಕಿ ಅಂಶಕ್ಕೆ ಪೂರಕವಾಗಿದೆ. ಆದರೆ ಸಮುದಾಯದ ಪುರುಷರು ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿಯೂ ಹಲವು ವರ್ಷಗಳಿಂದ ಆಡಳಿತ ನಡೆಸಿದ್ದಾರೆ.

ಕೋಷ್ಟಕ-೨.೧೧
ಮಹಿಳಾ ಮಂಡಲಗಳ ಸದಸ್ಯತ್ವ

ಕ್ರ.ಸಂ	ಮಹಿಳಾ ಮಂಡಳಗಳ ಸದಸ್ಯತನ	ಸಂಖ್ಯೆ	ಶೇಕಡಾ
೧	ಇದೆ	೬೩	೬೩
೨	ಇಲ್ಲ	೩೭	೩೭
	ಒಟ್ಟು	೧೦೦	೧೦೦

ಉಡುಪಿ ಜಿಲ್ಲೆಯಲ್ಲಿ ಮಹಿಳೆಯರ ಸಂಖ್ಯೆಯು ಪ್ರಬಲವಾಗಿದ್ದು ಜಿಲ್ಲಾ ಮಟ್ಟದ, ತಾಲೂಕು ಮಟ್ಟದ ಹಾಗೂ ಸ್ಥಳೀಯ ಮಹಿಳಾ ಸಂಘಟನೆಗಳ ಸಂಖ್ಯೆಯೂ ಬಹಳಷ್ಟಿದೆ. ಮೊಗವೀರ ಮಹಿಳೆಯರು ಕೂಡ ಸಾಕಷ್ಟು ಸಂಖ್ಯೆಯುಲ್ಲಿ ಮಹಿಳಾ ಮಂಡಳಿಗಳಲ್ಲಿ ಸದಸ್ಯರಾಗಿ ಸಕ್ರೀಯರಾಗಿರುವುದನ್ನು ಕಾಣಬಹುದು. ಅಂಕಿಅಂಶಗಳ ಪ್ರಕಾರ ಶೇಕಡಾ ೬೩ ಮಂದಿ ಮಹಿಳೆಯರು ವಿವಿಧ ಸಂಘಟನೆಗಳ ಸದಸ್ಯರಾಗಿದ್ದಾರೆ. ವಿಶೇಷವೆಂದರೆ ಮಹಿಳಾ ಮೀನುಗಾರರ ಸಂಘವೂ ಸಕ್ರೀಯರಾಗಿ ಕಾರ್ಯನಿರ್ವಹಿಸುತ್ತಿರುವ ಸಂಘಟನೆಯಾಗಿದೆ. ಮಹಿಳಾ ಸಬಲೀಕರಣಕ್ಕೆ ಮಹಿಳಾ ಸಂಘಟನೆಗಳು ಸಾಕಷ್ಟು ಕೆಲಸ ಮಾಡಿವೆ. ಶೇಕಡಾ ೨೫ ಮಂದಿ ಇದರಿಂದ ಹೊರಗುಳಿದವರು ಮನೆಯೊಡತಿಯರಾಗಿ ಯಾವುದೇ ಸಾರ್ವಜನಿಕ ಸಂಘಟನೆಗಳಲ್ಲಿ ಸೇರಿಕೊಳ್ಳುವ ಅವಕಾಶವಿಲ್ಲದೇ ಇರುವವರು.

ಕೋಷ್ಟಕ-೨.೧೨
ಮೀನುಗಾರಿಕೆ ಲಾಭದಾಯಕ ವೃತ್ತಿಯೇ ಎನ್ನುವುದರ ವಿವರ

ಕ್ರ.ಸಂ	ಮೀನುಗಾರಿಕೆ ಲಾಭದಾಯಕ ವೃತ್ತಿಯೆ	ಸಂಖ್ಯೆ	ಶೇಕಡಾ
೧	ಹೌದು	೭೫	೭೫
೨	ಇಲ್ಲ	೨೫	೨೫
	ಒಟ್ಟು	೧೦೦	೧೦೦

ಮೀನುಗಾರಿಕೆ ಲಾಭದಯಕವೇ ಎಂಬ ಪ್ರಶ್ನೆಗೆ ಸಕಾರಾತ್ಮಕ ಉತ್ತರವೇ ದೊರೆತಿದ್ದು ಶೇಕಡಾ ೭೫ ಮಂದಿ ಲಾಭದಾಯಕ ವೃತ್ತಿಯೆಂದೇ ಉತ್ತಿರಿಸಿದರು.ಆದರೆ ಶೇಕಡಾ ೨೫ ಮಂದಿ ಮೀನುಗಾರಿಕೆ ಲಾಭದಾಯಕವಲ್ಲ ಎಂಬ ಉತ್ತರ ನೀಡಿದ್ದಾರೆ. ಬಂಡವಾಳ ಹೂಡದೇ ಮೀನುಗಾರಿಕೆಯಲ್ಲಿ ಗಳಿಸುವುದರಿಂದ ಅದನ್ನು ಲಾಭದಾಯಕವೆಂದು ಹೇಳಲಾಗಿದೆ. ಮಾತ್ರವಲ್ಲದೇ ಇತೀಚಿಗೆ ಹೊರದೇಶಗಳಿಗೆ ರಫ್ತಾಗುತ್ತಿರುವುದರಿಂದ ಮೀನುಗಾರಿಕೆಯಿಂದ ಬರುವ ಲಾಭವು ಹೆಚ್ಚಾಗಿವೆ. ಮಹಿಳೆಯರು ಉಡುಪಿ, ಆದಿ ಉಡುಪಿ, ಮಲ್ಪೆ, ಸಂತೆಕಟ್ಟೆ, ಅಂಬಾಗಿಲು, ಉದ್ಯಾವರ, ಕಾಪು, ಬ್ರಹ್ಮಾವರ ಇತ್ಯಾದಿ ಮಾರುಕಟ್ಟೆಗಳಲ್ಲಿ ಬಹುಸಂಖ್ಯೆಯಲ್ಲಿ ಕಂಡುಬರುತ್ತಾರೆ.

ಸ್ವ ಸಹಾಯ ಸಂಘಗಳಲ್ಲಿ ಸದಸ್ಯತ್ವ ಹೆಚ್ಚಾಗಿ ಇವೆ. ಸಾಲ ತೆಗೆದುಕೊಳ್ಳುವಿಕೆ ಇದರಲ್ಲಿ ಹೆಚ್ಚಾಗಿರುತ್ತದೆ. ಕಾರಣ ಕಡಿಮೆ ಬಡ್ಡಿ ಹಾಗೂ ಸಾಲ ತೆಗೆದುಕೊಳ್ಳುವ ವಿಧಾನಗಳು ಬ್ಯಾಂಕ್‌ಗಳಿಗೆ ಹೋಲಿಸಿದಾಗ ಸುಲಭವಾಗಿರುವುದಕ್ಕಾಗಿ ವಿದ್ಯೆ ಹಾಗೂ ಭಾಷೆಯ ಸಮಸ್ಯೆಗಳಿಗಾಗಿ ಹಾಗೂ ವ್ಯಕ್ತಿಗತವಾಗಿ ಸಾಲ ದೊರೆಯುವಲ್ಲಿನ ವೇಗಕ್ಕಿಂತ ಸ್ವಸಹಾಯಸಂಘಕ್ಕೆ ದೊರೆಯುವ ವೇಗ ಅತ್ಯಧಿಕ. ಮಹಿಳಾ ಮಂಡಲಗಳು ಭಜನಾ ಮಂದಿರದ ನೇತೃತ್ವದ ಮಹಿಳಾ ಮಂಡಲಗಳಾಗಿದ್ದು ಅವುಗಳಲ್ಲಿಸದಸ್ಯತ್ವ ಸರ್ವೇ ಸಾಮಾನ್ಯವಾಗಿದೆ.

ಕೋಷ್ಟಕ-೨.೧೩

ಮಹಿಳೆಯರು ವೃತ್ತಿಯ ಜೊತೆಗೆ ಮನೆಯ ನಿಭಾಯಿಸುವಿಕೆ

ಕ್ರ.ಸಂ	ವೃತ್ತಿಯ ಜೊತೆಗೆ ಮನೆಯ ನಿಭಾಯಿಸುವಿಕೆ	ಸಂಖ್ಯೆ	ಶೇಕಡಾ
೧	ಇದೆ	೧೦೦	೧೦೦
೨	ಇಲ್ಲ	೦	೦
	ಒಟ್ಟು	**೧೦೦**	**೧೦೦**

ಕೋಷ್ಟಕ ೨.೧೩ ರಲ್ಲಿ ಮೀನು ಮಾರುವ ವೃತ್ತಿಯ ಜೊತೆಗೆ ಮನೆಯನ್ನು ನಿಭಾಯಿಸುತ್ತಿರಾ ಎಂದು ಕೇಳಿರುವ ಪ್ರಶ್ನೆಗೆ ಶೇಕಡಾ ೧೦೦ ಮಾಹಿತಿದಾರರೂ ಹೌದು ಎಂಬ ಉತ್ತರವನ್ನೇ ಕೊಟ್ಟಿರುತ್ತಾರೆ. ಮೀನು ಮಾರಾಟದಲ್ಲಿ ತೊಡಗಿರುವ ಮಹಿಳೆಯರು ಮಧ್ಯಮವರ್ಗದ ಕುಟುಂಬದವರಾಗಿದು ಎಲ್ಲರಿಗೂ ಮನೆಯ ಹಾಗೂ ಮಕ್ಕಳ ಜವಾಬ್ದಾರಿ ಇದೆ.

ಮೀನುಗಾರಿಕೆಯ ಸಮಸ್ಯೆಗಳು- ಮೀನುಗಳ ದೊರೆಯುವಿಕೆ ಅನ್ವಯಿಸಿ ಬೆಲೆ ನಿರ್ಧರಿತವಾಗಿರುತ್ತದೆ. ಬಿಸಿಲು ಮಳೆ ಗಾಳಿ (ಪ್ರಾಕೃತಿಕ ವಿಕೋಪಗಳು) ಇರುವಂತಹ ಪ್ರದೇಶಗಳಲ್ಲಿ ದುಡಿಮೆ. ಹೆಚ್ಚು ಮೀನುಗಳು ಬಂದ ದಿನ ಮೀನಿನ ದರ ಕಡಿಮೆಯಾಗುವುದು. ಇದರಿಂದ ಮೀನುಗಾರರಿಗೆ ಲಾಭದಾಯಕವಾಗಿಲ್ಲದೇ ಇರುವುದು. ಮೀನುಗಳು ದೊರೆಯುವಿಕೆ ಒಂದೇ ರೀತಿಯಾಗಿಲ್ಲದೇ ಇರುವುದು.ಮೀನುಗಾರ ವೃತ್ತಿಯಲ್ಲಿ ನಿರತರಾದವರಿಗೆ ಸಮಯದ ಸಮಸ್ಯೆಗಳು ಜಾಸ್ತಿ ಇರುವುದು. ಆರಂಭ ಬೆಳಿಗ್ಗೆ ೫ ರಿಂದ ರಾತ್ರಿಯವರೆಗೆ ದುಡಿಯುವಂತಹ ವೇಳೆಯಲ್ಲಿ ಮಕ್ಕಳ ಕಡೆಗೆ ಕುಟುಂಬದ ಕಡೆಗೆ ಜಾಸ್ತಿ ಗಮನ ಹರಿಸಲು ಸಾಧ್ಯವಾಗದೇ ಹೋಗುವುದು. ಮಕ್ಕಳ ಶಿಕ್ಷಣದ ಕಡೆಗೆ ಗಮನ ಹರಿಸದೇ ಹೋಗುವುದು ಇದರಿಂದ ಮತ್ತೆ ಮತ್ತೆ ಮೀನುಗಾರಿಕೆಯನ್ನು ಅವಲಂಬಿಸುವಂತಹ ಪರಿಸ್ಥಿತಿ. ಜೀವನ ನಿರ್ವಹಣೆಗೆ ಮೀನುಗಾರಿಕೆ ಇದೆ ಎಂಬ ಭಾವನೆ ವಿದ್ಯೆಯನ್ನು ಕಲಿಯುವಲ್ಲಿ ಹಿಂದೇಟು ಹಾಕುವಂತೆ ಪ್ರೇರೇಪಿಸುವುದು. ದುಡಿದು ಗಳಿಸಿದ ಆದಾಯದಲ್ಲಿ ಉಳಿತಾಯ ಮಾಡಬೇಕೆಂಬ ಜ್ಞಾನದ ಕೊರತೆ (ಶಿಕ್ಷಣದ ಕೊರತೆ) ಬೇರೆ ಬೇರೆ ಉದ್ಯಮಗಳಲ್ಲಿ ವಿನಿಯೋಗಿಸದೇ ಇರುವುದು ಮೀನುಗಾರರ ಸಮಸ್ಯೆಯಾಗಿದೆ.

ಕೋಷ್ಟಕ-೨.೧೪

ಸರಕಾರದ ಸಹಾಯ ಬಯಸುವಿಕೆ

ಕ್ರ.ಸಂ	ಸರಕಾರದ ಸಹಾಯ ಬಯಸುವಿಕೆ	ಸಂಖ್ಯೆ	ಶೇಕಡಾ
೧	ಬೇಕು	೮೫	೮೫
೨	ಬೇಡ	೧೫	೧೫
	ಒಟ್ಟು	**೧೦೦**	**೧೦೦**

ಮೀನುಗಾರಿಕೆ ಸರ್ಕಾರದ ಸಹಾಯಬೇಕೆ? ಎಂಬ ಪ್ರಶ್ನೆಗೆ ಶೇಕಡಾ ೮೫ ಮಂದಿ ಬೇಕು ಎಂದರೆ ಕೇವಲ ಶೇಕಡಾ ೧೫ ಮಂದಿ ಮಾತ್ರ ಬೇಡ ಎಂಬ ಉತ್ತರ ನೀಡಿದ್ದಾರೆ. ಮೀನುಗಾರ ಮಹಿಳೆಯರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು ವ್ಯವಸ್ಥಿತ ಮಾರುಕಟ್ಟೆ, ಮೀನು ಮಾರಾಟಕ್ಕೆ ಬೇಕಾಗುವ ಪ್ಲಾಸ್ಟಿಕ್‌ಟಬ್, ಇಂಧನ ಸಬ್ಸಿಡಿ ಇತ್ಯಾದಿಗಳನ್ನು ಬಹುಪಾಲು ಮಹಿಳೆಯರು ನಿರೀಕ್ಷಿಸುತ್ತಾರೆ.

ಕೋಷ್ಟಕ-೨.೧೫

ಸ್ವಸಹಾಯ ಸಂಘಗಳಲ್ಲಿನ ಸದಸ್ಯತ್ವ

ಕ್ರ.ಸಂ	ಸ್ವಸಹಾಯ ಸಂಘಗಳಲ್ಲಿನ ಸದಸ್ಯತ್ವ	ಸಂಖ್ಯೆ	ಶೇಕಡಾ
೧	ಇದೆ	೮೦	೮೦
೨	ಇಲ್ಲ	೨೦	೨೦
	ಒಟ್ಟು	**೧೦೦**	**೧೦೦**

ಕೋಷ್ಟಕ ೨.೧೫ ರಲ್ಲಿ ಸ್ವಸಹಾಯ ಸಂಘಗಳಲ್ಲಿನ ಸದಸ್ಯತ್ವದ ಕುರಿತಾಗಿ ಕೇಳಿದಾಗ ಶೇಕಡಾ ೮೦ ಮಂದಿ ವಿವಿಧ ಸ್ವಸಹಾಯ ಗುಂಪು/ಸಂಘಗಳಲ್ಲಿ ಸದಸ್ಯರಾಗಿರುವುದು ಕಂಡು ಬಂತು. ಆದರೆ ಶೇಕಡಾ ೨೦ ಮಂದಿ ಯಾವ ಸ್ವಸಹಾಯ ಸಂಘದಲ್ಲಿ ಸದಸ್ಯತ್ವ ಹೊಂದದಿರುವುದು ಅವಲೋಕನದಲ್ಲಿ ಕಂಡು ಬಂದಿದೆ. ಈ ಶೇಕಡಾ ೨೦ ಮಂದಿಗೆ ಕೌಟುಂಬಿಕ ಹಾಗೂ ವೈಯಕ್ತಿಕ ಒತ್ತಡಗಳಿಂದಾಗಿ ಇಷ್ಟವಿದ್ದರೂ ಸದಸ್ಯರಾಗುವುದು ಕಷ್ಟವಾಗಿದೆ. ಸ್ವಸಹಾಯ ಸಂಘಗಳು, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣಕ್ಕೆ ಅಧ್ಯಯನ ಪ್ರದೇಶದಲ್ಲಿ ಸಹಕರಿಸಿವೆ.

ಕೋಷ್ಟಕ-೨.೧೬

ಸಾಲದ ವಿವರ

ಕ್ರ.ಸಂ	ಸಾಲ ಪಡೆದುಕೊಂಡವರು	ಸಂಖ್ಯೆ	ಶೇಕಡಾ
೧	ಹೌದು	೭೩	೭೩
೨	ಇಲ್ಲ	೨೭	೨೭
	ಒಟ್ಟು	೧೦೦	೧೦೦

ಮೊಗವೀರ ಮಹಿಳೆಯರ ಆರ್ಥಿಕ ಮಟ್ಟದ ನಿರ್ಧಾರಕವಾಗಿ ಸಾಲ ಪಡೆದವರ ಬಗೆಗಿನ ಮಾಹಿತಿ ಪಡೆಯಲಾಯಿತು. ಶೇಕಡಾ ೭೩ ಮಂದಿ ಮೀನುಗಾರ ಮಹಿಳೆಯರು ವಿವಿಧ ರೀತಿಯಲ್ಲಿ ಸಾಲಗಾರರಾಗಿದ್ದಾರೆ. ಶೇಕಡಾ ೨೭ ಸಾಲ ರಹಿತರಾಗಿ ಜೀವನ ಮಾಡುತ್ತಿದ್ದಾರೆ. ಸಾಲ ಪಡೆಯಲು ಬಡತನ ಒಂದೇ ಕಾರಣ ಎನ್ನಲಾಗುವುದಿಲ್ಲ. ಸ'ರಕಾರದ ಸಬ್ಸಿಡಿ ಯೋಜನೆಯಡಿಯಲ್ಲಿ ಸಿಗುವ ಸಾಲಗಳನ್ನು ಹತ್ತಾರು ಮಂದಿ ಬಳಸಿಕೊಂಡವರಿದ್ದಾರೆ.ಜೊತೆಗೆ ಸ್ವಸಹಾಯ ಸಂಘಗಳ ಮುಂಗಡವನ್ನು ಪಡೆದವರ ಸಂಖ್ಯೆ ಗುರುತರವಾಗಿದೆ. ಮೀನು ಮಾರಾಟದ ಅಭಿವೃದ್ಧಿ ಮಾತ್ರವಲ್ಲದೆ ಕೌಟುಂಬಿಕ ಕಾರಣಗಳಿಗೂ ಸಾಲ ಪಡೆದವರಿದ್ದಾರೆ.

ವೃತ್ತೀಯ ವಿನ್ಯಾಸ

ನಿರ್ದಿಷ್ಟ ಕಾಲಗಣನೆ ಹೇಳಲು ಅಸಾಧ್ಯವಾದರೂ ಬಹಳ ಹಿಂದಿನ ಕಾಲದಿಂದಲೇ ವೃತ್ತಿ ಆಧಾರಿತವಾದ ಜಾತಿ ಪದ್ಧತಿಯು ಭಾರತದಲ್ಲಿ ಪ್ರಚಲಿತವಾಗಿದೆ. ಪ್ರತೀ ಜಾತಿಗೂ ಒಂದಿ ನಿರ್ದಿಷ್ಟ ಕಸುಬಿದ್ದು ಅದನ್ನೇ ಕುಲ ಅಥವಾ ವಂಶ ಪಾರಂಪರ್ಯವಾಗಿ ಅವಲಂಬಿಸಲಾಗಿದೆ. ಹಳ್ಳಿಗಳಲ್ಲಿ ಹಲವು ಜಾತಿಗಳು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಈಗಲೂ ಅವಲಂಬಿಸಿ ಬದುಕುತ್ತಿದ್ದಾರೆ. ಈ ವೃತ್ತಿ ಅಥವಾ ಕಸುಬು ಜಾತಿಯ ಪಾವಿತ್ರ್ಯವನ್ನು ಲೇಪಿಸಿಕೊಂಡು ಇತರ ಕಸುಬಿನವನು ಮಾಡುವ ಬಗ್ಗೆ ಮಾಲಿನ್ಯವೆಂದೇ ಪರಿಗಣಿಸಿಕೊಂಡು ಬಂದುದು ಖೇದಕರ ವಿಚಾರ. ಹೀಗೆ ಬ್ರಾಹ್ಮಣರು ಪೌರೋಹಿತ್ಯ, ಅಧ್ಯಾಪನ, ವೈದ್ಯಕೀಯ, ಆಡಳಿತ ಇತ್ಯಾದಿಗಳನ್ನು ತಮ್ಮ ಕುಲಕಸುಬನ್ನಾಗಿ ಪಾರಂಪರ್ಯವಾಗಿ ನಡೆಸಿಕೊಂಡಿರುತ್ತಾರೆ. ಕ್ಷತ್ರಿಯರು ರಾಜ್ಯಗಳನ್ನು ಕಟ್ಟಿಕೊಂಡು ಆಕ್ರಮಣಕಾರರಿಂದ ಪ್ರಜೆಗಳನ್ನು ರಕ್ಷಿಸುವ ಕಾರ್ಯ ವಹಿಸಿಕೊಂಡಿದ್ದರು. ಇನ್ನಿತರ ಹಲವು ಜಾತಿವರ್ಗದವರು ಬಗೆ ಬಗೆಯ ವೃತ್ತಿಗಳನ್ನು ಹೊಂದಿಕೊಂಡಿದ್ದಾರೆ. ಅಸ್ಪೃಶ್ಯರೆಂದು ಕರೆಸಿಕೊಳ್ಳುವವರು ಚರ್ಮದ ಕೆಲಸ, ಸತ್ತ ಪ್ರಾಣಿಗಳನ್ನು ಎತ್ತುವ ಅಥವಾ ಇನ್ನಿತರ ಹೀನ ವೃತ್ತಿಗಳನ್ನೇ ಅವಲಂಬಿಸಬೇಕಿತ್ತು.

ಮಧ್ಯಮ ವರ್ಗದ ಕೆಲವು ಜಾತಿಗಳವರು ಬುದ್ಧಿವಂತಿಕೆ ಹಾಗೂ ಶಾರೀರಿಕ ಶ್ರಮಗಳೆರಡೂ ಅಗತ್ಯವಿದ್ದ ಕೆಲವು ವೃತ್ತಿಗಳನ್ನು ಮಾಡುವ ಸಂಪ್ರದಾಯ ಬೆಳೆಯಿತು. ನೇಯ್ಗೆ, ಕುಂಬಾರಿಕೆ, ಬಡಗಿ ಕೆಲಸ, ಕಮ್ಮಾರಿಕೆ ಇತ್ಯಾದಿ ಹಲವಾರು ಈ ಜನರು ವೃತ್ತಿಗಳಾಗಿ ಸಾಗಿ ಬಂತು.

ಈ ವೃತ್ತಿಗಳು ಪರಸ್ಪರ ಪೂರಕವಾಗಿ ಸಮಾಜಕ್ಕೆ ಹಿತಕಾರಿಯಾಗಿ ಸಾಗಿದುವು ಆರ್ಥಿಕ ಸಂಘಟನೆಗೆ ಇವೆಲ್ಲವೂ ಅವಶ್ಯವಿದ್ದ ಕಾರಣ ಹಳ್ಳಿಗಳಲ್ಲಿ ಒಗ್ಗಟ್ಟು ಮತ್ತು ಸಾಮರಸ್ಯ ನೆಲಸಲು ಸಹಕಾರಿಯಾಯಿತು.

ವೃತ್ತೀಯ ಹಿನ್ನೆಲೆಯು ಉತ್ಪಾದನೆಯ ಹಲವು ಅವಶ್ಯಕತೆಗಳನ್ನು (ಭೂಮಿ, ಬಂಡವಾಳ ಮತ್ತು ಶ್ರಮ) ಒಳಗೊಂಡಿತ್ತು. ಈ ಅವಶ್ಯಕತೆಗಳ ಸೌಲಭ್ಯ ಹೊಂದಿದ ದಾತಾರರ ಸ್ಥಾನಮಾನಗಳು ಅವರ ಜೀವನ ಮಟ್ಟವನ್ನು ನಿರ್ಧರಿಸುತ್ತಿದ್ದುವು. ಕುಟುಂಬಗಳೂ, ಜಾತಿಗಳೂ ತಾವು ಹೊಂದಿದ ಭೂಮಿ, ಸಂಪತ್ತುಗಳಿಂದ ಮೇಲು, ಕೀಳು ಎಂಬ ಪರಿಗಣನೆಯನ್ನು ಹೊಂದುವಂತಾಯಿತು.

ಒಬ್ಬ ವ್ಯಕ್ತಿಯ ಬದುಕಿಗೆ ಯಾವುದೇ ವೃತ್ತಿಯು ಅತೀ ಅವಶ್ಯ. ಶ್ರಮ ಹಾಗೂ ಶ್ರಮ ರಹಿತ ಕಸುಬುಗಳು ಜಾತಿ ವಿಂಗಡನೆಗೆ ಕಾರಣವಾಗಿ ಸಾಂಪ್ರದಾಯಿಕವಾಗಿ ಮಾರ್ಪಟ್ಟು ಯಾವುದೇ ಬದಲಾವಣೆಗೆ ಸಾಧ್ಯವಾಗದಷ್ಟು ಗಟ್ಟಿಯಾಗಿ ತಳವೂರಿದುವು.

ಭಾರತದ ಹೆಚ್ಚಿನ ಕಡೆಗಳಲ್ಲಿ ಕುಲಾಲರು ಕೃಷಿ ಭೂಮಿಯನ್ನು ಹೊಂದಿರುವರು. ಬಹುತೇಕ ಮಂದಿ ಪರಿಶ್ರಮಿಗಳಾಗಿ ಕೂಲಿ ಕೆಲಸವನ್ನು ಮಾಡುತ್ತಿರುವರು. ಹಲವು ಕಾಮಗಾರಿಗಳಲ್ಲಿ ಶ್ರಮಿಕರಾಗಿಯೂ ಇನ್ನು ಕೆಲವರು ಶ್ರೀಮಂತರ ಆಳುಗಳಾಗಿಯೂ ದುಡಿಯುತ್ತಿರುವರು. ಮತ್ತೆ ಕೆಲವರು ಹೊಲಿಗೆ, ಕಸೂತಿ ಇತ್ಯಾದಿಗಳಿಂದ ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಂಡು ಜೀವನ ನಡೆಸುತ್ತಿರುವ ವಿಚಾರ ಕಂಡು ಬಂದಿದೆ. ಅತೀ ಕಡಿಮೆ ಜನ ಮಾತ್ರ ಸಂಪ್ರದಾಯಬದ್ಧವಾದ ಕುಲಕಸುಬಿನಿಂದ ನಿರ್ವಹಣೆ ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಕೆಲವೇ ಮಂದಿ ಮೊಗವೀರರು ಸಾರ್ವಜನಿಕ ವಲಯಗಳಲ್ಲಿ ದುಡಿಯುತ್ತಿದ್ದಾರೆ.

ಹಳ್ಳಿಗಳಲ್ಲಿ ಶೇಕಡಾ ೨೦ ರಷ್ಟು ಮೊಗವೀರರು ಒಂದಿಷ್ಟು ಜಮೀನನ್ನು ಹೊಂದಿಕೊಂಡು ಕೃಷಿಯನ್ನು ಅವಲಂಬಿಸಿದ್ದಾರೆ. ಕೆಲವರು ಭೂಮಿ ರಹಿತರಾಗಿದ್ದರೂ ಇನ್ನಿತರ ಕಡೆ ಕೃಷಿಕಾರ್ಯಗಳನ್ನು ಮಾಡುತ್ತಾರೆ. ನಿರ್ದಿಷ್ಟ ಅವಧಿಗೆ ಗೇಣಿಗೆ ಭೂಮಿಯನ್ನು ಪಡೆದೂ ಕೃಷಿ ಮಾಡುವವರನ್ನೂ ಕಾಣಬಹುದು. ಹೆಚ್ಚಿನವರು ಭೂಮಾಲೀಕರ ಅಧೀನದಲ್ಲಿ ಕೃಷಿ ಕೆಲಸ ಮಾಡಿ ಸಂಬಳ ಪಡೆಯುತ್ತಾರೆ. ಈ ಗಳಿಕೆಯೇ ಹಲವರ ಜೀವನಾಧಾರವಾಗಿದೆ. ಈ ಶ್ರಮಿಕರಿಗೆ ಸ್ವಂತ ಭೂಮಿ ಇರುವುದಿಲ್ಲ.ಕೆಲವರಿಗೆ ಅತ್ಯಲ್ಪ ಭೂಮಿ ಇದ್ದರೂ ಜೀವನ ನಿರ್ವಹಣೆಗೆ ಬೇರೆ ಕಡೆ ಕೆಲಸ ಮಾಡಬೇಕಾಗುತ್ತದೆ. ಕೆಲವೆಡೆ ವಾರಕ್ಕೊಮ್ಮೆ ಹಣ ಅಥವಾ ಧಾನ್ಯ ರೂಪದಲ್ಲಿ ಸಂಬಳ ಕೊಡುವ ಪದ್ಧತಿಯು ಇದೆ.


ಹೀಗೆ ಮೊಗವೀರರು ಹಲವಾರು ಕಸುಬುಗಳನ್ನು ಇತ್ತೀಚೆಗೆ ನಡೆಸುತ್ತಿದ್ದರೂ ಕುಲಕಸುಬನ್ನು ಆಧರಿಸಿ ನಡೆಸಿಕೊಂಡು ಬರುತ್ತಿರುವ ಬಹಳಷ್ಟು ಮಂದಿಯನ್ನು ಉಡುಪಿ ತಾಲೂಕಿನಲ್ಲಿ ಕಾಣಬಹುದು. ಹಲವೆಡೆ ಮಕ್ಕಳೂ ತಮ್ಮ ಹಿರಿಯರ ವೃತ್ತಿಯನ್ನೇ ಮುಂದುವರಿಸುತ್ತಿದ್ದಾರೆ. ಉದ್ಯಮಿಗಳ ಮತ್ತು ಇತರ ಹುದ್ದೆಗಳಲ್ಲಿರುವವರು ಮಕ್ಕಳು ಮಾತ್ರ ವ್ಯಾಪಾರ, ಉತ್ತಮ ನೌಕರಿ ಮತ್ತು ಇತರ ಉದ್ಯಮಗಳಲ್ಲಿ ತೊಡಗಿದ್ದಾರೆ.

ಮೊಗವೀರರ ಆದಾಯವು ಅನಿರ್ದಿಷ್ಟವಾದ ಕಾರಣ ಅವರ ಖರ್ಚುವೆಚ್ಚಗಳಿಗೂ ಯಾವುದೇ ಯೋಜನೆಯಿಲ್ಲ. ಅವರು ವಾರ್ಷಿಕ, ಮಾಸಿಕ ಅಥವಾ ಸಾಪ್ತಾಹಿಕವಾಗಿಯಾದರೂ ಏನಾದರೂ ಉಳಿತಾಯ ಮಾಡುವ ಪರಿಪಾಠವನ್ನು ರೂಢಿಸಿಕೊಂಡಿಲ್ಲ.ಯಾವುದೇ ಒಂದು ವಸ್ತುವು ಇಲ್ಲವೆಂದಾದಲ್ಲಿ ಅವರ ಕೈಯಲ್ಲಿರುವ ಹಣದ ತಾಕತ್ತಿನ ಮೇಲೆಯೇ ಹೊಂದಿಕೆಯಾಗುವ ಗುಣಮಟ್ಟದ ವಸ್ತುವನ್ನು ಖರೀದಿಸಲಾಗುತ್ತದೆ. ಅಂತೆಯೇ ಬಟ್ಟೆ ಬರೆಗಳನ್ನು ಕೂಡಾ ಕೇವಲ ಯಾವುದಾದರೂ ಹಬ್ಬ ಯಾ ವಿಶೇಷ ಸಂದರ್ಭಗಳಲ್ಲಿ ಮಾತ್ರ ಕೊಂಡುಕೊಳ್ಳುತ್ತಾರೆ. ಸಾಮಾನ್ಯವಾಗಿ ಒಬ್ಬ ಮೊಗವೀರನು ತನ್ನ ಗಳಿಕೆಯನ್ನೆಲ್ಲಾ ಖರ್ಚು ಮಾಡುತ್ತಾನಲ್ಲದೇ ಉಳಿಕೆಯೆಂಬುದು ಶೂನ್ಯ. ಇದ್ದಾಗ ಸಾಕಷ್ಟು ವೆಚ್ಚ ಮಾಡುವುದೂ ಇಲ್ಲದಿರುವಾಗ ಸುಮ್ಮನೆ ಇದ್ದುಬಿಡುವುದೂ ಕಂಡುಬರುತ್ತದಲ್ಲದೆ ಒಂದು ರೀತಿಯ ಯೋಜನಾರಹಿತ ಅಜಾಗ್ರತಾ ಜೀವನವು ಕಾಣಸುತ್ತದೆ.

ಕೋಷ್ಟಕ-೨.೧೭

ಸಾಲ ಪಡೆದುಕೊಂಡಿರುವ ಕ್ಷೇತ್ರ

ಕ್ರ.ಸಂ		ಸಂಖ್ಯೆ	ಶೇಕಡಾ
೧	ಬ್ಯಾಂಕ್	೬	೬
೨	ಸಹಕಾರಿ ಸಂಘ	೧೮	೧೮
೩	ಸ್ವ ಸಹಾಯ ಸಂಘ	೪೦	೪೦
೪	ಫೈನಾನ್ಸ್	೦	೦
೫	ಇತರೆ	೯	೯
	ಒಟ್ಟು	**೧೦೦**	**೧೦೦**



ಕೋಷ್ಟಕ ೨.೧೭ರಲ್ಲಿ ಸಾಲ ಪಡೆದ ಕ್ಷೇತ್ರದ ಬಗೆಗಿನ ಮಾಹಿತಿಯಲ್ಲಿ ಶೇಕಡಾ ೪೦ ರಷ್ಟು ಮಹಿಳೆಯರು ಸ್ವಸಹಾಯ ಸಂಘಗಳಿಂದ ಸಾಲ ಪಡೆದಿರುತ್ತಾರೆ. ಅದನ್ನು ಬಿಟ್ಟರೆ ಶೇಕಡಾ ೨೫ ಮಂದಿ ಸಹಕಾರಿ ಸಂಘಗಳಿಂದ ಶೇಕಡಾ ೬ ಮಂದಿ ವಿವಿಧ ಬ್ಯಾಂಕ್‌ಗಳಿಂದ ಮತ್ತು ಶೇಕಡಾ ೯ ಮಂದಿ ಇತರ ಮೂಲಗಳಿಂದ ಸಾಲ ಪಡೆದಿರುತ್ತಾರೆ. ವಿಶೇಷವಾಗಿ ಗಮನಿಸಲ್ಪಟ್ಟ ಅಂಶವೆಂದರೆ ಮಾಹಿತಿದಾರರಲ್ಲಿ ಯಾರೊಬ್ಬರೂ ಫೈನಾನ್ಸ್‌ಗಳಿಂದ ಸಾಲ ಪಡೆದಿಲ್ಲ.

ಮೇಲಿನ ದತ್ತಾಂಶದ ಮೂಲಕ ತಿಳಿಯಬಹುದಾದ ಅಂಶವೆಂದರೆ ಸ್ವಸಹಾಯ ಸಂಘಗಳ ಸಾಲಕ್ಕೆ ಕಡಿಮೆ ಬಡ್ಡಿ ದರದ ಸಾಲವನ್ನು ಪಡೆಯಲಾಗಿದೆ. ಅದೇ ರೀತಿ ಸಹಕಾರಿ ಸಂಘ ಮತ್ತು ಬ್ಯಾಂಕ್‌ಗಳಿಂದಲೂ ಗ್ರಾಹಕ ಪರ ಯೋಜನೆ ಸಾಲ ಪಡೆಯಲಾಗಿದೆ. ಇತರ ಮೂಲಗಳು ಮಾತ್ರ ದುಬಾರಿಯಾಗಿದ್ದು ತೀರಾ ಅಗತ್ಯವಿರುವ ಕುಟುಂಬಗಳು ಈ ಸಾಲಕ್ಕೆ ಮಾರು ಹೋಗಿವೆ.

ಆರ್ಥಿಕ ಅಸ್ಥಿರತೆಯು ನಗರ ಪ್ರದೇಶಗಳಿಗೆ ಸೀಮಿತವಾಗಿರುವುದು ಈ ಅಧ್ಯಯನದಿಂದ ತಿಳಿದು ಬರುತ್ತದೆ. ಸಾಮಾಜಿಕ ಪದರದ ಪದ್ಧತಿಯು ಮೂಲಭೂತ ವಿಚಾರಗಳ ಚಲನೆಗೆ ಒಳಪಡುತ್ತಿದೆ. ಇತ್ತೀಚೆಗೆ ನಗರ ಪ್ರದೇಶಗಳಲ್ಲಿ ಜನ ಸಮುದಾಯವು ಆಧುನಿಕತೆಯತ್ತ ಬಾಗುತ್ತಿರುವುದುರಿಂದ ಜನಜೀವನದಲ್ಲಿ ಅಸ್ಥಿರತೆಯು ಹೆಚ್ಚುತ್ತಿದೆ. ಮೊಗವೀರರ ಆರ್ಥಿಕ ಮತ್ತು ಸಾಮಾನ್ಯ ಆದಾಯ ಸ್ಥಿತಿಗತಿಗಳನ್ನು ಅವಲೋಕಿಸಿದರೆ ತಕ್ಕುದಾದ ಸುಧಾರಣಾ ಮಟ್ಟವು ಕಂಡುಬರುವುದಿಲ್ಲ. ಅವರ ಆಯವ್ಯಯಗಳ ನಿಖರ ಮಾಹಿತಿಯೂ ದೊಕುವುದಿಲ್ಲ. ಹಳ್ಳಿಗಳಲ್ಲಿರುವವರು ತಮ್ಮ ಜೀವನದ ವಿಚಾರಗಳನ್ನು ಹೊರಗೆಡಲು ಇಚ್ಛಿಸದೆ ಗುಟ್ಟಾಗಿ ಇರಿಸಿಕೊಳ್ಳುತ್ತಾರೆ. ಎರಡನೆಯದಾಗಿ ಈ ಕುರಿತಾದ ಪ್ರಶ್ನೆಗಳು ಕೇವಲ ಸಂಶೋಧಕರ ಅಧ್ಯಯನಕ್ಕೆ ಮಾತ್ರ ಸೀಮಿತವೆಂದೇ ತಿಳಿದುಕೊಳ್ಳುತ್ತಾರೆ. ಇದರಿಂದಾಗಿ ಈ ನಿಟ್ಟಿನಲ್ಲಿ ಅಧ್ಯಯನವು ಅಪೂರ್ಣವೆಂದೇ ಹೇಳಬೇಕಾಗುತ್ತದೆ. ಸಂಶೋಧನಕಾರರು ಈ ಮಾಹಿತಿಯು ಕೇವಲ ಅಧ್ಯನಕ್ಕೇ ಮಾತ್ರವಲ್ಲದೆ ಅವರ ಆಸಕ್ತಿಯ ವಿರುದ್ಧವಾಗಿ ಅಲ್ಲವೆಂದು ಮನದಟ್ಟು ಮಾಡಿದರೂ ಕೆಲವರು ಅರ್ಥಮಾಡಿಕೊಳ್ಳಲಿಲ್ಲ. ಇದರಿಂದಾಗಿ ಮೊಗವೀರರ ಜೀವನದ ಆದಾಯದ ಬಗ್ಗೆ ನಿಖರವಾದ ಮಾಹಿತಿಯು ದೊರಕಲಿಲ್ಲವೆಂದೇ ಹೇಳಬಹುದು.

ಉಲ್ಲೇಖಗಳು:

೧. ಅಕ್ಷತಾ, ೨೦೧೦, **"ಎ ಸ್ಟಡಿ ಒನ್ ಸೋಶಿಯೋ ಎಕಾನಮಿಕ್ ಪ್ರೊಬ್ಲಮ್ಸ್ ಆಫ್ ಫಿಶ್ ವೆಂಡಿಂಗ್ ಮೊಗವೀರ ವುಮೆನ್ ಇನ್ ಉಡುಪಿ ತಾಲೂಕು",**

೨. ಚನ್ನಮ್ಮ ಕೆ.ಸಿ., ೨೦೧೦, **"ಮಹಿಳೆ ದುಡಿಮೆ ಏಕರೂಪತೆಯ ಪ್ರಶ್ನೆ"**,

೩. ವೆಂಕಟರಾಜ ಪುಣಿಚತ್ತಾಯ, ೧೯೯೩, **"ಮೊಗವೀರ ಸಂಸ್ಕೃತಿ",**

೪. ಶಶಿಕಲ, ೨೦೧೦, "ಮೊಗವೀರ ಸಮುದಾಯದ ಮಹಿಳೆಯರ ಶೈಕ್ಷಣಿಕ ಸಾಧನೆಗಳ ನಿರ್ಧಾರಕಗಳು: ಒಂದು ಸಮಾಜ ಶಾಸ್ತ್ರೀಯ ಅಧ್ಯಯನ",

೫. ಸುಪ್ರೀತಾ, ೨೦೧೨, **"ಸೋಶಿಯೋ -ಇಕಾನಮಿಕ್ ಕಂಡೀಷನ್ಸ್ ಆಫ್ ಖಾರ್ವಿ ಕಮ್ಯೂನಿಟಿ ಎ ಸ್ಟಡಿ ಇನ್ ಕುಂದಾಪುರ ತಾಲೂಕು",**

೬. ಅಸಿತಾ, ೨೦೧೧, **" ಎ ಸ್ಟಡಿ ಓನ್ ಸ್ಟೇಟಸ್ ಆಫ್ ಮೊಗವೀರ ಕಮ್ಯೂನಿಟಿ ಇನ್‌ವಾಲ್ವಿಂಗ್ ಇನ್ ಫಿಶಿಂಗ್ ಇನ್ ಮಲ್ಪೆ",**

೭. ಉಚ್ಚಿಲ ಎಸ್.ಕೆ., ೨೦೧೩, **"ಎ ಸ್ಟಡಿ ಆಫ್ ಮೊಗವೀರ ಕಮ್ಯೂನಿಟಿ",**

ಅಧ್ಯಾಯ-೩

ಅಧ್ಯಾಯ-೩

ಮೊಗವೀರ ಸಮುದಾಯದ ಮಹಿಳೆಯರ ಶೈಕ್ಷಣಿಕ ಸಾಧನೆಗಳ ನಿರ್ಧಾರಕಗಳು

ಭಾರತದ ಪೌರೋಹಿತ್ಯ ಪದ್ಧತಿಯ ಸಮಾಜದಲ್ಲಿ ಕೆಳವರ್ಗದ ಜನರಿಗೆ ಉನ್ನತ ಶಿಕ್ಷಣದ ಅವಕಾಶವಿರಲಿಲ್ಲ. ಒಂದು ವೇಳೆ ಈ ವರ್ಗದವರ ಶಿಕ್ಷಣಾಧಿತ್ಯದಿಂದ ಹೆಬ್ಬಯಕೆಗಳು ಮೂಡಿದರೆ ಉಳಿದವರಿಗೆ ಕಷ್ಟವಾಗಬಹುದು ಎಂಬ ಅನಿಸಿಕೆಯಿದ್ದಿರಲೂ ಬಹುದು ಆದುದರಿಂದ ಸಮಾಜದ ಉನ್ನತ ವರ್ಗದವರಿಗೆ ಮಾತ್ರ ಉಚ್ಚ ಶಿಕ್ಷಣವು ಸರ್ವರ ಹಕ್ಕಾಗಿದೆ. ಜಾತೀಯ ಹೊಂದಾಣಿಕೆಗಳು ಸಮಾಜದ ಎಲ್ಲಾ ವರ್ಗಗಳಿಗೂ ವರ್ಗಾಯಿಸಲ್ಪಟ್ಟು, ಪ್ರತಿಯೊಬ್ಬರೂ ತನ್ನ ಗುರಿಯನ್ನು ಸಾಧಿಸಲೂ, ಶಿಕ್ಷಣ ಹೊಂದಲೂ ಶಕ್ಯನೂ, ಅರ್ಹನೂ ಆಗಿರುವನೆಂಬ ಮನೋಭಾವನೆಯು ಕಂಡುಬರುತ್ತಿದೆ. ಈ ಬಗೆಯ ಶೈಕ್ಷಣಿಕ ಉದಾರೀಕರಣದ ಗಾಳಿಯೂ ಮೊಗವೀರರೆಡೆಗೂ ಬೀಸಿ ಅವರ ಜೀವನ ಕ್ರಮದ ಪರಿವರ್ತನೆಗೆ ದಾರಿ ಮಾಡಿಕೊಟ್ಟಿದೆ.

ಶಿಕ್ಷಣವು ಸಾಧನೆಗಳ ಪರಿಣಾಮಕಾರಿಯಾದ ಒಂದು ಸಾಧನವಾಗಿದೆ. ವ್ಯಕ್ತಿಯ ಚಾರಿತ್ರ್ಯ, ಸಂಸ್ಕೃತಿ, ವಿವೇಚನೆ, ನೈಪುಣ್ಯತೆ, ಜ್ಞಾನ ಮುಂತಾದ ಮಾನವನ ಜೀವನಕ್ಕೆ ಸಂಬಂಧಿಸಿದ ಅಂಶಗಳನ್ನು ಶಿಕ್ಷಣವು ತುಂಬ ಹತ್ತಿರದಿಂದ ಅವಲಂಬಿಸಿದೆ. ಮಾನವ ಸಮಾಜ ನಿರಂತರವಾಗಿ ಸಾಗಲು ಶಿಕ್ಷಣವೇ ಕಾರಣ. ಪರಂಪರೆ, ಸಂಸ್ಕೃತಿ, ಸಂಪ್ರದಾಯಗಳನ್ನು ಹಿರಿಯರಿಂದ ಕಿರಿಯರಿಗೆ ಸಾಗಿಸುವಲ್ಲಿ ಶಿಕ್ಷಣವು ತುಂಬಾ ಮಹತ್ವದ ಪಾತ್ರವನ್ನು ವಹಿಸುತ್ತದೆ. ಶಿಕ್ಷಣವು ಮಾನವನಿಗೆ ಅಜ್ಞಾನದಿಂದ ಜ್ಞಾನದ ಕಡೆಗೆ ಕರೆದು ತರುವ ಮುಖ್ಯ ಸಾಧನವಾಗಿದೆ. ಶಿಕ್ಷಣವು ಮಾನವನಲ್ಲಿಯ ಹೊಸ ಹೊಸ ವಿಚಾರ, ಆಲೋಚನೆ ಹಾಗೂ ಆಸೆ-ಆಕಾಂಕ್ಷೆಗಳು ಬೆಳೆಯುವಂತಾಗಲು ಸಹಾಯ ಮಾಡುವುದು.

ಪಿಟರಿಮ್ ಎ. ಸಾರೊಕಿನ್ರವರು "ಶಿಕ್ಷಣವು ಮೇಲ್ಮುಖ ಚಲನೆಯ ವಾಹಕ. ಅಂದರೆ ಶಿಕ್ಷಣವು ವ್ಯಕ್ತಿಗಳನ್ನು ಅವರ ಸಾಂಪ್ರದಾಯಿಕ ಜೀವನ ಶೈಲಿಯಿಂದ ಆಧುನಿಕ ಜೀವನ ಶೈಲಿಯತ್ತ ಪರಿವರ್ತಿಸುವ ಶಕ್ತಿಯನ್ನು ಹೊಂದಿದೆ" ಎಂದಿದ್ದಾರೆ.

ಡಾ. ಜಾನ್‌ಸನ್ರವರು "ಶಿಕ್ಷಣ ಮನಸ್ಸು ಬುದ್ಧಿಯನ್ನು ರೂಪಿಸುತ್ತದೆ. ಶಿಕ್ಷಣದ ಸ್ವರೂಪ ವಿಧಾನದ ಮೇಲೆ ಮನುಷ್ಯನನ್ನು ಕೆಟ್ಟ ಅಥವಾ ಒಳ್ಳೆಯ ಮನುಷ್ಯನನ್ನಾಗಿ ಮಾಡುತ್ತದೆ" ಎಂದಿದ್ದಾರೆ. ಶಿಕ್ಷಣದ ಮೂಲಕವೇ ಮೇಲೆ ಬರಬಹುದು. ಅಶಿಕ್ಷಿತರಿಗಿಂತಲೂ ಸುಶಿಕ್ಷಿತರು ಹೆಚ್ಚು ಸಂಚಲನೆನ್ನು ಹೊಂದಿದವರಾಗಿದ್ದಾರೆ.

ಶಿಕ್ಷಣವು ಮನುಷ್ಯನಿಗೆ ಹೊಸ ಆಕಾರ ಕೊಡುತ್ತದೆ. ಶಿಕ್ಷಣವು ಸಾಮಾಜಿಕ,ಆರ್ಥಿಕ, ರಾಜಕೀಯ, ಹಾಗೂ ಸಾಮಾಜಿಕ ಹಲವಾರು ಕ್ಷೇತ್ರಗಳಲ್ಲಿ ಬದಲಾವಣೆಯನ್ನುಂಟು ಮಾಡುವಲ್ಲಿ, ಮಹತ್ವದ ಪಾತ್ರ ವಹಿಸುತ್ತದೆ. ಸಾಮಾಜಿಕ ಹಾಗೂ ವ್ಯಕ್ತಿಗಳ ಕಾರ್ಯ ಸುಗಮವಾಗಿ ಸಾಗಬೇಕಾದರೆ ಶಿಕ್ಷಣವು ತುಂಬಾ ಅವಶ್ಯಕ. ಸಮಾಜ ಮುಂದುವರಿಯುವುದಕ್ಕೆ ಶಿಕ್ಷಣ ಜೀವನಾಡಿ ಇದ್ದ ಹಾಗೆ. ಈ ನಿಟ್ಟಿನಲ್ಲಿ ಕೊಜರ್ ಮತ್ತು ಪಾಂಡ್ಯ (೧೯೯೨:ಪು-೧೧) ರವರು ಶಿಕ್ಷಣದಿಂದ, ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಅಲ್ಲದೆ ಸಾಂಪ್ರದಾಯಿಕವಾಗಿ ಮನುಷ್ಯ ಮುಂದೆ ಬರುತ್ತಾನೆ. ಹೀಗಾಗಿ ಅವರ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳಲ್ಲಿ ಬದಲಾವಣೆ ಹೊಂದುವುದಲ್ಲದೆ ತನ್ನ ಗುರಿಗಳನ್ನು ತಲುಪಲು ಸಾಧ್ಯವಾಗಿದೆ. ಶಿಕ್ಷಣವು ಮೇಲ್ಮುಖ ಸಾಮಾಜಿಕ ಚಲನೆಗೆ ಅವಕಾಶವನ್ನುಂಟು ಮಾಡುತ್ತದೆ. ಸಾರ್ವತ್ರಿಕ ಮಾನವನ ಹಕ್ಕುಗಳಲ್ಲಿ ಶಿಕ್ಷಣವು ಒಂದಾಗಿದೆ" ಎಂದಿದ್ದಾರೆ.

ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಕಾರಣವಾದ ಶಿಕ್ಷಣವು ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ಶಿಕ್ಷಣವು ಕಡ್ಡಾಯವಾಗಿದ್ದು, ಸಾರ್ವತ್ರಿಕವಾಗಿ ಬೋಧಿಸಲಾಗುತ್ತಿದೆ. ಪ್ರತಿಯೊಂದು ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ ಚಿಕ್ಕ ಚಿಕ್ಕ ಸಮುದಾಯಗಳು ಸಹ ಶಿಕ್ಷಣವನ್ನು ಪಡೆಯುತ್ತಿದೆ.ತಲಾ ತಲಾಂತರದಿಂದ ಶೋಷಣೆಗೊಳಗಾದ ಹಲವು ಸಮುದಾಯದವರು ಶಿಕ್ಷಣ ಪಡೆದು ತಮ್ಮ ಸಾಮಾಜಿಕ, ಆರ್ಥಿಕ ಸ್ಥಿತಿಗಳನ್ನು ಹಾಗೂ ತಮ್ಮ ಸ್ಥಾನಮಾನಗಳಲ್ಲಿ ಬದಲಾವಣೆಗಳನ್ನು ಕಂಡುಕೊಳ್ಳುತ್ತಿದ್ದಾರೆ.ಅವರಲ್ಲಿ ಮೊಗವೀರ ಸಮುದಾಯವೂ ಒಂದಾಗಿದ್ದು, ಸುಶಿಕ್ಷಿತರಾಗಿ ತಮ್ಮ ಜೀವನ ಶೈಲಿಯನ್ನು ಯಾವ ರೀತಿಯಾಗಿ ಬದಲಾಯಿಸಿಕೊಂಡಿದ್ದಾರೆ ಎಂಬುದನ್ನು ತಿಳಿಯುವ ಪ್ರಯತ್ನವು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಮಹಿಳೆಯರು ಮತ್ತು ಶಿಕ್ಷಣ

ಒಂದು ದೇಶದ ಸಂಸ್ಕೃತಿ ಹಾಗೂ ನಾಗರಿಕತೆಗಳು ಹೇಗೆ ಆ ದೇಶದ ಶಿಕ್ಷಣದ ಫಲವೋ, ಹಾಗೆಯೇ ಆ ಸಂಸ್ಕೃತಿ ಸ್ತ್ರೀಗೆ ಕೊಟ್ಟ ಸ್ಥಾನಮಾನ ಆಕೆಗೆ ಬದುಕಲು ಮಾಡಿಕೊಟ್ಟ ಅವಕಾಶ ಇವುಗಳನ್ನು ಆ ಸಂಸ್ಕೃತಿಯ ಮೌಲ್ಯಮಾಪನದ ಅಳತೆಗೋಲು ಎನ್ನಬಹುದು.

ವೇದಗಳ ಕಾಲದಲ್ಲಿ –ವೇದಗಳು ವಿಶ್ವದಲ್ಲೇ ಅತ್ಯಂತ ಪ್ರಾಚೀನವಾದ ಸಾಹಿತ್ಯ.ಹಿಂದೂಗಳ ಮೊಟ್ಟಮೊದಲ ಶಾಸ್ತ್ರಗ್ರಂಥ.ವೇದಗಳ ಕಾಲದ ಸ್ತ್ರೀಯರು ೨೦ನೇ ಶತಮಾನದ ಆಧುನಿಕ ಹಿಂದೂ ಮಹಿಳೆಗಿಂತ ಹೆಚ್ಚು ಸ್ವತಂತ್ರಳಾಗಿದ್ದಳು. ಆಸ್ತಿಯಲ್ಲಿ ಸಮಪಾಲಿತ್ತು. ಸ್ತ್ರೀ ವಿದ್ಯಾಭ್ಯಾಸಕ್ಕೆ ಸಂಪೂರ್ಣ ಪ್ರೋತ್ಸಾಹವಿತ್ತು. ಅಂತರ್‌ಜಾತಿಯ ವಿವಾಹ ಮನ್ನಣೆ ಪಡೆದಿತ್ತು. ಮಾತ್ರವಲ್ಲದೇ ಅಪಾಲ, ಗಾರ್ಗಿ, ಮೈತ್ರೇಯಿ, ವಿಶ್ವಪರಾ ಈ ಮುಂತಾದ ಮಹಿಳೆಯರು ಆ ಕಾಲದಲ್ಲಿ ಅಧ್ಯಯನ ಮಾಡಿದ್ದುದರಿಂದ ಸ್ತ್ರೀಯರಿಗೆ ಇದ್ದಂತಹ ಸ್ವಾತಂತ್ರ್ಯವನ್ನು ತಿಳಿದುಕೊಳ್ಳಬಹುದಾಗಿದೆ. ಅಲ್ಲದೆ ಇತರ ದೇಶದ ಸ್ತ್ರೀಯರ ಸ್ಥಾನಮಾನವನ್ನು ತಿಳಿದುಕೊಳ್ಳಬಹುದಾಗಿದೆ. ಅಂದರೆ ರೋಮನ್, ಅಥೆನ್, ಗ್ರೀಕ್ ಇತ್ಯಾದಿ ದೇಶದ ಮಹಿಳೆಯರಿಗೆ ಹೋಲಿಸಿದಾಗ ಭಾರತದ ಮಹಿಳೆಯರ ಸ್ಥಾನಮಾನ ಉತ್ತಮವಾಗಿತ್ತು ಎಂದು ಹೇಳಬಹುದಾಗಿದೆ.

ಸದ್ಬೋಧ ಚಂದ್ರಿಕೆ ಎಂಬ ಗ್ರಂಥವನ್ನು ಗೃಹಿಣಿಯರು ಹಿರಿಯರ ಕಣ್ಣು ತಪ್ಪಿಸಿ ತಮ್ಮ ಗೃಹಕೃತ್ಯಗಳನ್ನು ಬದಿಗಿರಿಸಿ ಓದುತ್ತಿದ್ದರು. ಎಂದರೆ ಮಹಿಳೆಯರಿಗೆ ಶಿಕ್ಷಣ ಮತ್ತು ಸಾಹಿತ್ಯದ ಬಗ್ಗೆ ಎಷ್ಟು ಆಸಕ್ತಿ ಇತ್ತು ಎಂಬುದನ್ನು ತಿಳಿಯಬಹುದಾಗಿದೆ. ಹಲವಾರು ಸಣ್ಣ ಕತೆಗಳನ್ನು ಓದಿದಂತಹ ಮಹಿಳೆಯರು (ಪ್ರತಿಭಾವಂತರು) ಪ್ರಭಾವಿತರಾಗಿ ತಾವೂ ಬರವಣಿಗೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದವು.ಲಲಿತ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆಯಲ್ಲಿ ಬರುವ ವೀರಚಕ್ರ ಪಡೆದ 'ಶಿವಾನಿ' ಹಾಗೂ ಆತನ ಮಡದಿ 'ಹೊನ್ನಿ'ಯ ಚಿತ್ರಣವನ್ನು ಗಮನಿಸಿದಾಗ ಶಿವಾನಿಯು ವೀರಚಕ್ರ ಪಡೆದರೂ ಕೂಡಾ ಹಳ್ಳಿಯ ಮನೆಯಲ್ಲಿ ವಾಸ್ತವ್ಯ ಹೂಡಿದಂತಹ ಸಂದರ್ಭದಲ್ಲಿ ಸೊಳ್ಳೆ, ಸುಂಡ, ತಿಗಣೆಗಳಿಗೆ ಹೆದರಿ ನಿದ್ರಿಸದೆ ಇದದ್ದು ಅಂತಹ ಸಂದರ್ಭದಲ್ಲಿ ಮಡದಿಯು ಸುಂಡ, ಸೊಳ್ಳೆಗಳನ್ನು ಬಿಸಾಕಿ ಗಂಡನ ಶೌರ್ಯವನ್ನು ಹೂದಲಿಸುವುದನ್ನು ಗಮನಿಸಿದಾಗ ಸ್ತ್ರೀಯರು ಧೈರ್ಯವಂತರು, ಶೂರರು ಹಾಗೂ ಎಲ್ಲಾ ಕ್ಷೇತ್ರದಲ್ಲೂ ಆಸಕ್ತಿಯನ್ನು ಹೊಂದಿದ್ದರು ಎಂಬ ಅಂಶವು ಮನದಟ್ಟಾಗುತ್ತದೆ.

ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಸಾಹಿತ್ಯ ಸೃಷ್ಟಿಗೆ ಲಿಂಗಬೇಧವಿಲ್ಲವಾದರೂ ನಿರ್ಮಿತವಾದ ಸಾಹಿತ್ಯ ಆಯಾ ವ್ಯಕ್ತಿಯ ಮನೋಭಾವನೆಗಳ ಪ್ರತಿಬಿಂಬವೆನ್ನಿಸುವುದರಿಂದ ಅವರಲ್ಲಿ ವ್ಯತ್ಯಾಸವಿದ್ದೇ ಇರುತ್ತದೆ. ಸ್ತ್ರೀ ಪುರುಷರಲ್ಲಿ ಪ್ರಕೃತಿ ಜನ್ಯ ಭಿನ್ನತೆಗಳಿರುವುದರಿಂದ ಅವರು ರಚಿಸುವ ಸಾಹಿತ್ಯದಲ್ಲಿ ಭೇದಗಳಿರುವುದು ಸ್ವಾಭಾವಿಕ. ಮಹಿಳೆಯರ ಕಥೆ-ಕಾದಂಬರಿಗಳಲ್ಲಿ ಆದರ್ಶದ ಮುಚ್ಚು

ಆವೇಶಗಳಿರುವುದಿಲ್ಲ. ಸಾಮಾಜಿಕ ಅನ್ಯಾಯಗಳ ಬಗ್ಗೆ ಆಕ್ರೋಶವಾಗಲೀ, ಸಂಪ್ರದಾಯಗಳ ವಿರುದ್ಧ ಬಂಡಾಯವಾಗಲೀ ನಮಗೆ ಕಂಡುಬರುವುದಿಲ್ಲ. ಅವು ಭಾವಗೀತೆಗಳಂತೆ ನಮ್ಮ ಬುದ್ಧಿಗಿಂತಲೂ ಹೃದಯಕ್ಕೆ ನೇರವಾಗಿ ತಲುಪಿ ಒಂದು ಅನಿರ್ವಚನೀಯವಾದ ಆನಂದವನ್ನು ಉಂಟುಮಾಡುತ್ತದೆ.

ಸ್ತ್ರೀಯರ ಕಥೆ-ಕಾದಂಬರಿಗಳ ಇನ್ನೊಂದು ಗಮನಾರ್ಹ ಅಂಶವೆಂದರೆ ಅವುಗಳ ಪ್ರಮಾಣಿಕತೆ ತಮ್ಮ ಅನುಭವದ ಪರಿಧಿಯಲ್ಲಿ ಬಾರದ ವಿಷಯಗಳನ್ನು ಅವರು ಕಥಾವಸ್ತುವಾಗಿ ಆಯ್ದುಕೊಳ್ಳುವುದು ಅಪರೂಪ ಅವರ ಈ ಪ್ರಮಾಣಿಕತೆಯೇ ಅವರ ಕೃತಿಗಳನ್ನು ಹೆಚ್ಚು ಜನಪ್ರಿಯಗೊಳಿಸಿದೆ. ಮಾತ್ರವಲ್ಲದೆ ಅವರು ರಚಿಸುವ ಕತೆಗಳಲ್ಲಿ ಬರುವ ಸನ್ನಿವೇಶಗಳು, ಸಂಭಾಷಣೆಗಳು, ಪಾತ್ರಗಳು, ಎಲ್ಲವೂ ನಾವು ನಿತ್ಯವೂ ಕಾಣುವ ಜನಜೀವನದ ಪ್ರತಿಬಿಂಬವಿರುವುದರಿಂದ ಅವರ ಕೃತಿಗಳು ವಾಸ್ತವವೆನಿಸುತ್ತದೆ. ಅತಿರೇಕದ ವರ್ತನೆಯಾಗಲಿ, ಶಬ್ಧ ಆಡಂಬರವಾಗಲಿ, ಪಾಂಡಿತ್ಯ ಪ್ರದರ್ಶನವಾಗಲಿ ಅವುಗಳಲಿಲ್ಲ.

ಶಿಕ್ಷಣ ವ್ಯಕ್ತಿ ಅಥವಾ ಸಮಾಜದ ಪ್ರಗತಿಗೆ ಕಾರಣವಾಗಿರುವಂತ ಅತ್ಯಂತ ಪ್ರಮುಖ ಹಾಗೂ ಪ್ರಬಲ ಸಾಧನ ಎಂದರೂ ತಪ್ಪಾಗಲಾರದು. ಆದರೆ, ಭಾರತೀಯ ಸಮಾಜದಲ್ಲಿ ಶತಮಾನಗಳಿಂದಲೂ ಮಹಿಳೆಯರಿಗೆ ಲಭ್ಯವಿರುವ ಶಿಕ್ಷಣಾವಕಾಶಗಳು ಪುರುಷನಿಗೆ ಹೋಲಿಸಿದಾಗ ಕಡಿಮೆ. ಹಿಂದೆಂದಿಗಿಂತ ಇಂದು, ಸಂಖ್ಯಾತ್ಮಕ ದೃಷ್ಟಿಯಿಂದ ಮಹಿಳೆಯರಿಗೆ ಶಿಕ್ಷಣದ ಅವಕಾಶಗಳಲ್ಲಿ ಹೆಚ್ಚಳ ಉಂಟಾಗಿರುವುದು ನಿಜವಾದರೂ, ಈ ಹೆಚ್ಚಿರುವ ಅವಕಾಶಗಳ ಹಂಚಿಕೆಯಲ್ಲಿ ಸಮಾನತೆ ಕಂಡು ಬರುತ್ತಿಲ್ಲ. ಪ್ರಾಚೀನ ಕಾಲದಲ್ಲಿ ಮಹಿಳೆಯರ ಸ್ಥಿತಿ ಉತ್ತಮವಾಗಿತ್ತು. ಅವರು ಯಾವುದೇ ಬಗೆಯ ತಾರತಮ್ಯಕೆ ಒಳಗಾಗಿರಲಿಲ್ಲ ಎಂಬ ವಾದವನ್ನು ಕೇಳುತ್ತಾ ಬಂದಿದ್ದೇವೆ. ಆದರೆ ಯಾವುದೇ ಕಾಲದಲ್ಲಿ ಸ್ತ್ರೀ-ಪುರುಷರಿಗೆ ಸಮಾನ ಶೈಕ್ಷಣಿಕ ಅವಕಾಶಗಳು ಇರಲಿಲ್ಲವೆಂಬುದು ನೈಜವಾಗಿ ಇದ್ದಂಥ ಪರಿಸ್ಥಿತಿ. ಶತಮಾನಗಳಿಂದ ಹೆಣ್ಣಿನ ಬದುಕನ್ನು ವಿವಾಹ ಮತ್ತು ತಾಯ್ತನಗಳೆಂಬ ಎರಡು ಸಂಕೋಲೆಗಳಲ್ಲಿ ಬಂಧಿಸಿ, ಆಕೆಗೆ ಶಿಕ್ಷಣವನ್ನು ಪಡೆಯುವ ಹಕ್ಕನ್ನು ನಿರಾಕರಿಸುತ್ತಾ ಬಂದಿರುವ ಸಾಮಾಜಿಕ ಮೌಲ್ಯಗಳು ಆಕೆಯನ್ನು ಅಜ್ಞಾನದ ಕೂಪದಲ್ಲಿ ಕೆಡವಲು ಬಹು ಆಸಕ್ತಿಯನ್ನು ತೋರಿವೆ. ಹೆಣ್ಣಿಗೆ ಶಿಕ್ಷಣ ವರ್ಜ್ಯ ಎಂಬ ಸುಳ್ಳನ್ನು ಸೃಷ್ಟಿಸಿ, ಆ ಸುಳ್ಳಿಗೆ ಧಾರ್ಮಿಕ ಬೆಂಬಲವೂ ಇದೆಯೆಂಬ ಪ್ರಚಾರವನ್ನು ನೀಡಿ ಪುರುಷ ಪ್ರಧಾನ ವ್ಯಕ್ತಿಗಳೂ ಹೆಣ್ಣನ್ನು ಬಹುಕಾಲ ಜ್ಞಾನಾರ್ಜನೆಯ ಪ್ರಕ್ರಿಯೆಯಿಂದಲೇ ದೂರವಿಟ್ಟಿದ್ದರು. ಹೆಣ್ಣಾದವಳು ಬಾಲ್ಯದಲ್ಲಿ ತಂದೆಯ ಪೋಷಣೆಯಲ್ಲೂ ಇರಬೇಕೆಂದು ಪ್ರತಿಪಾದಿಸಿ 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದ ಮನುವಿನ ಸ್ತ್ರೀ ಸ್ವಾತಂತ್ರ್ಯ ವಿರೋಧಿ ಮೌಲ್ಯಗಳು ಇಂದಿಗೂ ಸಂಪೂರ್ಣವಾಗಿ ನಶಿಸಿ ಹೋಗಿಲ್ಲವೆಂಬುದು ಸಮಕಾಲೀನ ಸಮಾಜದ ವಿಪರ್ಯಾಸಗಳಲ್ಲಿ ಒಂದು. ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಿದರೂ, ಅದು ಅವರು ಮನೆಯಲ್ಲಿ ನೆರವೇರಿಸುವಂತಹ ಕೆಲಸಗಳಿಗೆ ಸಂಬಂಧಿಸಿದ್ದಾಗಿತ್ತೇ ಹೊರತು ಅವರಿಗೆ ಪ್ರಾಪಂಚಿಕ ಜ್ಞಾನವನ್ನು ನೀಡಲಾಗಲಿ, ಅವರ ಬದುಕಿನ ಮೇಲೆ ಅವರು ನಿಯಂತ್ರಣವನ್ನು ಸಾಧಿಸಲಾಗಲಿ ಅವರಿಗೆ ಆ ಶಿಕ್ಷಣ ನೆರವಾಗುತ್ತಿರಲಿಲ್ಲ. ಹೆಣ್ಣಿನ ಪ್ರಪಂಚ ಮನೆಗೆ ಮೀಸಲು, ಅವಳ ಜೀವನದ ಪ್ರಮುಖ ಗುರಿಗಳೆಂದರೆ ಹೆಂಡತಿಯಾಗಿ, ತಾಯಿಯಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವುದು ಎಂಬ ನಂಬಿಕೆ ಇಂದಿಗೂ ಜೀವಂತವಾಗಿರುವಾಗ, ಶತಮಾನಗಳ ಹಿಂದೆ ಇನ್ನೆಷ್ಟು ಪ್ರಬಲವಾಗಿತ್ತು ಎಂಬುದನ್ನು ನಾವು ಊಹಿಸಬಹುದು

ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಪ್ರಾರಂಭವಾಗುವವರೆಗೆ ಸ್ತ್ರೀ ಶಿಕ್ಷಣವನ್ನು ಕುರಿತಂತೆ ಯಾವುದೇ ಗಮನಾರ್ಹವಾದ ಪ್ರಗತಿ ಉಂಟಾಗಲಿಲ್ಲ. ಆಧುನಿಕ ಯುಗದ ಪ್ರಾರಂಭ ಎಂದು ಗುರುತಿಸಲಾಗಿರುವ ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಸುಧಾರಣೆಯ ಗಾಳಿ ಬೀಸಲಾರಂಭಿಸಿ ಸ್ತ್ರೀಯರಿಗೆ ಶಿಕ್ಷಣವನ್ನು ನೀಡಲೇಬೇಕೆಂದು ಒತ್ತಾಯಗಳು ಮೂಡಿ ಬರಲಾರಂಭಿಸಿದವು. ಬಾಲ್ಯ ವಿವಾಹ, ಸತಿ ಪದ್ಧತಿ, ವಿಧವಾ ವಿವಾಹಕ್ಕೆ ಇದ್ದ ಅಡ್ಡಿಗಳೆಂದು ಮನಗಂಡ ಸಮಾಜ ಸುಧಾರಕರು, ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಬೇಕೆಂಬ ಒತ್ತಾಯವನ್ನು ಬ್ರಿಟಿಷ್ ಸರ್ಕಾರದ ಮೇಲೆ ತಂದಿದ್ದೇ ಅಲ್ಲದೆ, ಸ್ವತ: ತಾವೂ ಹೆಣ್ಣು ಮಕ್ಕಳು ಹಾಗೂ ಮಹಿಳೆಯರಿಗಾಗಿ ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಮುಂದಾದರು.

ಸ್ತ್ರೀಯರಿಗೆ ಶಿಕ್ಷಣ ನೀಡದಿದ್ದರೆ,ಯಾವುದೇ ಬಗೆಯ ಕಾರ್ಯಕ್ರಮಗಳು ಹೆಚ್ಚು ಅರ್ಥ ಪೂರ್ಣವಾಗಲಾರದು ಎಂಬ ಸತ್ಯವನ್ನು ಮನಗಂಡಿದ್ದ ಬಂಗಾಳದ ಮಹಾನ್ ಸುಧಾರಕರಾದ ಈಶ್ವರ್ ಚಂದ್ರ ವಿದ್ಯಸಾಗರ್ ಅವರು, ಈ ಕ್ಷೇತ್ರಕ್ಕೆ ಮಹತ್ವವಾದ ಕೊಡುಗೆಯನ್ನು ನೀಡಿದ ಮೊದಲಿಗರಲ್ಲೊಬ್ಬರು. ೧೮೫೧ರಲ್ಲಿ ಸ್ಥಾಪಿತವಾಗಿದ್ದ ಹಿಂದೂ ಬಾಲಿಕಾ ವಿದ್ಯಾಲಯದ ಮೊದಲ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದು ಗಮನಾರ್ಹ. ಈ ಶಾಲೆಯ ಸ್ಥಾಪಕರಾಗಿದ್ದ ಬೆಥೂನ್‌ರವರ ಮರಣಾನಂತರ ಶಾಲೆಗೆ 'ಬೆಥೂನ್ ಮಹಿಳಾ ವಿದ್ಯಾಲಯ' ವೆಂಬ ಹೆಸರು ಬಂದಿತ್ತು. ೧೯೫೭ರಲ್ಲಿ ಶಿಕ್ಷಣಾಧಿಕಾರಿಗಳಾಗಿ ನೇಮಕಗೊಂಡ ಈಶ್ವರ ಚಂದ್ರ ವಿದ್ಯಾಸಾಗರ್ ಅವರ ಪ್ರಯತ್ನ ಹಾಗೂ ಪರಿಶ್ರಮಗಳ ಫಲವಾಗಿ ಬಂಗಾಳ ಪ್ರಾಂತ್ಯದಲ್ಲಿ ಒಂದು ವರ್ಷದ ಅವಧಿಯಲ್ಲೇ ಸುಮಾರು ೩೫ ಶಾಲೆಗಳು ಹೆಣ್ಣು ಮಕ್ಕಳಿಗಾಗಿಯೇ ಪ್ರಾರಂಭವಾದವು. ಸಮಕಾಲೀನ ಸಮಾಜದಲ್ಲಿ ಇದು ಸರ್ವೇ ಸಾಮಾನ್ಯವೆನಿಸುವಂತ ಒಂದು ಸಂಗತಿಯಾದರೂ, ೧೫೦ ವರ್ಷಗಳ ಹಿಂದೆ ಸ್ತ್ರೀ ವಿಮೋಚನೆಯ ಕಲ್ಪನೆಯೇ ಇರಲಿಲ್ಲವಾದಂತ ಪರಿಸ್ಥಿತಿಯಲ್ಲಿ ವಿದ್ಯಾಸಾಗರ್ ಅವರು ಸಾಧಿಸಿದ್ದು ಸ್ತ್ರೀ ಶಿಕ್ಷಣದ ಇತಿಹಾಸದಲ್ಲೇ ಒಂದು ದೊಡ್ಡ ಮೈಲಿಗಲ್ಲು. ೧೮೭೮ರಲ್ಲಿ ಪ್ರಥಮ ಬಾರಿಗೆ ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಮಹಿಳೆಯೊಬ್ಬಳು ಪ್ರವೇಶವನ್ನು ಪಡೆದದ್ದು ಒಂದು ಮಹತ್ತರವಾದ ಹೆಜ್ಜೆ. ಅನಂತರದಲ್ಲಿ ಈ ವಿಶ್ವವಿದ್ಯಾನಿಲಯದಲಿ ಮಹಿಳೆಯರ ಪ್ರವೇಶವನ್ನು ಔಪಚಾರಿಕವಾಗಿ ಅಂಗೀಕರಿಸುವಂತ ನಿರ್ಣಯವನ್ನು ತೆಗೆದುಕೊಳ್ಳಲಾಗಿ, ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಮಹಿಳೆಯರ ಪ್ರವೇಶವಾದದ್ದು, ಮಹಿಳಾ ಶಿಕ್ಷಣದಲ್ಲಿ ಒಂದು ಅಪೂರ್ವವಾದ ಘಟನೆ ಎನಿಸಿತು.

ಮೊಗವೀರ ಮಹಿಳೆಯರ ಶೈಕ್ಷಣಿಕ ಸ್ಥಾನಮಾನ

ಸಂಪ್ರದಾಯಿಕವಾಗಿ ಕುಲಕಸುಬನ್ನು ಪರಾಂಪರಾಗತವಾಗಿ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿರುವ ಮೊಗವೀರ ಸಮಾಜದ ಮಹಿಳೆಯರು ಶೈಕ್ಷಣಿಕ ಹಿನ್ನಲೆಯನ್ನು ಹಲವು ಕೋನಗಳಿಂದ ಪರಿಭಾವಿಸಬೇಕಾಗಿದೆ. ಅತ್ಯಂತ ಹಿಂದುಳಿದ ಈ ಸಮುದಾಯವು ಬುಡಕಟ್ಟು ಸಮುದಾಯದಂತೆ ಶಿಕ್ಷಣವನ್ನು ಒಂದು ಪ್ರಮುಖ ಅಂಶವೆಂದು ಪರಿಗಣಿಸಿರುವುದಿಲ್ಲ. ಇನ್ನು ಅದೇ ಸಮುದಾಯವು ಸಂಪ್ರದಾಯಕವಾದ ಮೌಲ್ಯಗಳನ್ನು ಅನುಷ್ಠಾನಗೊಳಿಸಿಕೊಂಡು ಬರುತ್ತಿರುವುದರಿಂದ ಅವುಗಳಿಗೆ ಶೈಕ್ಷಣಿಕ ಮೌಲ್ಯದ ಯಾವುದೇ ಅಂಶವು ಇದ್ದಿರುವುದಿಲ್ಲ. ಪ್ರಸ್ತುತ ಸಮಾಜದಲ್ಲಿ ಶೈಕ್ಷಣಿಕ ಮೌಲ್ಯವನ್ನು ಪರಿಭಾವಿಸುವ ದೃಷ್ಟಿಕೋನವು ಬದಲಾದಂತೆ ಎಲ್ಲ ಸಮುದಾಯದಲ್ಲೂ ಆಗುವ ಬದಲಾವಣೆಯು ಮೊಗವೀರ ಸಮುದಾಯದಲ್ಲಿ ಉಂಟಾಗಿದೆ.

ಮೊಗವೀರ ಮಹಿಳೆಯರ ಶೈಕ್ಷಣಿಕ ಸ್ಥಾನಮಾನವನ್ನು ಪರಿಭಾವಿಸಲು ಸ್ವಾತಂತ್ರ್ಯ ಪೂರ್ವ ದಾಖಲೆಗಳ ಅವಲೋಕಿಸಿದಾಗ ಕರಾವಳಿ ಬುಡಕಟ್ಟು ಸಮುದಾಯಗಳಾದ ಕೊರಗ, ಮಲೆಕುಡಿಯ, ಕುಡುಬಿ ಸಮುದಾಯದಂತೆ ಮಹಿಳೆಯರಿಗೆ ಶಿಕ್ಷಣ ನೀಡುವ ಪರಿಕಲ್ಪನೆ ಇಲ್ಲದೇ ಇರುವುದು ಕಂಡುಬರುತ್ತದೆ. ಆದರೆ ಸ್ವಾತಂತ್ರ್ಯ ನಂತರ ಮಹಿಳೆಯರಿಗೆ ಶಿಕ್ಷಣ ನೀಡಬೇಕೆಂಬ ಸಾಮಾಜಿಕ ಬದಲಾವಣೆಯ ಹಿನ್ನಲೆಯಲ್ಲಿ ಮೊಗವೀರ ಸಮುದಾಯದ ಮಹಿಳೆರಿಗೂ ಈ ಬದಲಾವಣೆಯ ಪ್ರಭಾವ ಉಂಟಾಗಿರುವುದು ಕಂಡುಬರುತ್ತದೆ.

ಕ್ರೈಸ್ತ ಮಿಷನರಿಗಳು ಉಡುಪಿಯಲ್ಲಿ ಆರಂಭಿಸಿದ ಶಿಕ್ಷಣ ಸಂಸ್ಥೆಗಳಿಂದ ಇನ್ನಿತರ ಹಿಂದುಳಿದ ಸಮುದಾಯದ ಹೆಣ್ಣು ಮಕ್ಕಳು ವಿದ್ಯಾಭ್ಯಾಸ ಮಾಡುವಂತೆ ಈ ಸಮುದಾಯದ ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಮಾಡುವಂತೆ ಈ ಸಮುದಾಯದ ಹೆಣ್ಣು ಮಕ್ಕಳ ಇತರ ಬುಡಕಟ್ಟಿನ ಸಮುದಾಯದ ಹೆಣ್ಣು ಮಕ್ಕಳಿಗಿಂತ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಶಾಲೆಗೆ ಹೋಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಸಮುದಾಯದಲ್ಲಿ ಉಂಟಾದ ಆಧುನಿಕ ಬದಲಾವಣೆಯ ಪ್ರಭಾವ ಇದ್ದಿರಬಹುದು. ಮುಖ್ಯವಾಗಿ ಮೊಗವೀರ ಸಮುದಾಯವು ಪುರುಷ ಮತ್ತು ಮಹಿಳೆಯರು ಸೇರಿದಂತೆ ಶಿಕ್ಷಣದಲ್ಲಿ ಸಮಾನವಾಗಿ ಹಿಂದುಳಿದಿರುವುದು ಸ್ವಾತಂತ್ರ ಪೂರ್ವ ಶೈಕ್ಷಣಿಕ ಇತಿಹಾಸದಲ್ಲಿ ಕಂಡುಬರುತ್ತದೆ. ಇದಕ್ಕೆ ಪ್ರಮುಖ ಕಾರಣಗಳನ್ನು ಶೈಕ್ಷಣಿಕ ತಜ್ಞರು ಅಧ್ಯಯನ ಮಾಡಬೇಕಾಗಿದೆ.ಅಷ್ಟಕ್ಕೂ ಭಾರತೀಯ ಸಮುದಾಯವು ಉನ್ನತ ಜಾತಿ ಶ್ರೇಣಿಗಳನ್ನು ಹೊರತು ಪಡಿಸಿ ಶಿಕ್ಷಣದಲ್ಲಿ ಸಮಾನಂತರವಾಗಿ ಹಿಂದುಳಿದಿದ್ದು ಇವರು ಈ ದೇಶದ ಸಾಂಸ್ಕೃತಿಕ ಅಂಶವಾಗಿದ್ದರೆಂದು ನಾವು ಪರಿಭಾವಿಸಬಹುದು. ಎಲ್ಲಾ ಹಿಂದುಳಿದ ವರ್ಗದ ಸಮುದಾಯದಂತೆ ಮೊಗವೀರ ಸಮುದಾಯವು ಹಲವಾರು ರೂಢ(ಮೂಢ) ನಂಬಿಕೆಗಳಿಗೆ ಹೊರತಾಗಿಲ್ಲ. ಶಿಷ್ಟ ಮಾದರಿಯ ಸಮಾಜದಲ್ಲಿರಬಹುದಾದ ಮಾದರಿಗಳು ಮೊಗವೀರ ಸಮುದಾಯದಲ್ಲಿ ಇಲ್ಲದೇ ಇರುವುದು ಶೈಕಣಿಕವಾಗಿ ಹಿಂದುಳಿಯಲು ಕಾರಣವಾಗಿರಬಹುದು.ಆದರೆ ಈಗ ಶೈಕಣಿಕ ಉನ್ನತ ವರ್ಗಗಳು ಕಣ್ಣಮುಂದೆ ಇರುವುದರಿಂದ ಅವುಗಳಿಂದ ದೊರೆಯುವ ಸ್ಥಾನಮಾನದ ಕಾರಣದಿಂದಾಗಿ ಶಿಕ್ಷಣವನ್ನು ಪಡೆಯುವ ಹಂಬಲ ಎಲ್ಲಾ ಸಮುದಾಯಗಳಲ್ಲಿರುವಂತೆ ಮೊಗವೀರ ಸಮುದಾಯಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಿರುವುದನ್ನು ಕಾಣಬಹುದು.

ಸರಕಾರಿ ನೌಕರಿ ಮತ್ತು ಮೊಗವೀರ ಮಹಿಳೆಯರು

೧೯೫೦ ರ ನಂತರ ಕರ್ನಾಟಕ ರಾಜ್ಯದ ಸಾರ್ವಜನಿಕ ಆಡಳಿತದಲ್ಲಿ ಮೊಗವೀರ ಸಮುದಾಯವು ಪಾಲ್ಗೊಂಡಿರುವುದನ್ನು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಪರಿಭಾವಿಸಬೇಕಾಗುತ್ತದೆ. ದೇವರಾಜ ಅರಸುರವರ ಕ್ರಾಂತಿಕಾರಕ ಹವನೂರು ವರದಿ ಅನುಷ್ಠಾನದ ನಂತರ ರಾಜ್ಯದ ಎಲ್ಲಾ ಹಿಂದುಳಿದ ಸಮುದಾಯಗಳು ಸಾರ್ವಜನಿಕ ರಂಗದಲ್ಲಿ ಕಾಣಿಸಿಕೊಳ್ಳಲು ಸಾಧ್ಯವಾಯಿತು. ಈ ಹಿನ್ನಲೆಯಲ್ಲಿ ೧೯೭೦ರ ನಂತರ ಮೊಗವೀರ ಸಮುದಾಯಕ್ಕೆ ಇತರ ಹಿಂದುಳಿದ ಸಮುದಾಯಕ್ಕೆ ದೊರಕಿದ ರೀತಿಯಲ್ಲಿ ಸರಕಾರಿ ನೌಕರಿಯ ಸ್ಥಾನಮಾನ ದೊರಕಿತು.


ಔದ್ಯೋಗಿಕ ಹಿನ್ನಲೆ

ಮೊಗವೀರರು ಸಾಮಾಜಿಕವಾಗಿ ಮಾನ್ಯತೆ ಪಡೆದಿರುವ ಉತ್ತಮ ಕೆಲಸಗಳನ್ನು ಆಯ್ಕುಕೊಳ್ಳುತ್ತಾರೆ. ಶಾರೀರಿಕವಾಗಿಯೂ ಮೊಗವೀರ ಪುರುಷ ಮತ್ತು ಮಹಿಳೆಯರು ದೃಢಕಾಯರಾಗಿರುವುದರಿಂದ ಯಾವುದೇ ಕೆಲಸಕ್ಕೂ ಹಿಂಜರಿಯುವವರಲ್ಲ. ಆದರೆ ಉಡುಪಿ ಪರಿಸರದಲ್ಲಿ ಮೀನುಗಾರಿಕೆ, ಕೃಷಿ, ಅಂಗಡಿ ಮುಂಗಟ್ಟುಗಳನ್ನು ಇಟ್ಟುಕೊಳ್ಳುವುದು, ಸ್ವ ಉದ್ಯೋಗ, ಇತ್ಯಾದಿ ರಂಗಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತಾರೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಿತ ಮಹಿಳೆಯರು ಮನೆಬಿಟ್ಟು ದೂರದ ಪಟ್ಟಣಗಳಲ್ಲಿಯೂ ಉದ್ಯೋಗಗಳನ್ನು ಆಯ್ದುಕೊಳ್ಳುವುದನ್ನು ಕಾಣಬಹುದು.

ಕೋಷ್ಟಕ-೩.೧

ಹಿರಿಯ ತಲೆಮಾರಿನವರು ಸ್ತ್ರೀಯರಿಗೆ ವಿದ್ಯಾಭ್ಯಾಸ ಕಲಿಯಲು ನೀಡುವ ಅವಕಾಶ

ಕ್ರ.ಸಂ	ವಿದ್ಯಾಭ್ಯಾಸದ ಅವಕಾಶ	ಸಂಖ್ಯೆ	ಶೇಕಡಾ
೧	ಇದೆ	೬	೬
೨	ಇಲ್ಲ	೯೪	೯೪
	ಒಟ್ಟು	೧೦೦	೧೦೦



ಮಾಹಿತಿದಾರರ ಹಿರಿಯ ತಲೆಮಾರು ಸ್ತ್ರೀಯರ ಶಿಕ್ಷಣಕ್ಕೆ ಒತ್ತು ನೀಡುತ್ತದೆಯೇ/ಅವಕಾಶ ಕೊಡುತ್ತದೆಯೇ ಎಂಬ ಸಂಶೋಧಕರ ಪ್ರಶ್ನೆಗೆ ಶೇಕಡಾ ೯೪ ಮಂದಿ ಇಲ್ಲ ಎಂದರು.ಕೇವಲ ಶೇಕಡಾ ೬ ಮಂದಿ ತಮ್ಮ ಹಿರಿಯರು ಶಿಕ್ಷಣಕ್ಕೆ ಅವಕಾಶ ನೀಡಿದರು ಎಂದು ಪ್ರತಿಕ್ರಿಯಿಸಿದರು.ಸಿಕ್ಕ ಅವಕಾಶವನ್ನು ಬಳಸಿಕೊಂಡವರು ಸಾಮಾಜೀಕರಣವಾಗಿ ಸಬಲೀಕರಣಗೊಂಡಿದ್ದಾರೆ. ಮನೆಯಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು.ಮಕ್ಕಳ ಶಿಕ್ಷಣದ ಬಗ್ಗೆ ಚಿಂತಿಸುವುದು ಮತ್ತು ಆರ್ಥಿಕ ಮೂಲವನ್ನು ರೂಢಿಸಿಕೊಳ್ಳುವುದು ಇತ್ಯಾದಿಗಳಲ್ಲಿ ತಮ್ಮ ಸ್ವಂತಿಕೆಯನ್ನು ಬಳಸಿಕೊಳ್ಳುತ್ತಾರೆ.

ಕೋಷ್ಟಕ-೩.೨

ಸರಕಾರಿ ನೌಕರಿ ಮಾಡುವವರ ವಿವರ


ಕ್ರ.ಸಂ	ಸರಕಾರಿ ನೌಕರರು	ಸಂಖ್ಯೆ	ಶೇಕಡಾ
೧	ಇದ್ದಾರೆ	೧೬	೧೬
೨	ಇಲ್ಲ	೮೪	೮೪
	ಒಟ್ಟು	**೧೦೦**	**೧೦೦**

ಸರ್ಕಾರಿ ನೌಕರಿ ಮಾಡುವ ಮಹಿಳೆಯರ ಕುರಿತ ಮಾಹಿತಿಯನ್ನು ತೆಗೆದಾಗ ಶೇಕಡಾ ೧೬ ಮಂದಿ ಓದಿದ ಮಹಿಳೆಯರು ಸರಕಾರಿ ಉದ್ಯೋಗ ಮಾಡುತ್ತಿದ್ದಾರೆ. ಉಳಿದ ೮೪ ಮಂದಿ ಮೀನು ಮಾರಾಟ, ಖಾಸಗಿ ಕಛೇರಿಗಳಲ್ಲಿ, ಮನೆಯೊಡತಿಯರಾಗಿ ಕೆಲಸ ನಿರ್ವಹಿಸುತ್ತಾರೆ. ಸರಕಾರಿ ಉದ್ಯೋಗ ಪಡೆದವರು ಪ್ರಥಮ ದರ್ಜೆ, ದ್ವಿತೀಯ ದರ್ಜೆ ಸಹಾಯಕಿಯರಾಗಿ ಯಾ ಶಿಕ್ಷಕಿಯರಾಗಿ ನೇಮಕಾತಿಯಾಗಿದ್ದಾರೆ.ಮೇಲ್ಮಟ್ಟದ ಹುದ್ದೆಗಳಲ್ಲಿ ಮೊಗವೀರ ಮಹಿಳೆಯರ ಸಂಖ್ಯೆ ಕಡಿಮೆ. ಆದಾಯದ ಕುರಿತಾದ ಆಸಕ್ತಿ ಎಲ್ಲಾ ಮಹಿಳೆಯಲ್ಲಿಯೂ ಇದ್ದರೂ ಸರಕಾರಿ ಕೆಲಸದ ಬೆನ್ನಟ್ಟಿದವರು ಕಡಿಮೆ. ಜೀವನ ನಿರ್ವಹಣೆಗೆ ಮೀನುಗಾರಿಕೆ ಇದೆ ಎಂಬ ಭಾವನೆ ವಿದ್ಯೆಯನ್ನು ಪಡೆಯುವಲ್ಲಿ ಹಿಂದೇಟು ಹಾಕುವಂತೆ ಯುವಕರನ್ನು ಪ್ರೇರೇಪಿಸುವುದು. ದುಡಿದು ಗಳಿಸಿದ ಆದಾಯದಲ್ಲಿ ಉಳಿತಾಯ ಮಾಡಬೇಕೆಂಬ ಜ್ಞಾನದ ಕೊರತೆ ಬೇರೆ ಬೇರೆ ಉದ್ಯಮಗಳಲ್ಲಿ ತೊಡಗದಂತೆ ಮಾಡಿದೆ. ಶಿಕ್ಷಣದ ಕೊರತೆಯು ಸರಕಾರಿ ನೌಕರಿಯನ್ನು ಪಡೆಯುವಲ್ಲಿ ಮೊಗವೀರ ಮಹಿಳೆಯರನ್ನು ವಂಚಿತರನ್ನಾಗಿ ಮಾಡಿದೆ. ಮೊಗವೀರ ಸಮುದಾಯವು ಉನ್ನತ ಶಿಕ್ಷಣವನ್ನು ಪಡೆದುಕೊಂಡ ಸಂಖ್ಯೆಯನ್ನು ಬಹಳ ಕಡಿಮೆ ಹೊಂದಿದ್ದು, ಈ ಸಮುದಾಯದ ಮಹಿಳೆ ಯಾ ಪುರುಷರು ಓದು ಬರಹ ಪಡೆಯುವಷ್ಟರ ಮಟ್ಟಿಗಿನ ವಿದ್ಯೆಯನ್ನು ತಮ್ಮ ಮಕ್ಕಳಿಗೆ ಕಲಿಸಿ ಕೊಡುವಲ್ಲಿ ಆಸಕ್ತಿಯನ್ನು ತೋರುತ್ತಾರೆ. ಮೀನುಗಾರಿಕೆ ಉದ್ಯೋಗದ ಅವಧಿಯಲ್ಲಿ ನಿಗಧಿತ ಅವಧಿಯ ಉದ್ಯೋಗ ಎಂಬುದಾಗಿ ಇಲ್ಲದೇ ಇರುವುದರಿಂದ ಮುಂಜಾನೆ ೪ ರಿಂದ ನಡು ರಾತ್ರಿಯವರೆಗಿನ ಅವಧಿಯ ಕಸುಬಾಗಿದ್ದು, ಸ್ತ್ರೀ ಪುರುಷರನ್ನದೇ ಇಬ್ಬರೂ ಉದ್ಯೋಗದ ಸ್ಥಳಗಳಲ್ಲಿಯೇ ಹೆಚ್ಚಾಗಿ ತಮ್ಮ ಸಮಯವನ್ನು ವಿನಿಯೋಗಿಸುವುದರಿಂದ ಅವರಿಗೆ ಕುಟುಂಬದ ಕಡೆಯಾಗಲೀ ಮಕ್ಕಳ ವಿದ್ಯಾಭ್ಯಾಸದ ಕಡೆಯಾಗಲೀ ಗಮನ ಹರಿಸಲು ಕಷ್ಟ ಸಾಧ್ಯ. ಈ ರೀತಿಯಾಗಿ ಶಿಕ್ಷಣ ಹಾಗೂ ಸರಕಾರಿ ನೌಕರಿ ಪಡೆಯುವಲ್ಲಿ ಬಹಳ ಹಿಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣದ ಕಡೆಗೆ ಒಲವು ತೋರಿರುವುದು ಕ್ಷೇತ್ರಾಧ್ಯಯನದಿಂದ ಕಂಡು ಬಂದಿದ್ದು. ಇದು ಅಭಿವೃದ್ಧಿದಾಯಕ ಬೆಳವಣಿಗೆಯಾಗಿದೆ.

ಕೋಷ್ಟಕ-೩.೩

ವೃತ್ತಿಯ ಸಮಸ್ಯೆಗಳ ವಿವರ

ಕ್ರ.ಸಂ	ವೃತ್ತಿಯ ಸಮಸ್ಯೆ	ಸಂಖ್ಯೆ	ಶೇಕಡಾ
೧	ಇದೆ	೫೯	೫೯
೨	ಇಲ್ಲ	೪೧	೪೧
	ಒಟ್ಟು	**೧೦೦**	**೧೦೦**



ಮಹಿಳೆಯರ ವೃತ್ತೀಯ ಸಮಸ್ಯೆಗಳ ಕುರಿತ ಅಂಕಿ ಅಂಶಗಳ ಪ್ರಕಾರ ಶೇಕಡಾ ೫೯ ಮಂದಿಗೆ ತಾವು ಮಾಡುವ ಕೆಲಸದಲ್ಲಿಯೂ ಸಮಸ್ಯೆಗಳಿವೆ. ಬಹುತೇಕ ಮಂದಿ ಮೀನುಗಾರಿಕೆಯಲ್ಲಿರುವ ಮಹಿಳೆಯರಿಗೆ ತಮ್ಮದೇ ಸಮಸ್ಯೆಗಳಿವೆ. ವಿವಿಧ ಪ್ರದೇಶಗಳಲ್ಲಿ ಮೀನು ಮಾರಾಟ ಮಾಡುವ ಮಹಿಳೆಯರಿಗೆ ವಿಭಿನ್ನ ಸಮಸ್ಯೆಗಳಿರುವುದು ಗೋಚರಿಸುತ್ತದೆ. ಶೇಕಡಾ ೪೧ ಮಂದಿಗೆ ಯಾವುದೇ ಸಮಸ್ಯೆಗಳಿಲ್ಲ.

ಸಮಾಜದಲ್ಲಿ ವೈಯುಕ್ತಿಕ ಹಾಗೂ ಸಾಮುದಾಯಿಕ ಏಳಿಗೆಯು ಶೈಕ್ಷಣಿಕ ಮಟ್ಟಕ್ಕೆ ಸಮಾನಾಂತರವಾಗಿ ಇರುವುದನ್ನು ನಾವು ಗಮನಿಸಬಹುದು. ಹುಮಾಯೂನ್ ಕಬೀರರ ಮಾತಿನಂತೆ "ಮನುಷ್ಯನಿಗೆ ಒಬ್ಬಂಟಿಗನಾಗಿ ಜೀವಿಸಲು ಅಸಾಧ್ಯವಾದ ಕಾರಣ ಪೌರಾತ್ಯ ಅಥವಾ ಪಾಶ್ಚಿಮಾತ್ಯ ಶಿಕ್ಷಣ ಕ್ರಮದ ಉದ್ದೇಶವು ಪ್ರತಿಯೊಬ್ಬನನ್ನೂ ಅವರವರ ಜನಾಂಗ (ಸಮುದಾಯ)ದ ಉತ್ತಮ ಸದಸ್ಯನನ್ನಾಗಿ ರೂಪಿಸುವುದೇ ಆಗಿದೆ. ಇತ್ತೀಚೆಗೆ ಶಿಕ್ಷಣವು ಎಲ್ಲಾ ದೇಶಗಳಿಗೂ ಪ್ರಧಾನ ಅವಶ್ಯಕತೆಯಾಗಿ ಪರಿಗಣಿಸಲಾಗಿದೆ. ಅದರಲ್ಲೂ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವ ಭಾರತದ ಹಳ್ಳಿ ಹಳ್ಳಿಗಳಲ್ಲಿ ಶಿಕ್ಷಣದ ಮಹತ್ವವು ನಿಧಾನವಾಗಿ, ಆದರೂ ಅಗತ್ಯವೆಂಬ ಅರಿವಿನ ಜೊತೆಯಲ್ಲಿ ಸಾಗುತ್ತಿದೆ." (ಶುಕ್ಲಾ ೧೯೭೬-೪೨)

ಶಿಕ್ಷಣವು ಔಪಚಾರಿಕ, ಅನೌಪಚಾರಿಕ, ವೃತ್ತಿಪರ ಮತ್ತು ಆಧ್ಯಾತ್ಮಿಕಗಳೆಂದು ಹಲವು ಬಗೆಗಳಲ್ಲಿ ವಿಸ್ತರಿಸಿಕೊಂಡಿದೆ. ವೃತ್ತಿಪರ ಶಿಕ್ಷಣವು ಉತ್ತಮ ಆರೋಗ್ಯ, ಉತ್ತಮ ಕುಟುಂಬ ಮತ್ತು ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದಾಗಿದೆ. ಇದರ ಮುಖ್ಯ ಉದ್ದೇಶವು ವ್ಯಕ್ತಿಯ ಗುಣಮಟ್ಟವನ್ನು ಏರಿಸುವುದಾಗಿದೆ. ಈ ಶಿಕ್ಷಣವು ವ್ಯಕ್ತಿಯ ವೃತ್ತಿಪರ ಚಾತುರ್ಯವನ್ನು ಹೆಚ್ಚಿಸಿ ಅವನ ಜೀವನಕ್ಕೆ ಅವಶ್ಯವಾದ ಗಳಿಕೆಯನ್ನು ಪೂರೈಸುವುದಾಗಿದೆ. ಆಧ್ಯಾತ್ಮಿಕ ಶಿಕ್ಷಣದ ಮೂಲಕ ಮನುಷ್ಯನ ಜೀವಿತಕ್ಕೆ ಶಾಂತಿ ಸಮಾಧಾನವು ಹೆಚ್ಚಿ ಯೋಗ್ಯ ಹಾಗೂ ಪ್ರತಿಷ್ಠಿತ ಬಾಳ್ವೆಯನ್ನು ಹೊಂದಬಹುದು. ಸಾಮಾನ್ಯ ಶಿಕ್ಷಣವು ಶಾಲಾ ಕಾಲೇಜುಗಳ ಮೂಲಕ ಅರ್ಹತಾ ಪತ್ರ ಹಾಗೂ ಪದವಿಗಳನ್ನು ಗಳಿಸುವ ಮಾಧ್ಯಮವಾಗಿದೆ. ಈ ಪದವಿಗಳು ಮುಂದೆ ಶಾರೀರಿಕ ಶ್ರಮರಹಿತ ನೌಕರಿಗಳನ್ನು ಗಳಿಸಲು ಸಹಕಾರಿಯಾಗಿವೆ

ಈ ಶೈಕ್ಷಣಿಕ ಪದ್ಧತಿಯ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಮಾಜಿಕ ರೀತಿ ನೀತಿಗಳನ್ನೊಳಗೊಂಡ ಜ್ಞಾನವನ್ನು ವರ್ಗಾಯಿಸುವ ವಿಧಾನವಾಗಿದೆ. (ಸ್ಟಾಟ್ ೧೯೮೮:೧೨೭) ಈ ವಲಯವು ವಿದ್ಯಾರ್ಥಿ, ಅಧ್ಯಾಪಕ, ಸ್ಥಳೀಯ ಆಡಳಿತ ವರ್ಗ ಮತ್ತು ಸರಕಾರದ ಬಂಧವಾಗಿದೆ. (ಭಟ್ ೧೯೮೬ : ೩) ಇವೆಲ್ಲವೂ ಸಂಪೂರ್ಣ ಶಿಕ್ಷಣ ವಿಧಾನಕ್ಕೆ ತಮ್ಮ ತಮ್ಮ ಛಾಪನ್ನು ಒತ್ತಿ ಪ್ರಭಾವವನ್ನು ಬೀರುತ್ತದೆ. ಶಿಕ್ಷಣದ ನಿಜವಾದ ಉದ್ದೇಶದ ಬಗ್ಗೆ ವಿಭಿನ್ನ ಅಭಿಪ್ರಾಯಗಳು ಮೂಡಿ ಬರುತ್ತವೆ.

ವ್ಯಕ್ತಿಯ ಸರ್ವಾಂಗೀಣ ಪ್ರಗತಿಯನ್ನು ಸಾಧಿಸಬೇಕಾದ ಈ ಶಿಕ್ಷಣವು ಕೇವಲ ನಿರ್ದಿಷ್ಟ ವೃತ್ತಿಗೆ ಸಂಬಂಧಪಟ್ಟ ಬುದ್ಧಿಮಟ್ಟಕ್ಕೇ ಒರೆಹಚ್ಚುವುದೇ? ಎಂಬ ಪ್ರಶ್ನೆಯು ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಮನಸಿನಲ್ಲಿ ಮೂಡಿಬರುವುದು ಸಹಜ. ವಿದ್ಯೆಯಿಂದ ವ್ಯಕ್ತಿ ವ್ಯಕ್ತಿಯಿಂದ ಸಮಾಜದ ಉನ್ನತಿಯಾಗಬೇಕು. ಹೀಗೆ ಶಿಕ್ಷಣವು ಸಮಾಜದ ಮೇಲೆ ಗಾಢವಾದ ಪ್ರಭಾವ ಬೀರುವುದು. ಆದರೆ ಸಮಾಜವು ಶಿಕ್ಷಣದ ಮೇಲೆ ಅಲ್ಲ ಶಿಕ್ಷಣವು ಸಮಾಜದ ಮೇಲೆ ಬೀರುವ ಪ್ರಭಾವದಿಂದ ಸಮಾಜದ ಸ್ಥಿತಿಗತಿಗಳಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬರುವುವು.ಹೀಗೆ ಪ್ರತಿಯೊಂದು ವಿದ್ಯಾಸಂಸ್ಥೆಯು ಬರೇ ಒಂದು ಪದ್ಧತಿಯಾಗಿರದೆ ಉಪಪದ್ಧತಿಯೂ ಆಗಿದೆ.ಶಿಕ್ಷಣವು ಸಮಾಜದ ಇನ್ನಿತರ ರೀತಿ ನೀತಿಗಳ ಮೇಲೆ ಪ್ರಭಾವ ಬೀರುತ್ತಲೂ, ತಾನೇ ಇತರ ವಿಚಾರಗಳಿಂದ ಪ್ರಭಾವ ಹೊಂದುತ್ತಲೂ ಇರುವುದನ್ನು ಕಾಣಬಹುದು. ಸಮಾಜ ಬದಲಾದಂತೆ ಶಿಕ್ಷಣವೂ ಬದಲಾವಣೆ ಹೊಂದುತ್ತಾ ಸಮಾಜದ ಜೊತೆ ಅವಿನಾಭಾವ ಸಂಬಂಧ ಬೆಳೆಸುತ್ತಲೇ ಹೋಗುವುದು. ಇದರಿಂದಾಗಿ ಉತ್ತಮ ಜೀವನಕ್ಕೆ ಹಾಗೂ ಪ್ರಜಾಪ್ರಭುತ್ವದ ಉಳಿಯುವಿಕೆಗೆ ಶಿಕ್ಷಣವು ರಕ್ಷಣಾ ಕವಚವಾಗಿದೆ.

ಶಿಕ್ಷಣ ವಿಸ್ತಾರ, ಸಾರಿಗೆ ಸಂಪರ್ಕ ಪ್ರಗತಿ ಮತ್ತು ವಿಸ್ತೃತ ವಾರ್ತಾ ಮಾಧ್ಯಮಗಳು ಜನರಿಗೆ ಹೊಸ ಹೊಸ ವಿಚಾರಧಾರೆಗಳನ್ನು ನೀಡುವ ಸಾಧನಗಳಾಗಿದೆ. ಇದರಿಂದಾಗಿ ಅಧಿಕಾಂಶ ಜನಸಂಖ್ಯೆಯ ಸಾಮಾನ್ಯ ಮೌಲ್ಯಗಳ ಅವಶ್ಯಕತೆಯ ಮನವರಿಕೆಯಾಗುತ್ತದೆ. ಇತ್ತೀಚೆಗೆ ಪಾಶ್ಚಾತ್ಯ ಶೈಲಿಯ ಅನುಕರಣೆಯು ಮೇಲ್ವರ್ಗದ ಜನರಲ್ಲಿ ಕಾಣಿಸಿಕೊಳ್ಳುವುದೂ ಸಂಪ್ರದಾಯ ಬದ್ಧವಾದ ಹಾಗೂ ಬದ್ಧವಲ್ಲದ ಜೀವನಶೈಲಿಯು ಮಧ್ಯಮ ಹಾಗೂ ಕೆಳವರ್ಗದ ಜನರಲ್ಲಿ ತೋರಿಬರುವುದೂ ಈ ತೆರವಾದ ವಿಸ್ತೃತ ಮಾಧ್ಯಮಗಳ ಪರಿಣಾಮಗಳೇ ಆಗಿವೆ.

ಒಂದು ಜಾತಿಯ ಸದಸ್ಯರ ವೃತ್ತೀಯ ಫಲಹೀನ ವೈವಿಧ್ಯದಲ್ಲಿ ಗಣನೀಯವಾದ ಏರಿಕೆಯು ಕಂಡು ಬರುತ್ತಿದೆ. ಬೇರೆ ಬೇರೆ ಜಾತಿಯ ಜನರು ಬೇರೆ ಬೇರೆ ವೃತ್ತಿಯಲ್ಲಿ ತೊಡಗಿರುತ್ತಾರೆ. ಆದುದರಿಂದ ಇವರ ಸಂಪಾದನೆಯೂ ವ್ಯತ್ಯಾಸವುಳ್ಳದ್ದಾಗಿರುತ್ತದೆ. ವೃತ್ತಿಪರವಾದ ಈ ಆಯ್ಕೆ ಸಮಾಜದ ಸುವ್ಯವಸ್ಥೆಗೆ ಕಾರಣವಾಗಿದ್ದರೂ ಸಂಪ್ರದಾಯವಾಗಿ ಮಾರ್ಪಟ್ಟು ಹೊಸ ವೃತ್ತಿಗಳ ಆಯ್ಕೆಗೆ ಅಡ್ಡಿಯಾಯಿತು. ಇತರ ವರ್ಗದವರ ವೃತ್ತಿಯ ಆಯ್ಕೆಯು ಸಂಪ್ರದಾಯಕ್ಕೆ ವಿರೋಧವೆಂದು ಪರಿಗಣಿಸಲ್ಪಡುತ್ತಿತ್ತು. ಇತ್ತೀಚಿನ ಅಂತರ್ಜಾತೀಯ ವಿವಾಹ ಕ್ರಮ ಸ್ವೀಕೃತವೆಂದು ಕಾಣಿಸಿಕೊಂಡದೂ ಗಮನಾರ್ಹವಾಗಿ ಇಲ್ಲವೆಂದೇ ಹೇಳಬಹುದು. ಈಗ ಹಿರಿಯರು ತಮ್ಮ ಮಕ್ಕಳಿಗೆ ಜೀವನ ಸಂಗಾತಿಗಳನ್ನು ಆಯ್ಕೆ ಮಾಡುವಾಗ ಕೇವಲ ಉಪಜಾತಿ ಅಥವಾ ಜಾತಿ ನಿಬಂಧನೆಗಳನ್ನೇ ನೋಡದೆ ವೃತ್ತಿ, ಆದಾಯ ಮತ್ತು ವಿದ್ಯಾಮಟ್ಟವನ್ನು ಗಮನಿಸುವುದನ್ನು ಕಾಣಬಹುದು.

ಅಂತರ್ಜಾತೀಯ ಸಂಬಂಧಗಳಲ್ಲಿ ಶುದ್ಧ ಹಾಗೂ ಅಶುದ್ಧಗಳೆಂಬ ತಾರತಮ್ಯಗಳ ವಿಚಾರವು ಗಮನಾರ್ಹವಾಗಿ ಕುಸಿಯುತ್ತಿರುವುದದನ್ನು ಕಾಣಬಹುದು. ಇತ್ತೀಚಿನ ದಿನಗಳಲ್ಲಿ ಜಾತಿ ಜಾತಿಗಳ ಅಸ್ಪೃಶ್ಯತಾಭಾವನೆಯೂ ಮುಚ್ಚಿಹೋಗುತ್ತಿರುವುದು ಶುಭ ಸೂಚನೆಯಾಗಿ ಕಾಣಿಸುತ್ತದೆ. ಯಾವುದೇ ಕಾನೂನು ಯಾ ನಿಬಂಧಗೆಳು ಈ ಅಸ್ಪೃಶ್ಯತೆಯನ್ನು ನಿವಾರಿಸಲು ಅಸಾಧ್ಯ. ಆದರೆ ಪ್ರಬಲರಾಗದೆ ಹಿಂದುಗಳಿದ ಜಾತಿಯವರು ಆರ್ಥಿಕವಾಗಿ ಸ್ವಾವಲಂಬಿಗಳಾಗದೆ ಇರುವವರೆಗೂ ಅವರಿಗಿರುವ ಭದ್ರತಾ ಹಕ್ಕುಗಳ ಚಾಲನೆಯು ಅಸಾಧ್ಯ. (ಶ್ರೀನಿವಾಸ್ : ೧೯೬೨).

ಕೆಲವು ತಜ್ಞರ ಅಭಿಪ್ರಾಯದಂತೆ ನಗರ ಪ್ರದೇಶಗಳಲ್ಲಿ ಜಾತಿಗಳ ಸ್ಥಾನದಲ್ಲಿ ವರ್ಗಗಳು ಕಾಣಿಸಿಕೊಳ್ಳುತ್ತವೆ. ಜಾತ್ಯಾಧಾರಿತ ಮೌಲ್ಯಗಳು ತಿರಸ್ಕೃತವಾಗಿ ಹೊಸ ಹೊಸ ವಿಚಾರಗಳಿಗೂ ಮೌಲ್ಯಗಳಿಗೂ ಪಾಶ್ಚಾತ್ಯ ರಾಷ್ಟ್ರಗಳ ಕಡೆಗೆ ನೋಡುವಂತಾಗಿದೆ.ವಿದ್ಯಾವಂತ ಮತ್ತು ಮೇಲ್ವರ್ಗದ ಸಮುದಾಯವು ಸಂಪ್ರದಾಯ ನಿಬಂಧನೆಗಳನ್ನು ದಾಟಿ ಪಾಶ್ಚಾತ್ಯ ಶೈಲಿಯ ಅನುಕರಣೆ ಮಾಡುವುದು ಸರ್ವೇಸಾಮಾನ್ಯ. ಇದರಿಂದಾಗಿ ಅಂತರ್ಜಾತೀಯ ಹೆಚ್ಚೇಕೆ ಅಂತರ್ಮತೀಯ ವಿವಾಹ ಸಂಬಂಧಗಳೂ ಹೆಚ್ಚುತ್ತಿವೆ. ಆದರೆ ಇದರಿಂದ ಜಾತಿಯ ಕಟ್ಟುಪಾಡುಗಳಿಂದ ಸಂಪೂರ್ಣ ಮುಕ್ತರಾಗಬಹುದೆಂದು ಹೇಳಲು ಸಾಧ್ಯವಿಲ್ಲ. ಈ ತೆರನಾದವರಿಗೆ ತಮ್ಮ ಬಂಧು, ಮಿತ್ರರೊಡನೆ ನಿಕಟ ಸಂಬಂಧ ಇಟ್ಟುಕೊಳ್ಳಬೇಕಾಗುತ್ತದೆ. ಹೀಗಿರುವಾಗ ಜಾತಿಯ ಬಿಗಿತ ಪೂರ್ಣವಾಗಿ ಸಡಿಲಾಗಲು ಅಸಾಧ್ಯ. (ಶ್ರೀನಿವಾಸ್ : ೧೯೬೨).

ಈ ಮೇಲಿನ ವಿಚಾರಗಳಿಂದ ಮನಗಾಣುವ ವಿಚಾರವೆಂದರೆ ಸಾಮಾಜಿಕ ಪದರದಲ್ಲಿ ಕೆಲವೊಂದು ಬದಲಾವಣೆಗಳು ನಡೆಯುತ್ತಿದ್ದರೂ ಈ ಪದರದ ತಾತ್ವಿಕತೆಯು ಬದಲಾಗಲು ಸಾಧ್ಯವಿಲ್ಲ. ಸಮಾಜವು ಇನ್ನೂ ಜಾತೀಯ ಚೌಕಟ್ಟಿನಲ್ಲಿ ಬೆಸೆದುಕೊಂಡಿದೆ. ಈ ಸಾಮಾಜಿಕ ಪದರದೊಳಗೆ ವಿದ್ಯಾಭ್ಯಾಸ, ವೃತ್ತಿ ಮತ್ತು ಇನ್ನಿತರ ಬೆಳವಣಿಗೆಗಳು ಸೇರಿಕೊಳ್ಳುತ್ತಾ ಹೊಸತನವನ್ನು ಹೊಂದುತ್ತಿರುವ ಕ್ರಿಯೆಯು ಸರಾಗವಾಗಿ ನಡೆಯುತ್ತಲೇ ಇದೆ.

ಜಾತಿ ಪದ್ಧತಿಯು ಮೂಲಭೂತವಾದ ಒಂದು ಲಕ್ಷಣವೆಂದರೆ ಪೂರ್ವಿಕರಿಂದ ಬಂದ ವೃತ್ತಿ ವೈಶಿಷ್ಟ್ಯ. ಈ ವೃತ್ತಿ ನಿಬಂಧನೆಯು ಹಿಂದುಳಿದ ಜಾತಿಗಳನ್ನು ಮುಕ್ತಗೊಳಿಸದೆ ಅವರ ಜೀವನ ಮಟ್ಟವನ್ನು ಆದಷ್ಟೂ ಕೆಳಕ್ಕೆ ತಳ್ಳುತ್ತಲೇ ಸಾಗಿತು. ಆದ ಕಾರಣ ಅವರ ಸ್ಥಿತಿಗತಿಗಳ ಬದಲಾವಣೆ ವೃತ್ತಿಯ ಬದಲಾವಣೆಯು ಅವಶ್ಯಕವೆನಿಸುವುದು ಸಮಂಜಸ.

ಹಿಂದುಳಿದ ವರ್ಗದವರು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲೇ ಉಳಿದುಕೊಳ್ಳುವ ಕಾರಣ ಹೆಚ್ಚಿನ ಮಟ್ಟಿಗೆ ಅವರ ವೃತ್ತಿಗಳಲ್ಲಿ ಬದಲಾವಣೆ ಆಗಲು ಸಾಧ್ಯವಿಲ್ಲ . ಹಿಂದುಳಿದ ವರ್ಗಗಳು ಇತರ ವೃತ್ತಿಗಳನ್ನು ತಮ್ಮ ಕುಲಕಸುಬಿನ ಜೊತೆಗೆ ಸೇರಿಸಿಕೊಂಡು ನಿರ್ವಹಿಸುವುದನ್ನು ಇಂದು ಕಾಣಬಹುದು. ಯುವ ಪೀಳಿಗೆಯು ಹೊಸ ವೃತ್ತಿಗಳನ್ನು ಸ್ವೀಕಾರ ಮಾಡುವುದು ಗಮನಾರ್ಹ.

ಮೊಗವೀರರ ಶಿಕ್ಷಣಮಟ್ಟವು ತೃಪ್ತಿಕರವಾಗಿಲ್ಲ. ಈ ಸಮಾಜವು ವಿದ್ಯಾಕ್ಷೇತ್ರದಲ್ಲಿ ಬಹಳಷ್ಟು ಹಿಂದೆ ಇದೆ.ಇದರಿಂದಾಗಿ ಈ ಸಮಾಜವನ್ನು ಕರ್ನಾಟಕ ಸರಕಾರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಸಮಾಜದ ಗಣತಿಯ ಪ್ರಕಾರ ಅವಿದ್ಯಾವಂತರ ಸಂಖ್ಯೆಯಲ್ಲಿ ಓದು ಬರಹ ತಿಳಿಯದ ಸಂಖ್ಯೆಯೂ ಸಾಕಷ್ಟಿದೆ.

ವಿದ್ಯಾಭ್ಯಾಸವು ಮನುಷ್ಯನನ್ನು ದೈಹಿಕ, ಭೌದ್ಧಿಕ, ನೈತಿಕ, ಮಾನಸಿಕ ಮತ್ತು ಸಾಮಾಜಿಕ ಉನ್ನತಿಯತ್ತ ಕೊಂಡೊಯ್ಯುವ ಪ್ರಬಲ ಮಾಧ್ಯಮವಾಗಿದೆ. ಸಮಾಜದ ಬೆಳವಣಿಗೆ ಹಾಗೂ ನವೀಕರಣಕ್ಕೆ ಶಿಕ್ಷಣ ಅತ್ಯಗತ್ಯವಾಗಿದೆ. ಸಾಮಾಜಿಕ ಸುವ್ಯವಸ್ಥೆಯಲ್ಲಿ ಇದರ ಪಾತ್ರ ಹಿರಿದಾದುದು. ಸಮಾಜಶಾಸ್ತ್ರಜ್ಞಮುಖರ್ಜಿ (೧೯೮೭)ಯ ಹೇಳಿಕೆಯಂತೆ **"ಸಮಾಜದ ಸನ್ನಡತೆಯ ದ್ವಾರವನ್ನು ತೆರೆಯುವ ಕೀಲಿಕೈಯು ವಿದ್ಯೆಯೇ ಆಗಿದೆ."**

ಸಾಮಾಜಿಕ ಸ್ಥಾನಮಾನಗಳಿಗೆ ಶಿಕ್ಷಣಮಟ್ಟವು ಅತ್ಯವಶ್ಯ. ಆರ್ಥಿಕ ಸುಧಾರಣೆಯ ಜೊತೆ ಜೊತೆಗೆ ಶಿಕ್ಷಣಮಟ್ಟವು ವ್ಯಕ್ತಿಯ ಗೌರವ ಪ್ರತಿಷ್ಠೆಗಳನ್ನು ಹೆಚ್ಚಿಸಿ ಸತ್ಪ್ರಜೆಯಾಗಿ ರೂಪಿಸುವುದು. ಶಿಕ್ಷಣ ಲಭ್ಯತೆಯಿಂದ ಕುಂಬಾರ ಹಾಗೂ ಕಲೆಗಾರರಿಗೆ ಆಧುನಿಕ ತಂತ್ರಜ್ಞಾನವೂ ಲಭಿಸಿ ಜೀವನ ಮಟ್ಟವು ಸುಧಾರಿಸಿದೆ. ಸಮಾಜದ ದುರ್ಬಲ ವರ್ಗಗಳಿಗೆ ಆಧುನಿಕ ಶಿಕ್ಷಣದಿಂದ ಹಲವಾರು ಸೌಲಭ್ಯಗಳು ದೊರಕಿವೆ. ಹೀಗೆ ಶಿಕ್ಷಣದಿಂದ ಸಮಾಜದಲ್ಲಿ ತಕ್ಕ ಮಟ್ಟಿನ ಪರಿವರ್ತನೆಯಾಗಿದೆ.

ಹಲವಾರು ಕಾರಣಗಳಿಂದಾಗಿ ಆಧುನಿಕ ಸಮಾಜದಲ್ಲಿ ಸಾಂಪ್ರದಾಯಿಕ ವಿದ್ಯೆಯು ಕಾಣಿಸುವುದಿಲ್ಲ. ಈ ಅಧ್ಯಯನದಲ್ಲಿ ಗುರುಕುಲ ಮಾದರಿಯ ಶಿಕ್ಷಣದ ಬಗ್ಗೆ ಸೂಚಿಸಲಾಗಿಲ್ಲ. ಇದರಲ್ಲಿ ಕೇವಲ ಸಾಮಾನ್ಯ ಮಟ್ಟದ ಪ್ರಾಥಮಿಕ, ಮಾಧ್ಯಮಿಕ, ಪದವಿ ಹಾಗೂ ಔದ್ಯೋಗಿಕ ಶಿಕ್ಷಣದ ಕುರಿತು ಗಮನ ಹರಿಸಲಾಗಿದೆ.

ಅಂಕಿ ಅಂಶಗಳ ಪ್ರಕಾರ ಈ ಸಮಾಜದ ಬಹುತೇಕ ಮಂದಿ ನಿರಕ್ಷರಸ್ಥರಾಗಿದ್ದಾರೆ. ಒಂದಿಷ್ಟು ವಿದ್ಯಾವಂತರಾದ ಸಂಖ್ಯೆ ಕಂಡುಬಂದರೂ ಕೇಲವ ಓದು ಬರಹಕ್ಕಷ್ಟೇ ಸೀಮಿತವಾಗಿದೆ. ಸಮಾಜದ ಶೇಕಡಾ ೩೬.೩೩ ಅಕ್ಷರಸ್ಥರು ಕಾಣಿಸಿಕೊಳ್ಳುತ್ತಾರೆ. ಇವರಲ್ಲಿ ಶೇಕಡಾ ೩೮ ಪ್ರಾಥಮಿಕ, ಶೇಕಡಾ ೧೪.೩೩ ಪ್ರೌಢ, ಶೇಕಡಾ ೯ ಪದವಿ ಮಟ್ಟದ ಶಿಕ್ಷಣ ಹೊಂದಿರುತ್ತಾರೆ. ಕೇವಲ ಮೂರು ಮಂದಿ ಸ್ನಾತಕೋತ್ತರ ಪದವಿ ಹೊಂದಿದ್ದಾರೆ. ಒಟ್ಟಿನಲ್ಲಿ ಇಂದಿನ ಪೀಳಿಗೆಯ ಪೂರ್ವಿಕರ ವಿದ್ಯಾಮಟ್ಟದ ಕೊರತೆಯ ಪ್ರಭಾವವು ಈ ತೆರನಾದ ಶೈಕ್ಷಣಿಕ ದುರ್ಬಲತೆಗೆ ಕಾರಣವಾಗಿದೆ ಎಂಬ ವಿಚಾರವು ಅಂಕಿ ಅಂಶಗಳ ಅಧ್ಯಯನದಿಂದ ತಿಳಿದು ಬರುತ್ತದೆ.

ಭಾರತೀಯ ಜಾತಿ ವ್ಯವಸ್ಥೆಯು ನಿರ್ದಿಷ್ಟ ಜಾತಿಗಳನ್ನು ವಿದ್ಯೆಯ ಔನ್ನತ್ಯದಿಂದ ಪ್ರಪಾತಕ್ಕೆ ತಳ್ಳಿದುದು ಸರ್ವ ವಿಧಿತ. ಶತ ಶತಮಾನಗಳಿಂದ ಬ್ರಾಹ್ಮಣ ವರ್ಗವು ವಿದ್ಯೆಯ ಮೇಲೆ ಬಲವಾದ ಹಿಡಿತವನ್ನು ಹೊಂದಿ ಎಲ್ಲಾ ರೀತಿಯ ಜ್ಞಾನವನ್ನು ತಮ್ಮ ಕಪಿಮುಷ್ಟಿಯಲ್ಲಿ ಬಂಧಿಸಿಟ್ಟಿರುವುದು ಉಳಿದ ವರ್ಗಗಳ ಬೌದ್ಧಿಕ ಅವನತಿಗೆ ಕಾರಣ. ಆದರೆ ಈ ಶತಮಾನದಲ್ಲಿ ಬ್ರಾಹ್ಮಣೇತರರೂ ವಿದ್ಯಾಕ್ಷೇತ್ರವನ್ನು ಪ್ರವೇಶಿಸಿ ಸಾಕಷ್ಟು ಮುಂದುವರಿಯುತ್ತಿರುವುದು ಹರ್ಷದಾಯಕ ವಿಚಾರವಾಗಿದೆ. ಇತ್ತೀಚಿನವರೆಗೂ ತುಳಿತಕ್ಕೊಳಗಾದ ಹಾಗೂ ಹಿಂದುಳಿದ ಜಾತಿಯವರಿಗೆ ಸಾಮಾನ್ಯ ಶಾಲೆಗಳಲ್ಲಿ ಮಾತ್ರ ಶೈಕ್ಷಣಿಕ ಅವಕಾಶವಿತ್ತು. ಕುಲಾಲರಿಗೆ ವಿದ್ಯಾಕ್ಷೇತ್ರದಲ್ಲಿ ನಿಷೇಧವಿಲ್ಲದಿದ್ದರೂ ಆರ್ಥಿಕ ದೌರ್ಬಲ್ಯ, ಉತ್ತಮ ಶಾಲೆಗಳ ಅಲಭ್ಯತೆ, ಶೈಕ್ಷಣಿಕ ನಿರ್ಣಯಕ ಹೊಂದಾಣಿಕೆಯ ಕೊರತೆಗಳು ತಕ್ಕುದಾದ ಶಿಕ್ಷಣವನ್ನು ನೀಡಲು ಅಸಮರ್ಥವಾದುವು.

ಮಕ್ಕಳ ವಿದ್ಯಾಮಟ್ಟ

ಮೊಗವೀರ ಸಮಾಜದಲ್ಲಿ ಮಕ್ಕಳ ಶೈಕ್ಷಣಿಕ ಮಟ್ಟವು ಸುಧಾರಿಸುತ್ತಿರುವುದು ಕುತೂಹಲಕಾರಿಯಾಗಿದೆ. ಸಮಾಜಕ್ಕೆ ಕಿರಿಯರ ಶಿಕ್ಷಣದ ಅನಿವಾರ್ಯತೆಯ ಅರಿವಾಗಿದೆ.ಕಿರಿಯರ ಶಿಕ್ಷಣದಿಂದ ಭವಿಷ್ಯದ ಹಿತದ ಜೊತೆ ವೃದ್ಧಾಪ್ಯದಲ್ಲಿ ತಮಗೆ ಸಹಾಯ ಆಗಬಹುದೆಂದು ಹಿರಿಯರಿಗೆ ಮನವರಿಕೆಯಾಗಿದೆ. ಶೇಕಡಾ ೯೦.೧೫ ಮಕ್ಕಳ ವಿದ್ಯಾಭ್ಯಾಸ ಪಡೆಯುತ್ತಿರುವುದು ಗಮನಾರ್ಹ ಸಂಗತಿ. ಪದವಿ ಮತ್ತು ಸ್ನಾತಕೋತ್ತರ ಪದವಿಯವರೆಗೂ ತಮ್ಮ ಮಕ್ಕಳ ಕಲಿಯಬೇಕೆಂಬ ಅಭಿಲಾಷೆ ಮೂಡಿದುದು ಸ್ತುತ್ಯಾರ್ಹ ಸಂಗತಿಯಾಗಿದೆ.

ಮೊಗವೀರ ವಿದ್ಯಾರ್ಥಿಗಳಲ್ಲಿ ತಾಂತ್ರಿಕ ಶಿಕ್ಷಣ ಪಡೆಯುತ್ತಿರುವವರು ವಿರಳವಾಗಿದ್ದು ಈ ಸಂಶೋಧನಕಾರರಿಗೆ ಮೊಗವೀರ ಸಮಾಜದಲ್ಲಿ ಕೇವಲ ಶೇಕಡಾ ೫.೪೬ ಇಂಜಿನಿಯರಿಂಗ್ ಮತ್ತು ಇತರ ತಾಂತ್ರಿಕ ವಿದ್ಯಾರ್ಥಿಗಳೂ ಶೇಕಡಾ ೯ ಇತರ ತಾಂತ್ರಿಕ (ಡಿಪ್ಲೊಮಾ) ವಿದ್ಯಾರ್ಥಿಗಳೂ ಕಂಡುಬಂದಿರುತ್ತಾರೆ. ಅಂಕಿ ಅಂಶಗಳ ಪ್ರಕಾರ ಮೊಗವೀರ ಸಮಾಜದ ಹೆಣ್ಣುಮಕ್ಕಳ ಶಿಕ್ಷಣಮಟ್ಟ ಬಹಳ ಕಡಿಮೆ. ೨೫.೩೮ ಪ್ರಾಥಮಿಕ, ಶೇಕಡಾ ೨೬.೪೧ ಪ್ರೌಢ, ಶೇಕಡಾ ೨೬.೬೭ ಪದವಿಮಟ್ಟ, ಶೇಕಡಾ ೧.೮೮ ಸ್ನಾತಕೋತ್ತರ ಶಿಕ್ಷಣ ಪಡೆಯುವ ವಿದ್ಯಾರ್ಥಿನಿಯರು ಕಂಡುಬರುತ್ತಾರೆ. ಒಟ್ಟು ಹೆಂಗಸರಲ್ಲಿ ಶೇಕಡಾ ೧೨.೫೭ ಸ್ತ್ರೀಯರು ಶಿಕ್ಷಣ ಹೊಂದಿರುವುದು ದುಃಖದ ಸಂಗತಿಯಾಗಿದೆ.

ಕೋಷ್ಟಕ-೩.೪

ಕ್ರ. ಸಂ.	ಹಿಂದೆಗೆತದ ಹಂತ	ಸಂಖ್ಯೆ	ಶೇಕಡಾ
೧	ಪ್ರಾಥಮಿಕ ಹಂತ	೩೮.೫೯	೩೮.೫೯
೨	ಪ್ರೌಢ ಹಂತ	೪೪.೩೯	೪೪.೩೯
೩	ಪದವಿ ಹಂತ	೧೭.೦೧	೧೭.೦೧
	ಒಟ್ಟು	೧೦೦	೧೦೦



ಮೊಗವೀರ ಮಕ್ಕಳ ಶೈಕ್ಷಣಿಕ ಹಿಂದೆಗೆತವು ಒಂದು ಸಮಸ್ಯೆಯಾಗಿದೆ. ವಿದ್ಯಾಕ್ಷೇತ್ರಕ್ಕೆ ನೋಂದಣಿಯಾದ ಮಕ್ಕಳಲ್ಲಿ ಕೆಲವರು ಅವಧಿಯ ಮೊದಲೇ ಶಾಲೆಗಳಿಂದ ಬಿಡುಗಡೆ ಹೊಂದುತ್ತಾರೆ. ಅಂಕಿ ಅಂಶಗಳ ಪ್ರಕಾರ ವಿದ್ಯಾರ್ಥಿಗಳಲ್ಲಿ ಶೇಕಡಾ ೩೮.೫೯ ಪ್ರಾಥಮಿಕ, ಶೇಕಡಾ ೪೪.೩೯ ಪ್ರೌಢ, ಶೇಕಡಾ ೧೭.೦೧ ಪದವಿ ತರಗತಿಗಳಲ್ಲಿ ಶೈಕ್ಷಣಿಕ ಅವಧಿಯ ಮಧ್ಯದಲ್ಲಿಯೇ ಬಿಟ್ಟುಬಿಡುವುದು ಕಂಡುಬರುತ್ತದೆ. ಇವರಲ್ಲೂ ಶೇಕಡಾ ೨೩.೨೩ ಹುಡುಗರೂ, ಶೇಕಡಾ ೧೫.೩೫ ಹುಡುಗಿಯರೂ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ವಿಫಲರಾಗುವುದು ಅಹಿತಕಾರಿ ವಿಚಾರವಾಗಿದೆ.

ಇನ್ನೊಂದು ಕುತೂಹಲಕಾರಿ ಸಂಗತಿಯೆಂದರೆ ಈ ರೀತಿಯ ಇಳಿಕೆಯ ಹುಡುಗರೂ ಪ್ರಾಥಮಿಕ ಹಂತದಲ್ಲೇ ಹೆಚ್ಚಾಗಿ ಕಂಡುಬರುವುದೂ ಹುಡುಗಿಯರಲ್ಲಿ ಮಾಧ್ಯಮಿಕ ಹಂತದಲ್ಲಿ ಮತ್ತು ಕಾಲೇಜು ಹಂತದಲ್ಲಿ ಗಣನೀಯವಾಗಿರುವುದೂ ಕಂಡುಬರುತ್ತದೆ. ಹದಿನೈದು ವರ್ಷಗಳ ಒಳಗಿನ ಮಕ್ಕಳು ಶಿಕ್ಷಣವನ್ನು ಮಧ್ಯದಲ್ಲೇ ಮೊಟಕುಗೊಳಿಸುವುದಕ್ಕೆ ಹಲವಾರು ಕಾರಣಗಳಿವೆ. ಹಿರಿಯರು ತಮ್ಮ ಕಸುಬಿಗೆ ಸಹಾಯ ಮಾಡಲೆಂಬ ಉದ್ದೇಶವಿಂದ ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗುವ ವಿಚಾರ ಒಂದಾದರೆ ಹೆಣ್ಣುಮಕ್ಕಳಿಗೆ ಪ್ರಾಥಮಿಕ ಶಿಕ್ಷಣವೇ ಸಾಕು ಎಂಬ ಔದಾಸೀನ್ಯ ಮನೋಭಾವನೆ ಗಮನಾರ್ಹ ಕಾರಣಗಳಾಗಿವೆ.

ಕೋಷ್ಟಕ-೩.೫

ಶೈಕ್ಷಣಿಕ ಹಿಂದೆಗೆತಕ್ಕೆ ಕಾರಣಗಳು

ಕ್ರ. ಸಂ.	ಹಿಂದೆಗೆತಕ್ಕೆ ಕಾರಣಗಳು	ಸಂಖ್ಯೆ	ಶೇಕಡಾ
೧	ಬಡತನ	೩೦	೩೦
೨	ಮಕ್ಕಳಿಗೆ ಶಿಕ್ಷಣದ ಅನಾಸಕ್ತಿ	೧೫	೧೫
೩	ಹೆತ್ತವರ ನಿರ್ಲಕ್ಷ	೩೫	೩೫
೪	ಮಕ್ಕಳ ಶೈಕ್ಷಣಿಕ ವೈಫಲ್ಯ	೩೫	೩೫
	ಒಟ್ಟು	**೧೦೦**	**೧೦೦**

ವಿದ್ಯಾರ್ಥಿಗಳ ಶಿಕ್ಷಣ ಹಿಂದೆಗೆತಕ್ಕೆ ಹಲವಾರು ಕಾರಣಗಳಿವೆ. ಸಮೀಕ್ಷೆಯ ಪ್ರಕಾರ ಶೇಕಡಾ ೩೦ ವಿದ್ಯಾರ್ಥಿಗಳು ಬಡತನದ ಕಾರಣದಿಂದ ಮಧ್ಯದಲ್ಲೇ ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಡುತ್ತಾರೆ. ಹೆತ್ತವರು ಮಕ್ಕಳಿಗೆ ಅವಶ್ಯಕವಾದ ಸೌಲಭ್ಯಗಳನ್ನು ಒದಗಿಸಲು ಅಸಮರ್ಥರಾಗಿರುತ್ತಾರೆ. ಎರಡನೆಯದಾಗಿ ಶೇಕಡಾ ೧೫ ರಕ್ಷಕರು ತಮ್ಮ ಮಕ್ಕಳಿಗೆ ಕಲಿಯಲು ಆಸಕ್ತಿಯಿಲ್ಲ ಎಂಬ ಕಾರಣ ನೀಡುತ್ತಾರೆ. ಅವರನ್ನು ತಿದ್ದಿ ಶಿಕ್ಷಣದ ಕಡೆಗೆ ಆಸಕ್ತರನ್ನಾಗಿ ಮಾಡುವಲ್ಲಿ ಈ ರಕ್ಷಕರು ವಿಫಲರಾಗಿರುತ್ತಾರೆ. ಮೂರನೆಯದಾಗಿ, ಶೇಕಡಾ ೩೫ ಜನರು ತಮ್ಮ ಮಕ್ಕಳಿಗೆ ವಿದ್ಯೆಯ ಅಗತ್ಯವೇ ಇಲ್ಲವೆಂಬ ರೀತಿಯಲ್ಲಿ ವರ್ತಿಸುರ್ತಿಸುತ್ತಾರೆ. ಅವರು ಮಕ್ಕಳನ್ನು ಕೃಷಿಕೆಲಸಕ್ಕೋ ಇನ್ನಿತರ ಕೆಲಸಗಳಿಗೋ ಕಳುಹಿಸಿ ತಾತ್ಕಾಲಿಕ ಆದಾಯವನ್ನು ಹೆಚ್ಚಿಸುವ ಬಗ್ಗೆ ಯೋಚಿಸುತ್ತಾರೆ. ದಕ್ಷಿಣ ಉಡುಪಿ ಜಿಲ್ಲೆಯ ಬಹುತೇಕ ಮೊಗವೀರರು ಸಣ್ಣ ಮಟ್ಟಿನ ಕೃಷಿಕರಾಗಿರುತ್ತಾರೆ. ಇಂತವರಿಗೆ ವಿದ್ಯೆಯ ಮಹತ್ವವು ಅಷ್ಟೊಂದು ಹಿರಿದಾಗಿ ಕಾಣಿಸುವುದಿಲ್ಲ. ನಾಲ್ಕನೆಯದಾಗಿ ಶೇಕಡಾ ೩೫ ಜನರು ತಮ್ಮ ಮಕ್ಕಳು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಶಾಲೆಗಳಿಗೆ ಹೋಗಲು ಹಿಂಜರಿಯುತ್ತಾರೆಂದೋ, ಮಿತ್ರರ ಸಹವಾಸದಿಂದ ಶಾಲೆಯನ್ನು ಬಿಟ್ಟುಬಿಟ್ಟಿದ್ದಾರೆಂದೋ ಕಾರಣ ನೀಡುತ್ತಾರೆ.

ಹುಡುಗಿಯರ ಶೈಕ್ಷಣಿಕ ಹಿಂದೆಗೆತವನ್ನು ಗಮನಿಸಿದರೆ ಶೇಕಡಾ ೩೮ ಮಂದಿ ತಮ್ಮ ಹೆಣ್ಣುಮಕ್ಕಳು ಮನೆಕೆಲಸದಲ್ಲಿ ಸಹಕರಿಸಬೇಕೆಂದು ಶಾಲೆಗಳಿಗೆ ಕಳುಹಿಸಿದರೂ ಅರ್ಧದಲ್ಲೇ ನಿಲ್ಲಿಸಿ ಬಿಡುತ್ತಾರೆ. ತಮ್ಮಂದಿರನ್ನೋ ತಂಗಿಯಂದಿರನ್ನೋ ನೋಡಿಕೊಳ್ಳುವ ಜವಾಬ್ದಾರಿಯನ್ನು ಈ ಎಳೆಯರಿಗೆ ಹೊರಿಸಿಬಿಡುತ್ತಾರೆ. ಶೇಕಡಾ ೩೦ ಬಡತನದ ಕಾರಣದಿಂದಲೂ ಶೇಕಡಾ ೨೨ ಸಾಮಾಜಿಕ ಅಡೆತಡೆಗಳಿಂದಲೂ ಶೇಕಡಾ ೧೦ ಅನಾರೋಗ್ಯ ಇಲ್ಲವೇ ಹಿರಿಯರ ಅಕಾಲಿಕ ಮರಣದ ಕಾರಣದಿಂದ ವಿದ್ಯಾರ್ಜನೆಯನ್ನು ಪೂರ್ಣಗೊಳಿಸುವಲ್ಲಿ ವಿಫಲರಾಗಿ ವಂಚಿಸಲ್ಪಡುತ್ತಾರೆ.

ಹೆತ್ತವರ ಹೆಬ್ಬಯಕೆ

ಶಿಕ್ಷಣವು ಕಾಲ, ಶಕ್ತಿ ಹಾಗೂ ಸಂಪನ್ಮೂಲಗಳ ವ್ಯಯವಾಗಿದೆ. ಇದನ್ನು ದರ್ಮಾರ್ಥವಾಗಿ ನೀಡಿದರೂ ಕೆಲವರಾದರೂ ಕಾಲ ಮತ್ತು ಶಕ್ತಿವ್ಯಯದ ಕಾರಣ ಹೇಳಿ ಮಕ್ಕಳಿಗೆ ಶಿಕ್ಷಣ ನೀಡಲು ಹಿಂಜರಿಯುವರು. ಈ ಸಮಯದಲ್ಲಿ ಇದೇ ಶಕ್ತಿಯನ್ನು ಇತರ ಕೆಲಸಗಳಿಗೆ ಬಳಸಿದರೆ ಏನಾದರೂ ಗಳಿಕೆಯಾಗ ಬಹುದೆಂಬ ಆಕಾಂಕ್ಷೆಯಿಂದ ಮಕ್ಕಳ ಶಿಕ್ಷಣ ಅರ್ಧದಲ್ಲೇ ನಿಲ್ಲಿಸಲೂ ಆತಂಕಪಡುವುದಿಲ್ಲ. ಅಧಿಕಾಂಶ ಜನರು ಶಿಕ್ಷಣದಿಂದ ನೌಕರಿ, ಘನತೆ ಮತ್ತು ಸಾಮಾಜಿಕ ಸ್ಥಾನಮಾನಗಳು ದೊರಕಬಹುದು ಎಂಬ ಯೋಜನೆ ಹಾಕುತ್ತಾ ಶಾಲೆಗೆ ಕಳುಹಿಸಿಸುವರು. ಈ ವಿಚಾರಕ್ಕೇ ಧಕ್ಕೆ ಉಂಟಾದಾಗ ಇತರ ವೃತ್ತಿಗಳಿಂದ ಗಳಿಕೆ ಆಗಲೇ ಬೇಕಾದ ಅನಿವಾರ್ಯತೆ ಉಂಟಾದಾಗ ಇವರ ಆಶಾಭಂಗವಾಗಿ ಶಿಕ್ಷಣದ ಬಗ್ಗೆ ಆಸಕ್ತಿ ಮುರುಟಿ ಹೋಗುವುದು. ಹೆಚ್ಚಿನವರು ಈ ಕಾರಣದಿಂದಲೇ ಕೇವಲ ಓದು, ಬರಹಕ್ಕಷ್ಟೇ ಶಾಲೆಗೆ ಕಳುಹಿಸಿ ಮಧ್ಯದಲ್ಲಿ ಮುಕ್ತಾಯ ಮಾಡಲು ಮನಮಾಡುವರು.

ಕೋಷ್ಟಕ-೩.೬

ಹೆತ್ತವರ ನಿರೀಕ್ಷೆ

ಕ್ರ. ಸಂ.	ಹೆತ್ತವರ ನಿರೀಕ್ಷೆ	ಸಂಖ್ಯೆ	ಶೇಕಡಾ
೧	ನೌಕರಿಗಾಗಿ	೩೨	೩೨
೨	ಸಾಮಾಜಿಕ ಸಂಬಂಧ ಉತ್ತಮಗೊಳಿಸಲು	೧೧	೧೧
೩	ಆದಾಯ ಹೆಚ್ಚಿಸಲು	೫೭	೫೭
	ಒಟ್ಟು	೧೦೦	೧೦೦

ಶೇಕಡಾ ೩೨ ಮಂದಿಗೆ ಹುಡುಗರು ನೌಕರಿ ಪಡೆಯಲಿಕ್ಕಾಗಿಯೇ ಕಲಿಯುವುದೆಂಬ ಅನಿಸಿಕೆ. ಶೇಕಡಾ ೧೧ ಜನರಿಗೆ ಸಾಮಾಜಿಕ ಸಂಬಂಧ ಉತ್ತಮಗೊಳಿಸಲೂ, ನೌಕರಿ ಪಡೆಯಲೂ ವಿದ್ಯಾಭ್ಯಾಸ ಬೇಕೆಂಬ ವಿಚಾರವಿದೆ. ಒಟ್ಟಿನಲ್ಲಿ ಶೇಕಡಾ ೫೭ ಮಂದಿಗೆ ಶಿಕ್ಷಣದಿಂದ ಆದಾಯ ಹೆಚ್ಚುವುದು ಎಂಬ ಮನೋಭಾವನೆಯೇ ಕಂಡುಬರುತ್ತದೆ.

ಈ ಅಧ್ಯಯನದ ಪ್ರಕಾರ ೧೦೦ ಮಂದಿಯಲ್ಲಿ ಶೇಕಡಾ ೬೦ ಪ್ರೌಢ ಶಿಕ್ಷಣವನ್ನು ಆಯ್ಕೆ ಮಾಡಿದರೂ ಕಾಲೇಜಿನ ಹಂತವನ್ನು ತಲಪುವುದಿಲ್ಲ. ಶೇಕಡಾ ೩೦ಹೈಸ್ಕೂಲು ಶಿಕ್ಷಣದಿಂದಲೂ ವಂಚಿತರಾಗುವರು. ಹುಡುಗಿಯರ ವಿದ್ಯಾಭ್ಯಾಸದ ವಿಚಾರವಾಗಿ ಸಂಬಂಧಪಟ್ಟವರನ್ನು ಕೇಳಿದಾಗ ಈ ಕೆಳಗಿನ ಉತ್ತರಗಳು ದೊರಕಿದುವು.

ಕೋಷ್ಟಕ-೩.೭

ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಅಗತ್ಯ

ಕ್ರ.ಸಂ	ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಅಗತ್ಯ	ಸಂಖ್ಯೆ	ಶೇಕಡಾ
೧	ಎಸ್.ಎಸ್.ಎಲ್.ಸಿ.	೩೮	೩೮%
೨	ಪ್ರೌಢ ಶಿಕ್ಷಣ	೪೨	೪೨%
೩	ಬಡತನ (ಶಿಕ್ಷಣವೆಂದರೆ ಖರ್ಚು)	೮	೮%
೪	ಮನೆಕೆಲಸದಿಂದ ದೂರಾಗಿಸುವುದು	೧೨	೧೨%
	ಒಟ್ಟು	**೧೦೦**	**೧೦೦**

ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಎಷ್ಟು ಅಗತ್ಯ ಎಂದು ಕೇಳಿದಾಗ ೧೦೦ ಮಂದಿ ಪ್ರತಿವಾದಿಗಳಲ್ಲಿ (ಸಂಶೋಧನೆಗೆ ಒಳಪಟ್ಟವರಲ್ಲಿ) ಶೇಕಡಾ ೩೮ ಮಂದಿಯ ಅಭಿಪ್ರಾಯದಂತೆ ಹುಡುಗಿಯರಿಗೆ ಎಸ್.ಎಸ್.ಎಲ್.ಸಿ.ಗಿಂತ ಹೆಚ್ಚಿನ ಶಿಕ್ಷಣದ ಅಗತ್ಯವಿಲ್ಲ. ಹೆಚ್ಚಾಗಿ ಅವರು ಕಾಲೇಜಿಗೆ ಕಳುಹಿಸಲು ಆಸಕ್ತರಿಲ್ಲ. ಶೇಕಡಾ ೪೨ ಮಂದಿ ತಮ್ಮ ಹೆಣ್ಣುಮಕ್ಕಳು ಪ್ರೌಢ ಮಕ್ಕಳು ಪ್ರೌಢ ಶಿಕ್ಷಣ ಮುಗಿಸಿದೊಡನೆ ಮದುವೆಯಾಗಬೇಕು. ಇದರಿಂದಾಗಿ ಕಾಲೇಜು ಶಿಕ್ಷಣ ಬೇಡ ಎಂಬ ವಿಚಾರ ತಿಳಿಸಿದರು. ಶೇಕಡಾ ೮ ಜನರು ಉನ್ನತ ವ್ಯಾಸಂಗದ ಖರ್ಚು ವೆಚ್ಚಗಳನ್ನು ಭರಿಸಲು ತಮ್ಮಿಂದ ಅಸಾಧ್ಯ. ಅಲ್ಲದೆ ಇದರಿಂದ ಹೆಣ್ಣು ಮಕ್ಕಳ ವಿವಾಹಾದಿ ಖರ್ಚುಗಳಿಗೆ ಬಾಧಕವಾಗುವುದು ಎಂದು ಅಭಿಪ್ರಾಯಪಟ್ಟರು. ಶೇಕಡಾ ೧೨ ಮಂದಿಯ ಅಭಿಪ್ರಾಯದಂತೆ ಉನ್ನತ ಶಿಕ್ಷಣವು ಹುಡುಗಿಯರನ್ನು ಮನೆಕೆಲಸದಿಂದ ವಿಮುಖರನ್ನಾಗಿಸುವುದು. ಅಂದರೆ ವಿವಾಹಾನಂತರ ಗಂಡನ ಮನೆಯಲ್ಲಿ ಗಂಡ ಹಾಗೂ ಮಕ್ಕಳ ಲಾಲನೆ, ಪಾಲನೆ ಉನ್ನತ ಶಿಕ್ಷಣವು ಅಡ್ಡಿಪಡಿಸುವುದು. ಆದುದರಿಂದ ಅವರಿಗೆ ಶಿಕ್ಷಣಕ್ಕಿಂತ ಗೃಹಕೃತ್ಯದ ಅರಿವೇ ಮುಖ್ಯ ಎನ್ನುತ್ತಾರೆ.

ಒಟ್ಟಿನಲ್ಲಿ ವಿದ್ಯಾವಂತ ಹೆತ್ತವರು ಮಕ್ಕಳ ಉನ್ನತ ವ್ಯಾಸಂಗದತ್ತ ಆಸಕ್ತರಾಗಿದ್ದು ಅವಿದ್ಯಾವಂತರು ಇನ್ನೂ ಆ ಬಗ್ಗೆ ನಿರಾಸಕ್ತರಾಗಿರುವುದು ಕಂಡುಬರುತ್ತದೆ. ಅಂತಿಮವಾಗಿ ಈ ವಿದ್ಯಾಭ್ಯಾಸದ ಮಟ್ಟದ ಇಳಿಕೆ ಏರಿಕೆಗಳು ಹೆತ್ತವರ ಶಿಕ್ಷಣ ಮಟ್ಟದ ಅನುಪಾತದೊಂದಿಗೆ ಬೆಸದುಕೊಂಡಿದೆ ಎಂದು ನಿರ್ಧರಿಸಬಹುದು. ಉನ್ನತ ಹಾಗೂ ಮಧ್ಯಮ ವರ್ಗದವರು ಶೇಕಡಾ ೧೦೦ ತಮ್ಮ ಮಕ್ಕಳ ಶಿಕ್ಷಣಕ್ಕೆ ಆಸಕ್ತರಾಗಿರುವುದು ಕಂಡುಬರುತ್ತದೆ.

ಇಲ್ಲಿ ಗಮನಕ್ಕೆ ಬರುವ ಇನ್ನೊಂದು ಅಂಶವೇನೆಂದರೆ ಹೆಣ್ಣುಮಕ್ಕಳ ಮದುವೆಯ ವಿಚಾರದಿಂದ ಶಿಕ್ಷಣದ ಮೇಲಾಗುವ ಪ್ರಭಾವ. ಹೆಚ್ಚಿನವರು ಗಂಡುಮಕ್ಕಳ ಶಿಕ್ಷಣ, ನೌಕರಿ, ಆದಾಯದ ಬಗ್ಗೆ ಚಿಂತಿಸಿದರೆ ಹೆಣ್ಣುಮಕ್ಕಳ ವಿವಾಹದ ಬಗ್ಗೆ ಯೋಚಿಸುವರು. ಶೇಕಡಾ ೭೦ ಮಂದಿ ತಮ್ಮ ಹೆಣ್ಣು ಮಕ್ಕಳು ನೌಕರಿ ಮಾಡುವುದು ಬೇಡ, ಮದುವೆಯಾದರೆ ಸಾಕು ಎಂಬ ಅಭಿಪ್ರಾಯ ಹೊಂದಿರುತ್ತಾರೆ. ಪದವೀಧರ ಹೆತ್ತವರು ಮಾತ್ರ ಹುಡುಗಿಯರ ವಿವಾಹದ ಸಮಯದಲ್ಲಿ ಪ್ರಾಯದ ಮೇಲೆ ಪ್ರಭಾವ ಬೀರುವುದು. ಹುಡುಗರಿಗೂ ಶಿಕ್ಷಣದ ಬಳಿಕ ನೌಕರಿ ಇತ್ಯಾದಿಗಳು ವಿವಾಹವನ್ನು ಮುಂದೂಡುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಮೊಗವೀರ ಮಹಿಳೆಯರು ಶಿಕ್ಷಣದಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದು, ಇತ್ತೀಚಿನ ಆರ್ಥಿಕವಾಗಿ ಹಿಂದುಳಿದವರು ಕೂಡಾ ತಮ್ಮ ಮಕ್ಕಳಿಗೆ ಉನ್ನತ ಶಿಕಣವನ್ನು ನೀಡಲು ಬಯಸುತ್ತಾರೆ. ಶಿಕ್ಷಿತ ಮೊಗವೀರ ಸಮುದಾಯದ ಮಹಿಳೆಯರು ರಾಜಕೀಯದಲ್ಲೂ ಕೂಡಾ ದಾಪುಗಾಲು ಹಾಕುತ್ತಿರುವುದು ಒಂದು ಗಮನಾರ್ಹ ಅಂಶವಾಗಿದೆ. ಸ್ವಲ್ಪ ಮಟ್ಟಿನ ಆರ್ಥಿಕ ಸಮಸ್ಯೆ ಹಾಗೂ ಮಾಹಿತಿಯನ್ನು ಕಲೆ ಹಾಕುವಲ್ಲಿನ ಸಮಸ್ಯೆಯನ್ನು ಹೊರತು ಪಡಿಸಿದರೆ ಎಲ್ಲಾ ಕ್ಷೇತ್ರದಲ್ಲಿಯೂ ಕೂಡಾ ಇವರು ಉತ್ತಮ ಸಾಧನೆ ಮಾಡಿರುವುದು ಕ್ಷೇತ್ರ ಅಧ್ಯಯನದಿಂದ ತಿಳಿದು ಬಂದ ವಿಚಾರ. ಪ್ರಸ್ತುತ ಮೊಗವೀರ ಸಮುದಾಯದಲ್ಲಿ ಹಲವಾರು ಸಂಘ ಸಂಸ್ಥೆಗಳು, ಸಹಕಾರಿ ಸಂಘಗಳು ಹಾಗೂ ಸಮುದಾಯದ ಟ್ರಸ್ಟ್‌ಗಳು, ಇತ್ಯಾದಿಗಳು ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡುವಂತಹ ಕೆಲಸಗಳನ್ನು ಯಥೇಚ್ಛವಾಗಿ ಮಾಡುತ್ತಲಿವೆ. ಆ ಸಮುದಾಯದಲ್ಲಿ ಉತ್ತಮ ಅಂಕಗಳನ್ನು ಪಡೆದ ಹಾಗೂ ತೀರ ಆರ್ಥಿಕ ಸಂಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಪ್ರೋತ್ಸಾಹ ಧನ, ಪುಸ್ತಕಗಳ ವಿತರಣೆ, ಸಮವಸ್ತ್ರಗಳ ವಿತರಣೆಗಳನ್ನು ಮಾಡುವುದರ ಮೂಲಕ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹಗಳನ್ನು ನೀಡುವಷ್ಟರ ಮಟ್ಟಿಗೆ ಮೊಗವೀರ ಸಮುದಾಯವು ಶಿಕ್ಷಣದ ಪ್ರಾಮುಖ್ಯತೆಯನ್ನು ಮನಗಂಡಿದೆ. ಮೊಗವೀರ ಸಮುದಾಯದ ಮಹಿಳೆಯರು ಇತ್ತೀಚಿನ ದಿನಗಳಲ್ಲಿ ಶಿಕ್ಷಣದತ್ತ ಒಲವನ್ನು ತೋರುವುದು ಸಮುದಾಯವು ಅಭಿವೃದ್ಧಿಯತ್ತ ಸಾಗುವ ಸ್ಪಷ್ಟ ಚಿತ್ರಣವನ್ನು ಕೊಡುತ್ತದೆ.

ಉಲ್ಲೇಖಗಳು:

೧. ಅಕ್ಷತಾ, ೨೦೧೦,"**ಎ ಸ್ಟಡಿ ಒನ್ ಸೋಶಿಯೋ ಎಕಾನಮಿಕ್ ಪ್ರೊಬ್ಲಮ್ಸ್ ಅಫ್ ಫಿಶ್ ವೆಂಡಿಂಗ್ ಮೊಗವೀರ ವುಮೆನ್ ಇನ್ ಉಡುಪಿ ತಾಲೂಕು**".

೨. ಶಶಿಕಲ, ೨೦೧೦,"**ಮೊಗವೀರ ಸಮುದಾಯದ ಮಹಿಳೆಯರ ಶೈಕ್ಷಣಿಕ ಸಾಧನೆಗಳ ನಿರ್ಧಾರಕಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ**",

೩. ಶಾಲಿನಿ, ೨೦೦೯, "**ಇಂಪ್ಯಾಕ್ಟ್ ಅಫ್ ಎಜುಕೇಶನಲ್ ಒನ್ ಸೋಶಿಯಲ್ ಚೇಂಜ್ ಅಮಂಗ್ ಮೊಗವೀರ ವುಮೆನ್ ಎ ಕೇಸ್ ಸ್ಟಡಿ ಇನ್ ಉಡುಪಿ ತಾಲೂಕು**",

೪. ನಿಕೇತನ, ೨೦೦೫, "**ಸ್ತ್ರೀ ದೃಷ್ಟಿ**",

೫. ಉದಯ ಕುಮಾರ ಇರ್ವತ್ತೂರು,೨೦೦೭, "**ಉಡುಪಿ ಜಿಲ್ಲೆ, ಆಧುನೀಕರಣ, ಅಭಿವೃದ್ಧಿ ಮತ್ತು ಕೈಗಾರಿಕೆ**", ದಾಮಿನಿ ಸಾಹಿತ್ಯ, ಬೆಂಗಳೂರು

ಅಧ್ಯಾಯ-೪

ಅಧ್ಯಾಯ-೪

ಮೊಗವೀರ ಸಮುದಾಯದ ಸಂಸ್ಕೃತಿ ಮತ್ತು ಸಂಪ್ರದಾಯಗಳು

ಸಂಸ್ಕೃತಿಯು ಮಾನವ ಸಮಾಜದ ಉಸಿರು ಅದು ಮಾನವನ ಸಮೂಹ ಜೀವನದ ಅಭಿವ್ಯಕ್ತಿ ಸಂಸ್ಕೃತಿ ಮತ್ತು ಸಮಾಜ ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.ಅಂತೆಯೇ ಸಂಸ್ಕೃತಿಯ ಹೊರತಾಗಿ ಸಮಾಜದ ಅಧ್ಯಯನ ಅಸಾಧ್ಯ. "ಮಾನವ ತನ್ನ ಜೀವಿತದ ಗೊತ್ತು ಗುರಿಯನ್ನು ರೂಪಿಸಿಕೊಳ್ಳಲು ನಿರ್ಮಿಸಿಕೊಂಡ ಸಾಧನವೇ ಸಂಸ್ಕೃತಿ" ಎಂದು ಮಲಿನೌಸ್ಕಿ ಮಾನವ ಮತ್ತು ಸಂಸ್ಕೃತಿಯ ನಡುವಿನ ಸಂಬಂಧವನ್ನು ಸ್ಪಷ್ಟಪಡಿಸಿದ್ದಾರೆ.

ಯಾವುದೇ ಸಮುದಾಯದ ಅಧ್ಯಯನ ಮಾಡಬೇಕಾದರೆ ಅವರ ಸಂಸ್ಕೃತಿ ಹಾಗೂ ಸಂಪ್ರದಾಯಗಳು ಅವರ ಆಚಾರ-ವಿಚಾರಗಳು ತುಂಬಾ ಮಹತ್ವದ ಪಾತ್ರ ವಹಿಸುತ್ತದೆ. ಹಾಗೆಯೇ ಮೊಗವೀರ ಸಮುದಾಯದ ಸಂಸ್ಕೃತಿಯು ಸಹ ತನ್ನದೇ ಆದ ಸಂಪ್ರದಾಯ, ನಂಬಿಕೆ, ನೈತಿಕ ನಿಯಮ, ವೇಷ-ಭೂಷಣ, ಭಾಷೆ, ಆಚಾರ-ವಿಚಾರಗಳನ್ನು ಪ್ರಾಚೀನ ಕಾಲದಿಂದಲೂ ಬೆಳೆಸಿಕೊಂಡು ಬಂದಿದೆ. ಆದರೆ ಸಂಸ್ಕೃತಿಯು ಸ್ಥಿರವಲ್ಲ, ಕಾಲ ಬದಲಾದಂತೆ ಎಲ್ಲವೂ ಬದಲಾಗುತ್ತದೆ.ಅದು ಲಂಬಾಂತರವೂ ಆಗಬಹುದು ಅಥವಾ ಸಮಾನಾಂತರ ಚಲನೆಯು ಆಗಬಹುದು.

ಉಡುಪಿ ಹಾಗೂ ದ.ಕ ಜಿಲ್ಲೆಗಳಲ್ಲಿ ಕರ್ನಾಟಕದ ಉಳಿದ ಭಾಗಗಳಿಗಿಂತ ಭಿನ್ನವಾದ ಸಂಸ್ಕೃತಿಯನ್ನು ಅವಲೋಕಿಸಬಹುದು. ಉಡುಪಿ ಮೊಗವೀರ ಸಮುದಾಯದಲ್ಲಿ ಕರಾವಳಿಯ ಹಿಂದೂ ಸಂಸ್ಕೃತಿ ಗೋಚರಿಸುತ್ತಿದ್ದು ತಮ್ಮದೇ ಆದ ಆಚಾರ ವಿಚಾರಗಳನ್ನು ಹೊಂದಿದ ಸಮುದಾಯವಾಗಿದೆ. ಮೊಗವೀರರಲ್ಲಿ ದೈವರಾಧನೆ, ನಾಗಾರಾಧನೆ, ದೀಪಾವಳಿ ಮುಂತಾದ ಹಿಂದೂ ಧಾರ್ಮಿಕ ಆಚರಣೆಗಳೊಂದಿಗೆ ಉಡುಪಿ ಜಿಲ್ಲೆಯ ಬೆಣ್ಣೆಕುದ್ರು ಎಂಬಲ್ಲಿನ ಶ್ರೀ ಕುಲಮಹಾಸ್ತ್ರೀ ಅಮ್ಮನವರ ದೇವಿಯನ್ನು ವಿಶೇಷವಾಗಿ ಆರಾಧಿಸುತ್ತಾರೆ.

ಮೊಗವೀರರು ಮಂಸಹಾರಿಗಳಾಗಿದ್ದು ,ತುಳುನಾಡಿನ ಆಹಾರ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಜಿಲ್ಲೆಯ ಇತರ ಸಮುದಾಯಗಳಿಗೆ ಹೋಲಿಸಿದಾಗ ಮೊಗವೀರ ಮಹಿಳೆಯರು ಪುರುಷ ಸಮಾನವಲ್ಲದಿದ್ದರೂ ಉತ್ತಮ ಸ್ಥಾನಮಾನವನ್ನೇ ಗಳಿಸಿದ್ದಾರೆ. ಉನ್ನತ ಶಿಕ್ಷಣ ಪಡೆದಿರುವ ಕುಟುಂಬಗಳಲ್ಲಿ ಮಹಿಳೆಯರನ್ನು ಸಮನವಾಗಿ ನೋಡುವ ವಾಡಿಕೆ ಇದೆ.

ಪುರುಷರೊಂದಿಗೆ ಮಹಿಳೆಯರ ಸ್ಥಾನಮಾನ

ಸಮಾನತೆ ಮತ್ತು ಸಬಲೀಕರಣದ ಚಳುವಳಿ ಭಾರತಾದ್ಯಂತ ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭವಾಗಿರುವುದು ಸತ್ಯ. ಮಹಿಳಾ ಸಬಲೀಕರಣದ ವಿವಿಧ ವಲಯಗಳು ತೆರೆಮುಕೊಂಡಿರುವುದು ೧೯೭೦ರ ನಂತರ. ಮಹಿಳಾ ಮೀಸಲಾತಿ ಉದ್ಯೋಗ ಮತ್ತು ಶಿಕ್ಷಣ ರಂಗದಲ್ಲಿ ತೆರೆಮುಕೊಂಡ ನಂತರ ಬಹುತೇಕ ಕುಟುಂಬಗಳು ಮಹಿಳಾ ಶಿಕ್ಷಣಕ್ಕೆ ಹಾಗೂ ಉದ್ಯೋಗಕ್ಕೆ ಒತ್ತು ಕೊಡುತ್ತಾ ಬಂದಿವೆ. ಜಾಗತೀಕರಣದ ಸಮಾಜದಲ್ಲಿ ಮಹಿಳೆಯರಿಗೆ ಸರಿ ಹೊಂದುವ ಸಾಕಷ್ಟು ಉದ್ಯೋಗಗಳು ಹುಟ್ಟಿಕೊಂಡಿವೆ. ಇತ್ತೀಚಿನ ಎಲ್ಲಾ ಶಿಕ್ಷಿತ ಕುಟುಂಬಗಳು ಮಹಿಳೆಯರನ್ನು ಉದ್ಯೋಗದ ಕಡೆ ಪ್ರೋತ್ಸಾಹಿಸುವದರಿಂದ ಮಹಿಳೆಯ ಸ್ಥಾನಮಾನವು ಪುರುಷರೊಂದಿಗೆ ಸಮಾನತೆಯತ್ತ ಸಾಗುತ್ತಿರುವುದು ಅಭಿವೃದ್ಧಿದಾಯಕ ಬೆಳವಣಿಗೆ.

ಮೊಗವೀರರಲ್ಲಿ ಬಹುತೇಕ ಕುಟುಂಬಗಳು ಮಹಿಳೆಯರನ್ನು ಪುರುಷರೊಂದಿಗೆ ಸಮಾನ ದೃಷ್ಟಿಯಲ್ಲಿ ನೋಡುತ್ತವೆ. ಆದುದರಿಂದಲೇ ಮೊಗವೀರ ಮಹಿಳೆಯರು ರಾಜಕೀಯವಾಗಿ, ಶೈಕಣಿಕವಾಗಿ ಸಬಲೀಕರಣಗೊಂಡಿದ್ದಾರೆ. ಉಡುಪಿಯ ವಿವಿಧ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಹಾಗೂ ನಗರ ಸಭೆಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ಆಡಳಿತ ನಡೆಸುತ್ತಾರೆ.

ಮಹಿಳೆಯರ ಮೇಲೆ ಆಧುನೀಕರಣದ ಪ್ರಭಾವ

ಜಾಗತೀಕರಣದ ಪ್ರಭಾವದಿಂದ ಕಳೆದ ೩ ದಶಕಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ಬದಲಾವಣೆಗಳು ಎಲ್ಲಾ ಸಮುದಾಯದಲ್ಲು ಕಂಡುಬಂದಿದ್ದು. ಇದಕ್ಕೆ ಮೊಗವೀರ ಸಮುದಾಯವು ಹೊರತಾಗಿಲ್ಲ. ಜಾಗತೀಕರಣದ ಪ್ರಭಾವವನ್ನು ಯಾವುದೇ ಜಾತಿ ಸಮುದಾಯಗಳು ಮೀರಿ ನಿಂತಿಲ್ಲ. ಆಧುನಿಕ ಶಿಕ್ಷಣ ಮತ್ತು ಸಮೂಹ ಮಾಧ್ಯಮಗಳು ಆಧುನೀಕರಣಕ್ಕೆ ಇನ್ನಷ್ಟು ತೀವ್ರತೆಯನ್ನು ನೀಡಿವೆ. ಮೊಗವೀರ ಸಮುದಾಯ ಭೌತಿಕವಾಗಿ ಮತ್ತು ಅಭೌತ ಸಂಸ್ಕೃತಿಯಲ್ಲಿ ಕೂಡ ಆಧುನೀಕರಣವನ್ನು ರೂಢಿಸಿಕೊಂಡಿವೆ. ಭೌತಿಕ ಉಡುಗೆತೊಡುಗೆ, ಕಟ್ಟಡಗಳು, ಗೃಹೋಪಯೋಗಿ ವಸ್ತುಗಳಲ್ಲಿ ಸಾಕಷ್ಟು ಬದಲಾವಣೆಗೊಂಡಿವೆ.

ಇತೀಚೆಗೆ ವಿವಾಹ ಪದ್ಧತಿಯಲ್ಲಿ ಮತ್ತು ಇತರ ಆಚರಣೆಗಳಲ್ಲಿ ಕೂಡಾ ಸಣ್ಣ ಪ್ರಮಾಣದ ಬದಲಾವಣೆಯನ್ನು ಸಮಯದಿಂದ ಸಮಯಕ್ಕೆ ದಾಖಲಿಸಲು ಸಾಧ್ಯವಿದೆ. ಅತ್ಯಾಧುನಿಕ ಸಂವಹನ, ಹೆಚ್ಚಿರುವ ಉದ್ಯೋಗಾವಕಾಶ, ತಾಂತ್ರಿಕ ಶಿಕ್ಷಣಕ್ಕೆ ಮಹತ್ವ ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಹಾಗೂ ಆಧುನಿಕ ಗ್ರಾಹಕ ಸವಲತ್ತುಗಳ ಬಳಕೆ ಇವುಗಳಿಂದಾಗಿ ಸಮಾಜದಲ್ಲಿ ಸಮಾಜಿಕ ಪ್ರಜ್ಞೆ ಹೆಚ್ಚಾಗಿವೆ. ಇದರಿಂದಾಗಿ ಮೊಗವೀರ ಸಮುದಾಯದವರು ತಮ್ಮ ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣ, ಆಧುನಿಕ ಸವಲತ್ತುಗಳನ್ನು ಬಳಸುವುದು ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡುವ ಪ್ರಕ್ರಿಯೆ ಆರಂಭವಾಗಿದೆ. ಹಾಗೂ ವಿಶೇಷವಾಗಿ ಮಹಿಳೆಯರಲ್ಲೂ ಇತರ ಸಮುದಾಯದ ಸರೀಕರರ ಮುಂದೆ ತಾವು ಯಾವುದೇ ವಿಚಾರಗಳಲ್ಲೂ ಕಡಿಮೆ ಇಲ್ಲ ಎನ್ನುವ ಜಾಗೃತ ಸ್ಥಿತಿ ಆಧುನೀಕರಣದಿಂದ ಉಂಟಾದ ಫಲಶೃತಿ.

ಮಹಿಳೆಯರ ಮೇಲೆ ಪಾಶ್ಚಾತ್ಯೀಕರಣದ ಪ್ರಭಾವ

ಉದ್ಯೋಗ ಮತ್ತು ಶಿಕ್ಷಣವನ್ನು ಅರಸಿ ಹೊರದೇಶಕ್ಕೆ ವಲಸೆ ಹೋಗುವ ಜಾಯಮಾನ ಉಡುಪಿ ಜಿಲ್ಲೆಯಲ್ಲಿ ಕಂಡುಬರುವುದು ಸ್ವಾತಂತ್ರ್ಯ ಪೂರ್ವದಲ್ಲೇ ಇತ್ತು. ೧೯೮೦ ರ ನಂತರದಲ್ಲಿ ಕೂಡಾ ಯುವ ಜನತೆ ವಲಸೆ ಹೋಗಲಾರಂಭಿಸಿತು. ಮೊಗವೀರರಲ್ಲಿಯೂ ಕೂಡಾ ಬಹಳಷ್ಟು ಕುಟುಂಬಗಳು ವಿವಿಧ ದೇಶಗಳಿಗೆ ವಲಸೆ ಹೋಗಿ ಉದ್ಯೋಗ ನಿಮಿತ್ತ ಅಲ್ಲಿಯೇ ಮನೆಮಾಡಿದ್ದಾರೆ. ಆಧುನಿಕ ಸಂಪರ್ಕ ಮತ್ತು ಸಂವಹನದಿಂದ ಬಹುತೇಕ ಪಾಶ್ಚಾತ್ಯ ಸಂಸ್ಕೃತಿ ಸ್ಥಳೀಯ ಮೊಗವೀರರಲ್ಲಿಯೂ ಕೂಡಾ ಕಂಡುಬರುತ್ತದೆ. ಟಿ.ವಿ ಚಾನೆಲ್‌ಗಳು, ಮೊಬೈಲ್ ದೂರವಾಣಿ, ಸಾಮಾಜಿಕ ಜಾಲತಾಣಗಳು ಇತ್ಯಾದಿಗಳಿಂದ ಪುರುಷ ಮತ್ತು ಮಹಿಳೆಯಲ್ಲಿ ಪಾಶ್ಚಾತ್ಯೀಕರಣ ಪ್ರಭಾವ ತೀವ್ರವಾಗಿದೆ. ಸ್ವಾತಂತ್ರ್ಯೋತ್ತರ ಭಾರತೀಯ ಸಮಾಜದಲ್ಲಿ ಪಾಶ್ಚಾತ್ಯರ ಪ್ರಭಾವ ಅಗಾಧವಾಗಿದೆ. ಬದುಕಿನ ಪ್ರತಿಯೊಂದು ಹಂತದಲ್ಲೂ ಪಾಶ್ಚಾತ್ಯರ ಪ್ರಭಾವ ನಿಚ್ಚಳವಾಗಿ ಕಂಡುಬರುತ್ತದೆ.

ಸಾಮಾನ್ಯವಾಗಿ ಯಾವುದೇ ಸಮಾಜದ ಪ್ರಗತಿಯನ್ನು ಅದರ ಆರ್ಥಿಕ ಪ್ರಗತಿ ಶೈಕ್ಷಣಿಕ ಸ್ಥಾನಮಾನ ಹಾಗೂ ರಾಜಕೀಯವಾಗಿ ಪ್ರಭಾವಿಸುವ ಶಕ್ತಿ ಇವುಗಳ ಆಧಾರದಲ್ಲಿ ಶ್ರೇಣೀಕರಿಸಲಾಗುತ್ತದೆ. ಭಾರತೀಯ ಸಮಾಜವು ಪಾಶ್ಚಾತ್ಯರ ಆಗಮನದ ನಂತರ ಸಾಂಸ್ಕೃತಿಕವಾಗಿ ವಿಘಟನೆಗೊಂಡು ಸ್ವಾತಂತ್ರ್ಯ ಆಲೋಚನೆ ಮತ್ತು ಬದುಕಿನ ಶೈಲಿಯನ್ನು ಬದಲಾಯಿಸಿಕೊಂಡಂತೆ ಸ್ವಾತಂತ್ರ್ಯದ ನಂತರವೂ ಈ ಬೆಳವಣಿಗೆ ಸಹಜವಾಗಿಯೇ ಎಲ್ಲಾ ಸಮುದಾಯದ ಮೇಲೂ ಪ್ರಭಾವವನ್ನು ಬೀರಿದೆ.


ಮೊಗವೀರ ಸಮುದಾಯದ ಮಹಿಳೆಯರು ಸಾಂಪ್ರದಾಯಿಕ ಕಸುಬಿನ ಜೊತೆಗೆ ಆಧುನೀಕರಣದಿಂದ (ಪಾಶ್ಚಾತ್ಯೀಕರಣದಿಂದ) ಸಮಾಜದಲ್ಲಿ ಉಂಟಾದ ಬದಲಾವಣೆಗಳ ಕಾರಣಗಳಿಂದ ಹೊಸ ಹೊಸ ಅವಕಾಶಗಳು ಸೃಷ್ಟಿಯಾದಂತೆ ಅವುಗಳನ್ನು ಕಾಲಾನುಕ್ರಮವಾಗಿ ಬಳಸಿಕೊಳ್ಳುವ ಮತ್ತು ಬದಲಾವಣೆಗೆ ಮುಕ್ತವಾಗಿ ತೆರೆದುಕೊಳ್ಳುವ ಮನೋಭಾವವನ್ನು ಶೈಕ್ಷಣಿಕ ಕಾರಣದಿಂದ ಹೊಂದಿರುತ್ತಾರೆ. ವಿದ್ಯಾಭ್ಯಾಸ ಹೊಂದಿದ ಮೊಗವೀರ ಮಹಿಳೆ ತನ್ನ ಕುಟುಂಬವನ್ನು ಆಧುನೀಕರಣದ ನೆಲೆಯಲ್ಲಿ ಕಟ್ಟಿಕೊಳ್ಳಲು ತವಕಿಸುವುದು ಈ ಹಂತದಲ್ಲಿ ಉಂಟಾಗುವ ಸಾಂಪ್ರದಾಯಿಕ ಸಂಘರ್ಷಗಳನ್ನು ಎದುರಿಸುವುದು ಸಾಮಾನ್ಯ.

ಮೊಗವೀರ ಮಹಿಳೆಯರಿಗೆ ಸೀಮಿತವಾಗಿ ಪಾಶ್ಚಾತ್ಯೀಕರಣದ ಪ್ರಭಾವವನ್ನು ವ್ಯಾಖ್ಯಾನಿಸ ಬಹುದಾದರೆ ಉದ್ಯೋಗಗಳಲ್ಲಿ ಕಂಡು ಬಂದಿರುವ ಆಗಾಧವಾದ ಬದಲಾವಣೆಗಳನ್ನು ನಾವು ಕಾಣಬಹುದು. ಪ್ರಸ್ತುತ ಉನ್ನತ ವ್ಯಾಸಂಗ, ಪ್ರಭಾವಿತ ಹುದ್ದೆಗಳು, ರಾಜಕೀಯ ಸ್ಥಾನಮಾನ, ಸಾಮಾಜಿಕ ಆಯಾಕಟ್ಟಿನ ಸ್ಥಾನಮಾನ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯನ್ನು ನಾವು ಪ್ರತ್ಯೇಕ ಪ್ರತ್ಯೇಕವಾಗಿ ಪರಿಭಾವಿಸಬೇಕಾಗಿದೆ. ಸೀಮಿತ ಅವಕಾಶದಲ್ಲಿ ಈ ಎಲ್ಲಾ ಅಂಶಗಳನ್ನು ಅಂಕಿ ಅಂಶಗಳ ಆಧಾರದಲಿ ವಿಸ್ತರಿಸಿ ದೃಢೀಕರಿಸಲು ಸಾಧ್ಯವಾಗುತ್ತಿಲ್ಲ. ಆದರೆ ಪಾಶ್ಚಾತ್ಯೀಕರಣದ ಪ್ರಭಾವ ೧೯ನೇ ಶತಮಾನನ ಆದಿ ಭಾಗದಿಂದ ಹಿಡಿದು ೨೦ನೇ ಶತಮಾನದವರೆಗೆ ಕುಂಠಿತವಾಗಿ ಪ್ರಭಾವವನ್ನು ಕಂಡಿದ್ದರೆ ೨೧ನೇ ಶತಮಾನದಿಂದ ಇದು ನಾಗಾಲೋಟದಿಂದ ಸಾಗಿರುವುದನ್ನು ಸಮಾಜಶಾಸ್ತ್ರಜ್ಞರು ಗುರುತಿಸಿರುತ್ತಾರೆ.

ಕೋಷ್ಟಕ-೪.೧

ಮಹಿಳೆಯರ ಸ್ಥಾನಮಾನದ ವಿವರ

ಕ್ರ.ಸಂ	ಮಹಿಳೆಯರ ಸ್ಥಾನಮಾನದ ಮಟ್ಟ	ಸಂಖ್ಯೆ	ಶೇಕಡಾ
೧	ಪುರುಷರಿಗಿಂತ ಉನ್ನತ	೦	೦
೨	ಪುರುಷರಷ್ಟೇ ಸಮಾನ	೩೦	೩೦
೩	ಪುರುಷರಿಗಿಂತ ಕೆಳಮಟ್ಟದಲ್ಲಿದೆ	೫೨	೫೨
೪	ಇತರೆ	೧೮	೧೮
	ಒಟ್ಟು	**೧೦೦**	**೧೦೦**




ಮೊಗವೀರ ಮಹಿಳೆಯರು ಪುರುಷರೊಂದಿಗೆ ಸಮಾನವಾದ ಸ್ಥಾನಮಾನವನ್ನು ಹೊಂದಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಶೇಕಡಾ ೩೦ ಮಂದಿ ಸಮಾನತೆ ಇದೆ ಎಂದರೆ ಶೇಕಡಾ ೫೨ ಮಂದಿ ಪುರುಷರಿಗಿಂತ ಕೆಳಮಟ್ಟದಲ್ಲಿದೆ ಎಂದರು. ಉಳಿದ ೧೮ ಮಂದಿ ವಿವಿಧ ಸನ್ನಿವೇಶಗಳಲ್ಲಿ ವಿವಿಧ ಸ್ಥಾನಮಾನ ದೊರೆಯುತ್ತದೆ ಎಂದರು. ಪುರುಷರೊಂದಿಗೆ ಮಹಿಳೆಯರ ಸ್ಥಾನಮಾನವು ಮಹಿಳೆಯರ ಶಿಕ್ಷಣದ ಹಿನ್ನಲೆ, ಔದ್ಯೋಗಿಕ ಹಿನ್ನಲೆ ಮತ್ತು ಇತರ ಅಂಶಗಳನ್ನು ಹೊಂದಿಕೊಂಡಿದೆ.

ಕೋಷ್ಟಕ-೪.೨

ಕೌಟುಂಬಿಕ ವಿಚಾರಗಳಲ್ಲಿ ಮಹಿಳೆಯರ ನಿರ್ಧಾರದ ವಿವರ

ಕ್ರ.ಸಂ	ಕೌಟುಂಬಿಕ ವಿಚಾರಗಳಲ್ಲಿ ಮಹಿಳೆಯರ ನಿರ್ಧಾರ	ಸಂಖ್ಯೆ	ಶೇಕಡಾ
೧	ಇದೆ	೭೧	೭೧
೨	ಇಲ್ಲ	೨೯	೨೯
	ಒಟ್ಟು	೧೦೦	೧೦೦




ಪುರುಷ ಪ್ರಧಾನ ಮತ್ತು ಮಕ್ಕಳಕಟ್ಟು ವ್ಯವಸ್ಥೆಯ ಮೊಗವೀರಲ್ಲಿ ಕೌಟುಂಬಿಕ ನಿರ್ಧಾರಗಳನ್ನು ಬಹುತೇಕ ಮಹಿಳೆಯರೂ ಪುರುಷರೊಂದಿಗೆ ಸೇರಿಕೊಂಡೇ ತೆಗೆದುಕೊಳ್ಳುವುದನ್ನು ಗಮನಿಸಬಹುದಾಗಿದೆ .ಶೇಕಡಾ ೭೧ ಮಂದಿ ಕೌಟುಂಬಿಕ ನಿರ್ಧಾರಗಳಲ್ಲಿ ತಮ್ಮ ಪಾತ್ರ ಇದೆ ಎಂದರು. ಕೇವಲ ೨೯ ಮಂದಿ ಮಹಿಳೆಯರು ಮನೆಯ ನಿರ್ಧಾರಗಳಲ್ಲಿ ತಮ್ಮ ಪಾತ್ರವಿಲ್ಲ ಎಂದು ಹೇಳಿದರು.

ಕೋಷ್ಟಕ-೪.೩

ಕುಟುಂಬದಲ್ಲಿ ಮಹಿಳೆಯರ ಪಾಶ್ಚಾತೀಕರಣದ ಪ್ರಭಾವಕ್ಕೆ ವಿರೋಧ

ಕ್ರ.ಸಂ	ಕುಟುಂಬದಲ್ಲಿ ಮಹಿಳೆಯರ ಪಾಶ್ಚಾತೀಕರಣದ ವಿರೋದ	ಸಂಖ್ಯೆ	ಶೇಕಡಾ
೧	ಇದೆ	೧೦೦	೧೦೦
೨	ಇಲ್ಲ	೦	೦
	ಒಟ್ಟು	**೧೦೦**	**೧೦೦**




ಮಹಿಳೆಯರ ಮೇಲೆ ಪಾಶ್ಚಾತ್ಯೀಕರಣದ ಪ್ರಭಾವದ ವಿರೋಧದ ಬಗ್ಗೆ ಒಟ್ಟು ಮಾಡಿದ ಮಾಹಿತಿಯಲ್ಲಿ ಎಲ್ಲ ಶೇಕಡಾ ೧೦೦ ಮಂದಿ ಮಾಹಿತಿದಾರರು ಪಾಶ್ಚಾತ್ಯೀಕರಣದದ ವಿರುದ್ಧದ ಮಾಹಿತಿಯನ್ನು ನೀಡಿದ್ದಾರೆ. ಬಹುಶ: ಅವರಿಗೆ ಪಾಶ್ಚಾತ್ಯೀಕರಣದ ವಿವಿಧ ಮುಖಗಳಾದ ಉಡುಗೆ, ಭಾಷೆ, ಜೀವನ ಶೈಲಿ ಮತ್ತು ಸ್ಥಳೀಯ ಸಂಸ್ಕೃತಿಯ ಬಗ್ಗೆ ಮೊಗವೀರ ಮಹಿಳೆಯರಿಗಿರುವ ಧೋರಣೆ ವಿಭಿನ್ನವಾಗಿದೆ. ಆದರೆ ಮೊಗವೀರರಲ್ಲಿ ಪಾಶ್ಚಾತೀಕರಣಕ್ಕೆ ಒಲವು ತೋರುವ ಶಿಕ್ಷಿತ ಮಹಿಳೆಯರ ವಿರುದ್ಧ ಎಲ್ಲಾ ಮಾಹಿತಿದಾರರೂ ದನಿಯೆತ್ತಿದರು.

ಕೋಷ್ಟಕ-೪.೪

ಮಹಿಳೆಯರ ಮೇಲೆ ಆಧುನೀಕರಣದ ಪ್ರಭಾವ

ಕ್ರ.ಸಂ	ಮಹಿಳೆಯರ ಮೇಲೆ ಆಧುನೀಕರಣದ ಪ್ರಭಾವ ಬೀರಿರುವಿಕೆ	ಸಂಖ್ಯೆ	ಶೇಕಡಾ
೧	ಇದೆ	೧೦೦	೧೦೦
೨	ಇಲ್ಲ	೦	೦
	ಒಟ್ಟು	**೧೦೦**	**೧೦೦**




ಕೋಷ್ಟಕ ೪.೪ ರಲ್ಲಿ ಪಾಶ್ಚಾತ್ಯೀಕರಣದಷ್ಟೇ ಮೊಗವೀರರು ವಿರೋಧಿಸುವ ಇನ್ನೊಂದು ಕ್ಷೇತ್ರ ಆಧುನೀಕರಣ. ಆಧುನೀಕರಣವೂ ಪಾಶ್ಚಾತ್ಯೀಕರಣದಷ್ಟೇ ತೀವ್ರವಾದುದು. ಸಂಶೋಧಕರ ಪ್ರಶ್ನೆಗೆ ಸಿಕ್ಕಿದ ಉತ್ತರ ಶೇಕಡಾ ೧೦೦ ಮಾಹಿತಿದಾರರೂ ಆಧುನೀಕರಣದ ಅನುಯಾಯಿ ವಿರೋಧಿ. ಆಧುನೀಕರಣದಿಂದಲೂ ಸ್ಥಳೀಯ ಸಂಸ್ಕೃತಿಯ ಅಳಿವಾಗುತ್ತದೆ. ಸ್ಥಳೀಯ ಭಾಷೆ ಮತ್ತು ಜೀವನ ಶೈಲಿಯಿಂದ ಯುವ ಜನತೆ ದೂರವಾಗುತ್ತದೆ ಎನ್ನುವುದು ಎಲ್ಲ ಮಾಹಿತಿದಾರರ ಪ್ರತಿಕ್ರಿಯೆ. ಆಧುನೀಕರಣದ ಮುಖವಾಗಿ ಯುವ ಜನರು ಇಂಟರ್‌ನೆಟ್, ಫೇಸ್‌ಬುಕ್, ವಾಟ್ಸ್‌ಅಫ್ ಇತ್ಯಾದಿಗಳನ್ನು ಉಪಯೋಗಿಸುವುದರಿಂದ ಸ್ಥಳೀಯ ಸಂಸ್ಕೃತಿಯಿಂದ ಅವರು ದೂರವಾಗುವಂತೆ ಮಾಡಿದೆ. ಆದುದರಿಂದ ಆಧುನೀಕರಣವೂ ಪಾಶ್ಚಾತ್ಯೀಕರಣದಷ್ಟೇ ತೀವ್ರವಾದ ಶಾಪವೆನ್ನುತ್ತಾರೆ ಮಾಹಿತಿದಾರರು. ಮಾತ್ರವಲ್ಲದೇ ಮಹಿಳೆಯರು ಆಧುನಿಕ ಉಡುಗೆಯನ್ನು ಬಳಸುವುದರಿಂದ ಸ್ಥಳೀಯ ಮತ್ತು ಸಾಂಸ್ಕೃತಿಕ ಉಡುಗೆಗಳಿಂದ ನಾವು ದೂರವಾಗುತ್ತಿದ್ದೇವೆ ಎನ್ನುವುದು ಇನ್ನೊಂದು ಅಭಿಪ್ರಾಯ.

ಕೋಷ್ಟಕ-೪.೫

ಮಹಿಳೆಯರ ಮೇಲೆ ಆಧುನೀಕರಣ ಪ್ರಭಾವ ಬೀರಿರುವ ಕ್ಷೇತ್ರಗಳು

ಕ್ರ.ಸಂ	ಆಧುನೀಕರಣ ಪ್ರಭಾವ ಬೀರಿರುವ ಕ್ಷೇತ್ರಗಳು	ಸಂಖ್ಯೆ	ಶೇಕಡಾ
೧	ಶೈಕ್ಷಣಿಕ ಸ್ಥಾನಮಾನದಲ್ಲಿ ಅಭಿವೃದ್ಧಿ	೪೫	೪೫
೨	ಉಡುಗೆ ತೊಡುಗೆಯಲ್ಲಿ ಬದಲಾವಣೆ	೩೦	೩೦
೩	ಸಮಾನ ಸ್ಥಾನಮಾನದ ಉದ್ದೇಶಗಳಲ್ಲಿ	೧೦	೧೦
೪	ಮೇಲರಿಮೆ	೧೫	೧೫
	ಒಟ್ಟು	೧೦೦	೧೦೦




ಕೋಷ್ಟಕ ೪.೫ ರಲ್ಲಿ ಮೊಗವೀರ ಮಹಿಳೆಯರ ಮೇಲೆ ಆಧುನೀಕರಣ ಪ್ರಭಾವ ಬೀರುವ ಕ್ಷೇತ್ರಗಳ ಬಗ್ಗೆ ಕೇಳಿದ ಪ್ರಶ್ನೆಗೆ ಶೇಕಡಾ ೪೫ ಮಂದಿ ಶೈಕ್ಷಣಿಕವಾಗಿ ಸಾಧನೆ ಮಾಡಿದ ಮಹಿಳೆಯರಲ್ಲಿ ಹೆಚ್ಚು ಆಧುನೀಕರಣವಾಗುತ್ತಿದೆ ಎಂಬ ಅಭಿಪ್ರಾಯ ಬಂದಿದೆ. ಅದೇ ರೀತಿ ಶೇಕಡಾ ೩೦ ಮಂದಿ ಮೊಗವೀರ ಮಹಿಳೆಯರ ಉಡುಗೆ ತೊಡುಗೆಯಲ್ಲಿ ಆದ ಬದಲಾವಣೆಯ ಬಗಗೆ ಮಾಹಿತಿ ನೀಡಿದ್ದಾರೆ. ಅಷ್ಟೇ ಅಲ್ಲದೆ ಪುರುಷರೊಂದಿಗೆ ಸಮಾನ ಸ್ಥಾನಮಾನ ಪಡೆಯುವ ಉದ್ದೇಶದಲ್ಲಿಯೂ ಶೇಕಡಾ ೧೦ ಮಂದಿ ಅಧುನೀಕರಣದ ಪ್ರಭಾವ ವಿರುದ್ಧ ದನಿಯತ್ತಿದರು. ಉಳಿದ ಶೇಕಡಾ ೧೫ ಮಂದಿ ಜಾತಿ ಮೇಲರಿಮೆಯ ಕಾರಣಕ್ಕಾಗಿ ಆಧುನೀಕರಣವನ್ನು ವಿರೋಧಿಸುತ್ತಾರೆ.

ಕೋಷ್ಟಕ-೪.೬

ರಾಜಕೀಯದಲ್ಲಿ ಮಹಿಳೆಯರು ಭಾಗವಹಿಸುವಿಕೆಯ ಬಗ್ಗೆ ಸಮುದಾಯದ ವಿರೋದ

ಕ್ರ.ಸಂ	ರಾಜಕೀಯದಲ್ಲಿ ಮಹಿಳೆಯರು ಭಾಗವಹಿಸುವಿಕೆಯನ್ನು ಸಮುದಾಯದ ವಿರೋದ	ಸಂಖ್ಯೆ	ಶೇಕಡಾ
೧	ಇದೆ	೫೫	೫೫
೨	ಇಲ್ಲ	೪೫	೪೫
	ಒಟ್ಟು	**೧೦೦**	**೧೦೦**


ಮೊಗವೀರ ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವ ವಿರುದ್ಧ ಸಮುದಾಯ ಯಾವ ಅಭಿಪ್ರಾಯ ನೀಡುತ್ತದೆ ಎನ್ನುವ ಪ್ರಶ್ನೆಗೆ ಶೇಕಡಾ ೫೫ ಮಂದಿ ಮಹಿಳಾ ರಾಜಕಾರಣವನ್ನು ಮೊಗವೀರರು ವಿರೋಧಿಸುತ್ತಾರೆ. ಶೇಕಡಾ ೪೫ ಮಂದಿ ದತ್ತಾಂಶ ತೆಗೆದುಕೊಂಡಾಗ ನಕಾರಾತ್ಮಕವಾಗಿ ಸ್ಪಂದಿಸಿರುವುದು ತಿಳಿಯುತ್ತದೆ. ರಾಜಕೀಯವಾಗಿ ಮೊಗವೀರ ಮಹಿಳೆಯರು ಸಾಧನೆಗೈದಿರುವುದು ಬಹಳಷ್ಟು ಕಡಿಮೆ.



ಕೋಷ್ಟಕ-೪.೭

ಇತರ ಸಮುದಾಯದ ಬೆರೆಯುವಿಕೆಯ ಮಾಹಿತಿ

ಕ್ರ.ಸಂ	ಇತರೆ ಸಮುದಾಯದ ಜನರೊಂದಿಗೆ ಬೆರೆಯುವಿಕೆ	ಸಂಖ್ಯೆ	ಶೇಕಡಾ
೧	ಇದೆ	೮೨	೮೨
೨	ಇಲ್ಲ	೧೮	೧೮
	ಒಟ್ಟು	**೧೦೦**	**೧೦೦**




ಇತರೆ ಸಮುದಾಯದ ಜನರೊಂದಿಗೆ ಬೆರೆಯುವಿಕೆ

ಇತರ ಸಮುದಾಯದವರೊಂದಿಗೆ ಮೊಗವೀರರು ಬೆರೆಯುವುದು ಕುರಿತಾದ ಪ್ರಶೆಗೆ ಶೇಕಡಾ ೮೨ ಮಂದಿ ಸಕಾರಾತ್ಮಕ ಸಂಬಂಧವಿದೆ ಎನ್ನುವುದನ್ನು ಉಲ್ಲೇಖಿಸಿದರೆ ಶೇಕಡಾ ೧೮ ಮಂದಿಗೆ ಇತರ ಸಮುದಾಯಗಳೊಂದಿಗೆ ಸಕಾರಾತ್ಮಕ ಸಂಬಂಧ ಹೊಂದಿಲ್ಲ ಎನ್ನುವುದುನ್ನು ಪ್ರಸ್ತಾಪಿಸುತ್ತಾ ಮೊಗವೀರರು ರಾಜಕೀಯ ಕಾರಣಗಳಿಗೋಸ್ಕರ ಕೆಲವರಲ್ಲಿ ನಕಾರಾತ್ಮಕ ಸಂಬಂಧ ಇರಿಸಿದ್ದಾರೆ. ಮೊಗವೀರರು ಉಡುಪಿ ತಾಲೂಕಿನಲ್ಲಿರುವ ಎಲ್ಲ ಸಮುದಾಯದವರಿಗೂ ಬೇಕಾದ ಸಮುದಾಯದ ಜನರಾಗಿದ್ದಾರೆ. ಮೊಗವೀರ ಸಮುದಾಯದ ಜನಸಂಖ್ಯೆಯು ಉಡುಪಿ ತಾಲೂಕಿನಲ್ಲಿ ಅತಿಯಾಗಿದ್ದು ಪ್ರಬಲ ಜಾತಿಯೆಂದೇ ಹೇಳಬಹುದು ಇದರಿಂದಾಗಿ ಎಲ್ಲ ಶೈಕ್ಷಣಿಕ, ಔದ್ಯಮಿಕ, ರಾಜಕೀಯ, ಆರ್ಥಿಕ ರಂಗಗಳಲ್ಲಿ ಕಾಣಿಸಿಕೊಳ್ಳುವ ಮೊಗವೀರರು ಉಳಿದೆಲ್ಲ ಸಮುದಾಯಗಳಿಗೂ ಬೇಕಾದ ಮಂದಿಯೆನಿಸುತ್ತಾರೆ.

ಕೋಷ್ಟಕ-೪.೮

ಇತರ ಸಮುದಾಯದವರೊಂದಿಗಿನ ಭಾವನೆಯ ಮಾಹಿತಿ

ಕ್ರ.ಸಂ	ಇತರೆ ಸಮುದಾಯದ ಜನರೊಂದಿಗಿನ ಭಾವನೆ	ಸಂಖ್ಯೆ	ಶೇಕಡಾ
೧	ಉತ್ತಮ	೩೯	೩೯
೨	ಕೀಳು	೧೧	೧೧
೩	ಕೆಲವರ ಬಗ್ಗೆ ಉತ್ತಮ	೩೮	೩೮
೪	ಗೊತ್ತಿಲ್ಲ	೧೨	೧೨
	ಒಟ್ಟು	**೧೦೦**	**೧೦೦**




ಇತರ ಸಮುದಾಯಗಳ ಬಗ್ಗೆ ತಮ್ಮ ಭಾವನೆಗಳು ಎಂಬ ಸಂಶೋಧಕರ ಪ್ರಶ್ನೆಗೆ ಶೇಕಡಾ ೩೯ ಮಂದಿ ನಮ್ಮ ಸಂಬಂಧಗಳು ಉತ್ತಮವಾಗಿದೆ ಎಂದು ವ್ಯಕ್ತಪಡಿಸಿದರು. ಶೇಕಡಾ ೧೧ ಮಂದಿ ನಾವು ಇತರ ಸಮುದಾಯದವರನ್ನು ನಮ್ಮಷ್ಟು ಗೌರವದಿಂದ ನೋಡುವುದಿಲ್ಲ ಎಂದರು. ಶೇಕಡಾ ೩೮ ಮಂದಿ ಕೆಲವು ಮಂದಿಯನ್ನು ಎಂದರೆ ವೈಯಕ್ತಿಕ ವರ್ಚಸ್ಸಿಗೆ ಅನುಗುಣವಾಗಿ ಭಿನ್ನವಾಗಿ ಗೌರವಿಸುತ್ತೇವೆ ಎಂದು ಹೇಳಿದರು.ಶೇಕಡಾ ೧೨ ಮಂದಿ ಈ ಬಗ್ಗೆ ಸ್ಪಷ್ಟ ಉತ್ತರ ನೀಡಿಲ್ಲ. ಬಹುಶ: ಉಡುಪಿ ತಾಲೂಕಿನಲ್ಲಿ ಜಾತಿಯ ಪ್ರಜ್ಞೆ ಹೆಚ್ಚಾಗಿದ್ದು, ಸಸ್ಯಹಾರಿ-ಮಾಂಸಹಾರಿ ಅಂತರ ಕಂಡುಬರುತ್ತದೆ. ಅಲ್ಲದೆ ಬ್ರಾಹ್ಮಣರು ಇಲ್ಲಿನ ಶೂದ್ರರನ್ನು ಹತ್ತಿರ ಸೇರಿಸಿಕೊಳ್ಳುವುದು ಎಂದರೆ ಮನೆಯೊಳಗೆ ಬೆರೆಸಿಕೊಳ್ಳುವುದು ಕಡಿಮೆ. ಇದರಿಂದಾಗಿ ಜಾತಿ ಪ್ರ ಜ್ಞೆ, ಅಂತರ ಇತ್ಯಾದಿಗಳು ಕಾಣಿಸಿಕೊಳ್ಳುತ್ತವೆ. ರಾಜಕೀಯ ಕ್ಷೇತ್ರದಲ್ಲಿ ಯಾವುದೇ ಭಿನ್ನತೆಗಳಿಲ್ಲದೆ ಎಲ್ಲ ವರ್ಗದ ಮತ್ತು ಎಲ್ಲ ಜಾತಿಯ ಜನರೂ ಒಟ್ಟು ಸೇರುವುದು ಸಾಮಾನ್ಯವಾಗಿ ಅವಲೋಕಿಸಬಹುದಾಗಿದೆ. ಮೊಗವೀರರು ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಕಾಣಿಸಿಕೊಳ್ಳುತ್ತಾರೆ.

ಕೋಷ್ಟಕ-೪.೯

ಇತರ ಸಮುದಾಯದವರು ನಿಮ್ಮೊಂದಿಗೆ ಹೊಂದಿರುವ ಭಾವನೆಯ ವಿವರ

ಕ್ರ.ಸಂ	ಇತರ ಸಮುದಾಯದವರು ನಿಮ್ಮೊಂದಿಗೆ ಹೊಂದಿರುವ ಭಾವನೆ	ಸಂಖ್ಯೆ	ಶೇಕಡಾ
೧	ಉತ್ತಮ	೩೪	೩೪
೨	ಕೀಳು	೫	೫
೩	ಕೆಲವರ ಬಗ್ಗೆ ಉತ್ತಮ	೨೦	೨೦
೪	ಗೊತ್ತಿಲ್ಲ	೪೧	೪೧
	ಒಟ್ಟು	**೧೦೦**	**೧೦೦**



ಇತರ ಸಮುದಾಯದವರು ನಿಮ್ಮೊಂದಿಗೆ ಹೊಂದಿರುವ ಭಾವನೆಗಳೇನು ಎಂಬ ಪ್ರಶ್ನೆಗೆ ಮಾಹಿತಿದಾರರಿಂದ ಆಸಕ್ತಿದಾಯಕ ಉತ್ತರಗಳು ಬಂದಿವೆ. ಶೇಕಡಾ ೩೪ ಮಂದಿ ಉತ್ತಮವಾಗಿದೆ ಎಂದು ಹೇಳಿದರೆ ಶೇಕಡಾ ೪ ಮಂದಿ ನಮ್ಮನ್ನು ಕೀಳಾಗಿ ನೋಡುತ್ತಾರೆ ಎಂಬ ಅಭಿಪ್ರಾಯಕೊಟ್ಟಿದ್ದಾರೆ. ಶೇಕಡಾ ೨೦ ಮಂದಿ ನಮ್ಮ ಸಮುದಾಯದ ಕೆಲವರನ್ನು ಮಾತ್ರ ಉತ್ತಮವಾಗಿ ನೋಡುತ್ತಾರೆ ಎಂಬ ಉತ್ತರ ನೀಡಿದ್ದಾರೆ. ಉಳಿದ ಶೇಕಡಾ ೪೧ ಮಂದಿ ಯಾವುದೇ ಉತ್ತರ ನೀಡಲು ನಿರಾಕರಿಸಿದರು. ಇದೊಂದು ಸೂಕ್ಷ್ಮ ಪ್ರಶ್ನೆ ಯಾದುದರಿಂದ ಬಹುತೇಕ ಮಂದಿ ತಟಸ್ಥರಾಗಿ ಉಳಿದರು. ಮಾತ್ರವಲ್ಲದೆ ಜಾತಿ ಆಧಾರಿತ ಒಲವು ಮತ್ತು ರಾಜಕೀಯದ ಬಗ್ಗೆ ಅಧ್ಯಯನ ಕ್ಷೇತ್ರದಲ್ಲಿ ಅತೃಪ್ತಿ ಭಾವನೆ ವ್ಯಕ್ತವಾಗುತ್ತದೆ. ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮತ್ತು ನಗರ ಸಭೆಗಳಲ್ಲಿ ಜಾತಿ ತಾರತಮ್ಯವಿಲ್ಲ. ಆದರೆ ರಾಜಕೀಯ ಪಕ್ಷ ಭೇದಗಳು ತೀವ್ರವಾಗಿದೆ ಎನ್ನುತ್ತಾರೆ ಮಾಹಿತಿದಾರರು.

ಉಲ್ಲೇಖಗಳು:

೧. ಇಂದಿರಾ ಆರ್.,**" ಮಹಿಳೆ, ಸಮಾಜ ಮತ್ತು ಸಂಸ್ಕೃತಿ"**, ಪ್ರಸರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨. ಉಚ್ಚಿಲ ಎಸ್.ಕೆ ೨೦೧೩, **"ಎ ಸ್ಟಡಿ ಆಫ್ ಮೊಗವೀರ ಕಮ್ಯೂನಿಟಿ",**

೩. ಉದಯಕುಮಾರ್ ಹಟ್ಟಿಯಂಗಡಿ, (ಸಂ), ೨೦೦೮, **"ಮೊಗವೀರ ಸಿಂಚನ"**

೪. ಗುರುರಾಜ ಭಟ್,ಪಿ. ೨೦೦೯, **"ತುಳುನಾಡು"**

೫. ದೇಜಪ್ಪ ದಲ್ಲೊಡಿ ಎಂ. ೨೦೧೨, **"ಬಿಲ್ಲವ ಸಾಂಸ್ಕೃತಿಕ ಸಂಪದ",**

೬. ವೆಂಕಟರಾಜ ಪುಣಿಚತ್ತಾಯ, ೧೯೯೩, **"ಮೊಗವೀರ ಸಂಸ್ಕೃತಿ".**

೭. ಶಶಿಕಲ, ೨೦೧೦, **"ಮೊಗವೀರ ಸಮುದಾಯದ ಮಹಿಳೆಯರ ಶೈಕ್ಷಣಿಕ ಸಾಧನೆಗಳ ನಿರ್ಧಾರಕಗಳು; ಒಂದು ಸಮಾಜಶಾಸ್ತ್ರೀಯ ಅಧ್ಯಯನ"**, ಮಂಗಳೂರು.

೮. ಸ್ವಾಮಿ ಬಿ.ಎಸ್.೨೦೦೯, **"ತುಳುನಾಡ ದರ್ಶನ"**

ಅಧ್ಯಾಯ-೫

ಅಧ್ಯಾಯ-೫

ಅಧ್ಯಯನದ ಫಲಿತಗಳು, ಉಪಸಂಹಾರ ಮತ್ತು ಮಹಿಳಾಸಬಲೀಕರಣಕ್ಕೆ ಸಲಹೆಗಳು

ಅಧ್ಯಯನದ ಫಲಿತಗಳು

ಈ ಅಧ್ಯಯನದಿಂದ ಕಂಡುಕೊಂಡ ಮುಖ್ಯ ಫಲಿತಗಳನ್ನು ನೀಡಲಾಗಿದೆ.ಈ ಹಿಂದೆ ಹೇಳಿರುವಂತೆ ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಮಾಹಿತಿದಾರರ ಸಾಮಾಜಿಕ-ಆರ್ಥಿಕ ಹಿನ್ನೆಲೆ ವಿಭಿನ್ನವಾಗಿದೆ. ಮಾಹಿತಿದಾರರ ಶಿಕ್ಷಣವನ್ನು ಗಮನಿಸಿದಾಗ ಮಹಿಳೆಯರು ಅಕ್ಷರದ ಜ್ಞಾನ ಹೊಂದಿರುವುದು ಕಂಡು ಬರುತ್ತದೆ. ಕ್ಷಿಪ್ರಪ್ರಗತಿಯಲ್ಲಿ ಬದಲಾವಣೆ ಹೊಂದುತ್ತಿರುವಂತಹ ಆಧುನಿಕ ಸಮಾಜದಲ್ಲಿ ಮೊಗವೀರ ಸಮುದಾಯದ ಮಹಿಳೆಯರು ತಮ್ಮ ಮನೋಭಾವನೆಯನ್ನು ಬದಲಿಸಿಕೊಳ್ಳಬೇಕಾಗಿದೆ.

ಹಿಂದೆ ಇದ್ದಂತಹ ಅವಿಭಕ್ತ ಕುಟುಂಬ ನಾನಾ ಪ್ರಭಾವಗಳಿದ ಅಂದರೆ ಆಧುನೀಕರಣ, ಪಾಶ್ಚಾತೀಕರಣ, ಉದ್ಯೋಗ ಈ ಮುಂತಾದ ಅಂಶಗಳಿಂದ ಬೇರೆ ಬೇರೆ ಕಡೆ ಹೋಗಿ ಕುಟುಂಬದ ಸದಸ್ಯರು ನೆಲೆಸಿದ ಕಾರಣ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಪರಿವರ್ತನೆ ಹೊಂದುತ್ತಿರುವುದು ಕಂಡು ಬಂದಿದೆ.

ಮಾಹಿತಿದಾರರ ಔದ್ಯೋಗಿಕ ಹಿನ್ನಲೆಯನ್ನು ಗಮನಿಸಿದಾಗ ಕುಟುಂಬದ ಹೆಚ್ಚಿನ ಸದಸ್ಯರು ತಮ್ಮ ಕುಲಕಸುಬುಗಳಲ್ಲಿ ತೊಡಗಿರುವುದು ಕಂಡು ಬರುತ್ತದೆ. ವಿದ್ಯಾವಂತರಾದ ಕೆಲವರು ವಿದ್ಯೆಗೆ ತಕ್ಕ ಉದ್ಯೋಗ ದೊರೆಯದ ಕಾರಣ ತಮ್ಮ ಜಾತಿ ವೃತ್ತಿಯಲ್ಲೆಯೇ ತೊಡಗಿದ್ದು ಕೆಲವು ನಿರುದ್ಯೋಗಿಗಳಾಗಿ ಅಲೆಯುತ್ತಿರುವುದು ಕಂಡು ಬರುತ್ತದೆ. ಆದರೂ ಇವರ ಜೀವನ ಶೈಲಿಯಲ್ಲಿ ಸಾಕಷ್ಟು ಬದಲಾವಣೆ ಆಗಿರುವುದು ಕಂಡು ಬಂದಿರುತ್ತದೆ. ಆದರೆ ನಿರೀಕ್ಷಿತ ಮಟ್ಟದಲ್ಲಿ ಮಹಿಳೆಯರ ಶಿಕ್ಷಣ ಪ್ರಮಾಣ ಕಂಡು ಬರುತ್ತಿದೆ.

ಮಾಹಿತಿದಾರರ ಮಕ್ಕಳ ಶಿಕ್ಷಣಕ್ಕೆ ಸಂಬಂಪಟ್ಟ ಹಾಗೆ ತಂದೆ-ತಾಯಿಯಂದಿರು ಉನ್ನತ ಶಿಕ್ಷಣ ಪಡೆಯದಿದ್ದರೂ ಕೂಡ ತಮ್ಮ ಮಕ್ಕಳು ಒಳ್ಳೆಯ ಶಿಕ್ಷಣ ಪಡೆಯಬೇಕು ಎಂಬ ನಿಟ್ಟಿನಲ್ಲಿ ಶ್ರಮಿಸುವುದು ಕಂಡು ಬರುತ್ತದೆ. ಇದರಿಂದ ತಿಳಿದು ಬರುವ ಫಲಿತವೆಂದರೆ ಮಾಹಿತಿದಾರರು ತಮ್ಮ ಮಕ್ಕಳ ಉತ್ತಮ ಭವಿಷ್ಯವನ್ನು ರೂಪಿಸಲು ಈಗಿನಿಂದಲೇ ಪ್ರಯತ್ನಿಸುವುದು ತಿಳಿದು ಬಂದಿದೆ ಹಾಗೂ ಸರಕಾರ ಕೊಡ ಮಾಡಲ್ಪಟ್ಟ ವಸತಿ ಹಾಗೂ ವಿದ್ಯಾರ್ಥಿ ವೇತನದ ಸೌಲಭ್ಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಮೊಗವೀರ ಸಂಸ್ಕೃತಿಯ ಬಗ್ಗೆ ಹೇಳುವುದಾದರೆ, ತಮ್ಮ ಸಮುದಾಯಕ್ಕೆ ಸಂಬಂಧಿಸಿದಂತೆ ತಮ್ಮದೇ ಆದ ರೀತಿಯಲ್ಲಿ ಸಂಸ್ಕೃತಿ ಹೊಂದಿದ್ದಾರೆ. ವಿವಾಹಕ್ಕೆ ಸಂಬಂಧಪಟ್ಟ ಹಾಗೆ ಕನ್ಯೆಯನ್ನು ಹಿರಿಯರೇ ನೋಡಿ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದಾರೆ. ಬಾಲ್ಯವಿವಾಹ ಪದ್ಧತಿ ಈ ಸಮುದಾಯದಲ್ಲಿ ಕಂಡು ಬರುವುದಿಲ್ಲ. ಇದೊಂದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ಒಟ್ಟಾರೆಯಾಗಿ ಈ ಅಧ್ಯಯನದಿಂದ ರೂಪಗೊಂಡ ಫಲಿತವೆಂದರೆ ಶಿಕ್ಷಣದ ಪ್ರಭಾವದಿಂದ ಮೊಗವೀರ ಸಮುದಾಯದ ಮಹಿಳೆಯರು ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಲ್ಲಿ, ಶಿಕ್ಷಣದ ಮಟ್ಟದಲ್ಲಿ, ಉದ್ಯೋಗದಲ್ಲಿ ತಮ್ಮ ಮಕ್ಕಳ ಶಿಕ್ಷಣ ಮಟ್ಟದಲ್ಲಿ, ಧಾರ್ಮಿಕ ಭಾವನೆಗಳಲ್ಲಿ, ಮೂಢನಂಬಿಕೆಗಳಲ್ಲಿ, ಉಡುಗೆ-ತೊಡುಗೆಗಳಲ್ಲಿ, ವಿವಾಹ ಪದ್ಧತಿ, ಸಂಪ್ರದಾಯಗಳಲ್ಲಿ ಗಣನೀಯ ಬದಲಾವಣೆ ಆಗಿದ್ದು, ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳು ಉತ್ತಮಗೊಂಡಿರುವುದು ಸ್ಪಷ್ಟವಾಗಿ ಕಂಡು ಬರುತ್ತವೆ.

ಸರಕಾರಿ ಉದ್ಯೋಗ ಪಡೆದ ಮೊಗವೀರರು ಪ್ರಥಮ ದರ್ಜೆ, ದ್ವಿತೀಯ ದರ್ಜೆ ಸಹಾಯಕರಾಗಿ ಯಾ ಶಿಕ್ಷಕಿಯರಾಗಿ ನೇಮಕಾತಿಯಾಗಿದ್ದಾರೆ. ಮೇಲ್ಮಟ್ಟದ ಹುದ್ದೆಗಳಲ್ಲಿ ಮೊಗವೀರ ಮಹಿಳೆಯರ ಸಂಖ್ಯೆ ಕಡಿಮೆ. ಆದಾಯದ ಕುರಿತಾದ ಆಸಕ್ತಿ ಎಲ್ಲಾ ಮಹಿಳೆಯಲ್ಲಿಯೂ ಇದ್ದರೂ ಸರಕಾರಿ ಕೆಲಸದ ಬೆನ್ನಟ್ಟಿದವರು ಕಡಿಮೆ. ಪಾಶ್ಚಾತ್ಯೀಕರಣದ ವಿವಿಧ ಮುಖಗಳಾದ ಉಡುಗೆ, ಭಾಷೆ, ಜೀವನ ಶೈಲಿ ಮತ್ತು ಸ್ಥಳೀಯ ಸಂಸ್ಕೃತಿಯ ಬಗ್ಗೆ ಮೊಗವೀರ ಮಹಿಳೆಯರಿಗಿರುವ ಧೋರಣೆ ವಿಭಿನ್ನವಾಗಿದೆ. ಆದರೆ ಮೊಗವೀರರಲ್ಲಿ ಪಾಶ್ಚಾತೀಕರಣಕ್ಕೆ ಒಲವು ತೋರುವ ಶಿಕ್ಷಿತ ಮಹಿಳೆಯರ ವಿರುದ್ಧ ಎಲ್ಲಾ ಮಾಹಿತಿದಾರರೂ ದನಿಯೆತ್ತಿದರು. ಮಹಿಳೆಯರು ಆಧುನಿಕ ಉಡುಗೆಯನ್ನು ಬಳಸುವುದರಿಂದ ಸ್ಥಳೀಯ ಮತ್ತು ಸಾಂಸ್ಕೃತಿಕ ಉಡುಗೆಗಳಿಂದ ನಾವು ದೂರವಾಗುತ್ತಿದ್ದೇವೆ ಎನ್ನುವುದು ಇನ್ನೊಂದು ಅಭಿಪ್ರಾಯ.ರಾಜಕೀಯವಾಗಿ ಮೊಗವೀರ ಮಹಿಳೆಯರು ಸಾಧನೆಗೈದಿರುವುದು ಬಹಳಷ್ಟು ಕಡಿಮೆ.

ಮೊಗವೀರರು ರಾಜಕೀಯ ಕಾರಣಗಳಿಗೋಸ್ಕರ ಕೆಲವರಲ್ಲಿ ಸಕಾರಾತ್ಮಕ ಸಂಬಂಧ ಇರಿಸಿದ್ದಾರೆ.ಮೊಗವೀರರು ಉಡುಪಿ ತಾಲೂಕಿನಲ್ಲಿರುವ ಎಲ್ಲ ಸಮುದಾಯದವರಿಗೂ ಬೇಕಾದ ಸಮುದಾಯದ ಜನರಾಗಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಯಾವುದೇ ಭಿನ್ನತೆಗಳಿಲ್ಲದೆ ಎಲ್ಲ ವರ್ಗದ ಮತ್ತು ಎಲ್ಲ ಜಾತಿಯ ಜನರೂ ಒಟ್ಟು ಸೇರುವುದು ಸಾಮಾನ್ಯವಾಗಿ ಅವಲೋಕಿಸಬಹುದಾಗಿದೆ. ಮೊಗವೀರರು ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಕಾಣಿಸಿಕೊಳ್ಳುತ್ತಾರೆ. ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮತ್ತು ನಗರ ಸಭೆಗಳಲ್ಲಿ ಜಾತಿ ತಾರತಮ್ಯವಿಲ್ಲ. ಆದರೆ ರಾಜಕೀಯ ಪಕ್ಷ ಭೇದಗಳು ತೀವ್ರವಾಗಿದೆ ಎನ್ನುತ್ತಾರೆ ಮಾಹಿತಿದಾರರು.

ಉಪಸಂಹಾರ

ಮೊಗವೀರರ ಸಾಮಾಜಿಕ ಪದರದಲ್ಲಿ ಕೆಲವೊಂದು ಬದಲಾವಣೆಗಳು ನಡೆಯುತ್ತಿದ್ದರೂ ಈ ಪದರದ ತಾತ್ವಿಕತೆಯು ಬದಲಾಗಲು ಸಾಧ್ಯವಿಲ್ಲ. ಸಮಾಜವು ಇನ್ನೂ ಜಾತೀಯ ಚೌಕಟ್ಟಿನಲ್ಲಿ ಬೆಸೆದುಕೊಂಡಿದೆ. ಈ ಸಾಮಾಜಿಕ ಪದರದೊಳಗೆ ವಿದ್ಯಾಭ್ಯಾಸ, ವೃತ್ತಿ ಮತ್ತು ಇನ್ನಿತರ ಬೆಳವಣಿಗೆಗಳು ಸೇರಿಕೊಳ್ಳುತ್ತಾ ಹೊಸತನವನ್ನು ಹೊಂದುತ್ತಿರುವ ಕ್ರಿಯೆಯು ಸರಾಗವಾಗಿ ನಡೆಯುತ್ತಲೇ ಇದೆ.

ಮೊಗವೀರರಲ್ಲಿ ಮೀಸಲಾತಿ ಕುರಿತು ಮಾಹಿತಿ ಇದ್ದು ,ನಿರ್ಲಕ್ಷಿದವರ ಸಂಖ್ಯೆ ಗುರುತರವಾದುದು. ಇದಕ್ಕೆ ಕಾರಣ ಅವರ ಆರ್ಥಿಕ ಸ್ಥಿತಿ ಮತ್ತು ಕೆಲವರ ರಾಜಕೀಯ ಪ್ರಾಬಲ್ಯತೆ. ಅನಕ್ಷರಸ್ಥ ಯಾ ಸಾಂಸ್ಕೃತಿಕ ಕೃಷಿ ಸಂಬಂಧಿ ಉದ್ಯೋಗ ಅವಲಂಬಿಸಿರುವ ಮೊಗವೀರರಲ್ಲಿ ಮೀಸಲಾತಿ ಅರಿವಿನ ಕೊರತೆ ಇದೆ. ಮೀಸಲಾತಿಯನ್ನು ಬಳಸಿಕೊಂಡಿರುವ ಕುಟುಂಬಗಳ ಆರ್ಥಿಕ ಸ್ಥಿತಿಗತಿಯನ್ನು ಅವಲೋಕಿಸಿದಾಗ ಈ ಎಲ್ಲ ಕುಟುಂಬಗಳು ಮಧ್ಯಮವರ್ಗ ಯಾ ಕೆಳವರ್ಗದಲ್ಲಿರುವುದು ಗೋಚರಿಸುತ್ತದೆ.

ವಿವಾಹ ಸಂದರ್ಭದಲ್ಲಿ ಶೇಕಡಾ ೯೨ ಮಂದಿ ಬಳಿ ಪದ್ಧತಿಯ ನಿರ್ಣಯವನ್ನು ಆಚರಿಸುತ್ತಾರೆ.ಕೇವಲ ಶೇಕಡಾ ೮ ಮಂದಿ ಇದಕ್ಕೆ ಆರೋಪವೆಸಿಸುತ್ತಾರೆ.ಕಾರಣ ಕೆಲವೊಮ್ಮೆ ಪ್ರೇಮ ವಿವಾಹ ಅಥವಾ ಮದುಗ-ಮದುಗಿಯ ಶೈಕ್ಷಣಿಕ ಹಾಗೂ ಔದ್ಯೋಗಿಕ ಮಟ್ಟದಲ್ಲಿ ಸಮಾನತೆ ಬಂದಾಗ ಇವುಗಳನ್ನು ಗೌಣವಾಗಿರುವುದು

ಇತ್ತೀಚೀನ ವಾಡಿಕೆ. ವಿವಾಹವಾದವರಲ್ಲಿ ಬಹುತೇಕ ಮಂದಿ ೨೫ ರಿಂದ ೩೫ ವರ್ಷ ಪ್ರಾಯದವರು.ಇತ್ತೀಚಿನ ದಿನಗಳಲ್ಲಿ ಉಳಿದ ಸಮುದಾಯಗಳಂತೆ ಮೊಗವೀರರಲ್ಲೂ ವಿಧವಾ ಪುನರ್ ವಿವಾಹಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಪ್ರಾಯಶ: ಇದೊಂದು ಮಹಿಳಾ ಸಬಲೀಕರಣದ ಸಂಕೇತ. ಮಹಿಳೆಯರಲ್ಲಿ ಶಿಕ್ಷಣದ ಮಟ್ಟ ಏರುತ್ತಿದ್ದರೂ ಸರಕಾರಿ ಉದ್ಯೋಗಗಳತ್ತ ಒಲವು ತೋರಿಸುವವರ ಸಂಖ್ಯೆ ಕಡಿಮೆ. ಮಹಿಳಾ ಸಬಲೀಕರಣಕ್ಕೆ ಮಹಿಳಾ ಸಂಘಟನೆಗಳು ಸಾಕಷ್ಟು ಕೆಲಸ ಮಾಡಿವೆ. ಮಹಿಳಾ ಮಂಡಲಗಳು ಭಜನಾ ಮಂದಿರದ ನೇತೃತ್ವದ ಮಹಿಳಾ ಮಂಡಲಗಳಾಗಿದ್ದು ಅವುಗಳಲ್ಲಿ ಸದಸ್ಯತ್ವ ಸರ್ವೇ ಸಾಮಾನ್ಯವಾಗಿದೆ. ಸ್ವಸಹಾಯ ಸಂಘಗಳು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣಕ್ಕೆ ಅಧ್ಯಯನ ಪ್ರದೇಶದಲ್ಲಿ ಸಹಕರಿಸಿವೆ.

ಮೊಗವೀರರು ತಮ್ಮದೇ ಆದ ಆರ್ಥಿಕ ಕಾರಣಗಳಿಗೆ ಸಾಲ ಪಡೆಯುತ್ತಾರೆ.ಸಾಲ ಪಡೆಯಲು ಬಡತನ ಒಂದೇ ಕಾರಣ ಎನ್ನಲಾಗುವುದಿಲ್ಲ. ಸರಕಾರದ ಸಬ್ಸಿಡಿ ಯೋಜನೆಯಡಿಯಲ್ಲಿ ಸಿಗುವ ಸಾಲಗಳನ್ನು ಹತ್ತಾರು ಮಂದಿ ಬಳಸಿಕೊಂಡವರಿದ್ದಾರೆ. ಜೊತೆಗೆ ಸ್ವಸಹಾಯ ಸಂಘಗಳ ಮುಂಗಡವನ್ನು ಪಡೆದವರ ಸಂಖ್ಯೆ ಗುರುತರವಾಗಿದೆ. ಮೀನು ಮಾರಾಟದ ಅಭಿವೃದ್ಧಿ ಮಾತ್ರವಲ್ಲದೆ ಕೌಟುಂಬಿಕ ಕಾರಣಗಳಿಗೂ ಸಾಲ ಪಡೆದವರಿದ್ದಾರೆ. ಮೊಗವೀರರು ವಿವಿಧ ಕಾಮಗಾರಿಗಳಲ್ಲಿ ಶ್ರಮಿಕರಾಗಿಯೂ ಇನ್ನು ಕೆಲವರು ಶ್ರೀಮಂತರ ಆಳುಗಳಾಗಿಯೂ ದುಡಿಯುತ್ತಿರುವರು. ಮತ್ತೆ ಕೆಲವರು ಹೊಲಿಗೆ, ಕಸೂತಿ ಇತ್ಯಾದಿಗಳಿಂದ ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಂಡು ಜೀವನ ನಡೆಸುತ್ತಿರುವ ವಿಚಾರ ಕಂಡು ಬಂದಿದೆ. ಅತೀ ಕಡಿಮೆ ಜನ ಮಾತ್ರ ಸಂಪ್ರದಾಯಬದ್ಧವಾದ ಕುಲಕಸುಬಿನಿಂದ ನಿರ್ವಹಣೆ ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಕೆಲವೇ ಮಂದಿ ಮೊಗವೀರರು ಸಾರ್ವಜನಿಕ ವಲಯಗಳಲ್ಲಿ ದುಡಿಯುತ್ತಿದ್ದಾರೆ.

ಅಧ್ಯಾಯನದ ಸಾರಾಂಶ:

ಪ್ರಸ್ತುತ ಅಧ್ಯಯನವು ಮೊಗವೀರ ಸಮುದಾಯದ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತ್ಯಂತರಗಳನ್ನು ಆಧರಿಸಿದೆ. ಉಡುಪಿ ಜಿಲ್ಲೆಯಲ್ಲಿ ಮೊಗವೀರರು ಮೀನುಗಾರಿಕೆ ಮತ್ತು ಕೃಷಿ ಹೊರತುಪಡಿಸಿ ಇತರ ಕೆಲಸಗಳಿಂದಲೂ ಗಳಿಕೆ ಮಾಡುತ್ತಾರೆಂಬುದು ಸಮೀಕ್ಷೆಯಿಂದ ತಿಳಿದುಬರುತ್ತದೆ. ವಾರದ ಸಂತೆಯಲ್ಲಿ ಪೇಟೆಗಳಿಂದ ವಸ್ತುಗಳನ್ನು ಕೊಳ್ಳುವ ಹಾಗೂ ಮಾರುವ ಕೆಲಸವನ್ನು ಮಾಡುವವರಿದ್ದಾರೆ. ಹಳ್ಳಿ ಹಾಗೂ ಪಟ್ಟಣಗಳ ಮಧ್ಯೆ ವಸ್ತು ಹಾಗೂ ದುಡಿಮೆಯ ವಿನಿಮಯ ಆಗುತ್ತಿರುತ್ತದೆ. ಹಳ್ಳಿಗರಿಗೆ ಹಲವಾರು ಇತರ ಕೆಲಸಗಳು ಒಂದಿಷ್ಟು ಸಂಪಾದನೆಗೆ ದಾರಿಮಾಡಿಕೊಡುತ್ತವೆ. ಹೀಗೆ ವ್ಯಾಪಾರ ಮತ್ತು ಇತರ ಕೆಲವೊಂದು ಕೆಲಸಗಳಿಂದ ಹೆಚ್ಚಿನ ಗಳಿಕೆಯನ್ನು ಸಂಪಾದಿಸುತ್ತಾರೆ.

ಮೊಗವೀರರಲ್ಲಿ ಸರ್ಕಾರಿ ಮೀಸಲಾತಿಯನ್ನು ಬಳಸಿಕೊಂಡವರ ಸಂಖ್ಯೆ ತೀರ ವಿರಳ. ಎಲ್ಲ ರಂಗಗಳೂ ಸೇರಿದಂತೆ, ಸರಕಾರಿ ಮೀಸಲಾತಿಯನ್ನು ಉಪಯೋಗಿಸಿಕೊಂಡವರ ಸಂಖ್ಯೆ ಕೇವಲ ಶೇಕಡಾ ೩೫. ಗೊತ್ತಿದ್ದು, ಗೊತ್ತಿಲ್ಲದೆಯೋ ಮೀಸಲಾತಿಯನ್ನು ಬಳಸಿಕೊಳ್ಳದವರ ಸಂಖ್ಯೆ ಹೆಚ್ಚು. ಶಿಕ್ಷಣ ಮತ್ತು ರಾಜಕೀಯ ಅಭಿವೃದ್ಧಿಯ ಹೊರತಾಗಿಯೂ ಶೇಕಡಾ ೩೫ ಕುಟುಂಬಗಳಿಗೆ ಇಂದಿಗೂ ಮೀಸಲಾತಿಯ ಕುರಿತ ಅರಿವಿಲ್ಲ.ಕಾರಣ ಗ್ರಾಮಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಮತ್ತು ನಗರ ಸಭೆಯಲ್ಲಿ ಸದಸ್ಯರಾಗಿ ಅಥವಾ ಉದ್ಯೋಗಿಗಳಾಗಿ ಇರುವ ಮೊಗವೀರರು ತಮ್ಮ ಸಂಬಂಧ ಹಾಗೂ ಸಂಪರ್ಕ ಇರುವವರಿಗೆ ಈ ಕುರಿತ ಮಾಹಿತಿಯನ್ನು ರವಾನಿಸುತ್ತಿರುವುದು ಅಧ್ಯಯನದಿಂದ ಕಂಡು ಬಂದಿದೆ.ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಮೊಗವೀರ ಮಹಿಳೆಯರು ಮೀಸಲಾತಿಯನ್ನು ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಉಡುಪಿಯ ಪ್ರದೇಶದಲ್ಲಿ ಮೀಸಲಾತಿಯ ಅರಿವಿನ ಕೊರತೆ ಮತ್ತು ಆರ್ಥಿಕವಾಗಿ ಉನ್ನತ ಮಟ್ಟದಲ್ಲಿರುವ ಕುಟುಂಬಗಳು ಮೀಸಲಾತಿಯ ಬಗ್ಗೆ ಗಮನಹರಿಸದಿರುವುದು ಸ್ಪಷ್ಟವಾಗುತ್ತದೆ.

ಬಳಿಯ ಕುರಿತಾದ ಹಿಂದೂ ನಂಬಿಕೆಯಿರುವ ಮೊಗವೀರರಲ್ಲಿ ಒಂದೇ ಬಳಿಯ ಗಂಡು ಹೆಣ್ಣು ವಿವಾಹವಾದರೆ ಅಣ್ಣ ತಂಗಿ ವಿವಾಹವಾದಂತೆ ಎಂಬ ನಂಬಿಕೆ ಇದೆ.ಆದ್ದರಿಂದ ಸಾಮಾನ್ಯವಾಗಿ ಉಡುಪಿ ದಕ್ಷಿಣ ಕನ್ನಡದ ತುಳು ಸಮುದಾಯದಲ್ಲಿ ಈ ಪದ್ಧತಿಯನ್ನು ಚಾಚೂ ತಪ್ಪದೇ ಪಾಲಿಸುತ್ತಾರೆ.ಉಡುಪಿ ತಾಲೂಕಿನ ಮೊಗವೀರರಲ್ಲಿಯೂ ಶೇಕಡಾ ೯೨ ಮಂದಿ ವಿವಾಹ ಸಂದರ್ಭದಲ್ಲಿ ಬಳಿ ಪದ್ಧತಿಯ ನಿರ್ಣಯವನ್ನು ಆಚರಿಸುತ್ತಾರೆ. ಈ ಅಧ್ಯಯನದ ಪ್ರಕಾರ ಉಡುಪಿ ತಾಲೂಕಿನ ಮೊಗವೀರರಲ್ಲಿ ಶೇಕಡಾ ೧೫ ವಿಧವೆಯರಿಗೆ ಪುನರ್ ವಿವಾಹವಾಗಿದೆ. ಉಳಿದಂತೆ, ಶೇಕಡಾ ೮೫ ಮಂದಿ ವಿವಾಹವಾಗದೇ ಜೀವನ ಸಾಗಿಸುತ್ತಿದ್ದಾರೆ.

ಸರಕಾರಿ ಸವಲತ್ತುಗಳ ಕುರಿತಾದ ಮಾಹಿತಿಯನ್ನು ಗಳಿಸುವಲ್ಲಿ ಮೊಗವೀರರು ಆಸಕ್ತಿ ತೋರಿಸುವುದಿಲ್ಲ. ಅನಕ್ಷರಸ್ಥ ಮತ್ತು ಆರೋಗ್ಯವಂತ ಮಹಿಳೆಯರು ಮೀನಿನ ಉದ್ಯಮದಲ್ಲಿ ತೊಡಗಿಸಿಕೊಳ್ಳುವುದು ಉಡುಪಿ ತಾಲೂಕಿನಲ್ಲಿ ಕಂಡುಬರುತ್ತದೆ. ಮೀನು ಮಾರುಕಟ್ಟೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಈ ರೀತಿಯ ಸರಕಾರಿ ಸವಲತ್ತುಗಳ ಕುರಿತಾದ ಮಾಹಿತಿಯನ್ನು ಗಳಿಸುವಲ್ಲಿ ಆಸಕ್ತಿ ತೋರಿಸುವುದಿಲ್ಲ. ಅನಕ್ಷರಸ್ಥ ಮತ್ತು ಆರೋಗ್ಯವಂತ ಮಹಿಳೆಯರು ಮೀನಿನ ಉದ್ಯಮದಲ್ಲಿ ತೊಡಗಿಸಿಕೊಳ್ಳುವುದು ಉಡುಪಿ ತಾಲೂಕಿನಲ್ಲಿ ಕಂಡುಬರುತ್ತದೆ. ಶಿಕ್ಷಣ ಪಡೆದಿದ್ದರೂ ಮೊಗವೀರ ಯುವಕ ಯುವತಿಯರು ವ್ಯಾಪಾರದತ್ತ ಒಲವು ತೋರಿಸಿರುವುದು ಕಡಿಮೆ. ಮಲ್ಪೆ, ಉದ್ಯಾವರ, ಬೆಂಗ್ರೆ, ಇತ್ಯಾದಿ ಪ್ರದೇಶಗಳಲ್ಲೂ ಮೀನುಗಾರಿಕೆಯತ್ತ ಯುವ ಜನತೆಯನ್ನು ಆಕರ್ಷಿಸುವ ಅಂಶಗಳು ಹೆಚ್ಚಾಗಿವೆ. ಉನ್ನತ ಶಿಕ್ಷಣವು ಹುಡುಗಿಯರನ್ನು ಮನೆಕೆಲಸದಿಂದ ವಿಮುಖರನ್ನಾಗಿಸುವುದು. ಅಂದರೆ ವಿವಾಹಾನಂತರ ಗಂಡನ ಮನೆಯಲ್ಲಿ ಗಂಡ ಹಾಗೂ ಮಕ್ಕಳ ಲಾಲನೆ, ಪಾಲನೆ ಉನ್ನತ ಶಿಕ್ಷಣವು ಅಡ್ಡಿಪಡಿಸುವುದು. ಆದುದರಿಂದ ಅವರಿಗೆ ಶಿಕ್ಷಣಕ್ಕಿಂತ ಗೃಹಕೃತ್ಯದ ಅರಿವೇ ಮುಖ್ಯ ಎನ್ನುತ್ತಾರೆ.

ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆಯು ರಾಜಕೀಯದಲ್ಲಿ ತೊಡಗಿಸಿಕೊಳ್ಳುವುದನ್ನು ಗಮನಿಸಬಹುದಾಗಿದೆ. ಪ್ರತ್ಯಕ್ಷ ಮತ್ತು ಪರೋಕ್ಷ ರಾಜಕೀಯ ಪಾಲುಗಾರಿಕೆ ಮೊಗವೀರರಲ್ಲಿದೆ. ಸಮುದಾಯದ ಪುರುಷರು ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿಯೂ ಹಲವು ವರ್ಷಗಳಿಂದ ಆಡಳಿತ ನಡೆಸಿದ್ದು ಮಹಿಳೆಯರ ಪ್ರಾತಿನಿಧಿಕತೆ ಬಹಳಷ್ಟು ಕಡಿಮೆಯಿದೆ. ಸ್ವ ಸಹಾಯ ಸಂಘಗಳಲ್ಲಿ ಸದಸ್ಯತ್ವ ಹೆಚ್ಚಾಗಿದೆ.

ಜೀವನ ನಿರ್ವಹಣೆಗೆ ಮೀನುಗಾರಿಕೆ ಇದೆ ಎಂಬ ಭಾವನೆ ವಿದ್ಯೆಯನ್ನು ಪಡೆಯುವಲ್ಲಿ ಹಿಂದೇಟು ಹಾಕುವಂತೆ ಯುವಕರನ್ನು ಪ್ರೇರೇಪಿಸುವುದು. ದುಡಿದು ಗಳಿಸಿದ ಆದಾಯದಲ್ಲಿ ಉಳಿತಾಯ ಮಾಡಬೇಕೆಂಬ ಜ್ಞಾನದ ಕೊರತೆ ಬೇರೆ ಬೇರೆ ಉದ್ಯಮಗಳಲ್ಲಿ ತೊಡಗದಂತೆ ಮಾಡಿದೆ. ಸರಕಾರಿ ಉದ್ಯೋಗ ಪಡೆದವರು ಪ್ರಥಮ ದರ್ಜೆ, ದ್ವಿತೀಯ ದರ್ಜೆ ಸಹಾಯಕಿಯರಾಗಿ ಯಾ ಶಿಕ್ಷಕಿಯರಾಗಿ ನೇಮಕಾತಿಯಾಗಿದ್ದಾರೆ. ಮೇಲ್ಮಟ್ಟದ ಹುದ್ದೆಗಳಲ್ಲಿ ಮೊಗವೀರ ಮಹಿಳೆಯರ ಸಂಖ್ಯೆ ಕಡಿಮೆ. ಆದಾಯದ ಕುರಿತಾದ ಆಸಕ್ತಿ ಎಲ್ಲಾ ಮಹಿಳೆಯಲ್ಲಿಯೂ ಇದ್ದರೂ ಸರಕಾರಿ ಕೆಲಸದ ಬೆನ್ನಟ್ಟಿದವರು ಕಡಿಮೆ.

ಸ್ವಸಹಾಯ ಸಂಘಗಳಲ್ಲಿ ಕೆಲವೇ ಮಂದಿ ಸದಸ್ಯರಾಗಿದ್ದು ಶೇಕಡಾ ೨೦ ಮಂದಿಗೆ ಕೌಟುಂಬಿಕ ಹಾಗೂ ವೈಯಕ್ತಿಕ ಒತ್ತಡಗಳಿಂದಾಗಿ ಇಷ್ಟವಿದ್ದರೂ ಸದಸ್ಯರಾಗುವುದು ಕಷ್ಟವಾಗಿದೆ. ಸ್ವಸಹಾಯ ಸಂಘಗಳು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣಕ್ಕೆ ಅಧ್ಯಯನ ಪ್ರದೇಶದಲ್ಲಿ ಸಹಕರಿಸಿವೆ. ಸರಕಾರದ ಸಬ್ಸಿಡಿ ಯೋಜನೆಯಡಿಯಲ್ಲಿ ಸಿಗುವ ಸಾಲಗಳನ್ನು ಹತ್ತಾರು ಮಂದಿ ಬಳಸಿಕೊಂಡವರಿದ್ದಾರೆ. ಜೊತೆಗೆ ಸ್ವಸಹಾಯ ಸಂಘಗಳ ಮುಂಗಡವನ್ನು ಪಡೆದವರ ಸಂಖ್ಯೆ ಗುರುತರವಾಗಿದೆ.

ಮೊಗವೀರರ ವಿವಾಹ ಪದ್ಧತಿಯನ್ನು ಗಮನಿಸಿದಾಗ ವಿಧಿ ವಿಧಾನಗಳಿಂದ ನಡೆಯುವ ವಿವಾಹ ಪದ್ಧತಿಯು ಕಾಲ ಕಳೆದಂತೆ ಬದಲಾವಣೆ ಆಗಿ ಸರಳ ರೀತಿಯಾದ ವಿವಾಹ ಪದ್ಧತಿಯು ಜಾರಿಯಲ್ಲಿರುವುದು ಕಂಡು ಬರುತ್ತದೆ. ವಿವಾಹಕ್ಕೆ ಸಂಬಂಧಪಟ್ಟ ಹಾಗೆ ವಧು-ವರರನ್ನು ಕುಟುಂಬದ ಹಿರಿಯರೇ ಆಯ್ಕೆ

ಮಾಡುತ್ತಿದ್ದರು.ಅಂತರ್‌ಜಾತಿ, ಅಂತರ್ ಧರ್ಮೀಯ ವಿವಾಹಗಳಿಗೆ ಊರಿನ ಹಿರಿಯ ಮುಖಂಡರು ಎನಿಸಿಕೊಂಡವರು ಹಾಜರಾಗುತ್ತಿರಲಿಲ್ಲ. ಊರಿನ ಹಿರಿಯರ ಅನುಪಸ್ಥಿತಿಯಲ್ಲಿ ಯಾವುದೇ ರೀತಿಯಾದ ಸಂಸ್ಕಾರಗಳು ನಡೆಯುತ್ತಿರಲಿಲ್ಲ.

ಪಾಶ್ಚಾತ್ಯೀಕರಣವು ಮೊಗವೀರರನ್ನು ಆಕರ್ಷಿಸಿದ್ದು ಪಾಶ್ಚಾತ್ಯೀಕರಣದ ವಿವಿಧ ಮುಖಗಳಾದ ಉಡುಗೆ, ಭಾಷೆ, ಜೀವನ ಶೈಲಿ ಮತ್ತು ಸ್ಥಳೀಯ ಸಂಸ್ಕೃತಿಯ ಬಗ್ಗೆ ಮೊಗವೀರ ಮಹಿಳೆಯರಿಗಿರುವ ಧೋರಣೆ ವಿಭಿನ್ನವಾಗಿದೆ. ಆಧುನೀಕರಣದ ಮುಖವಾಗಿ ಯುವ ಜನರು ಇಂಟರ್‌ನೆಟ್, ಫೇಸ್‌ಬುಕ್, ವಾಟ್ಸ್‌ಅಫ್ ಇತ್ಯಾದಿಗಳನ್ನು ಉಪಯೋಗಿಸುವುದರಿಂದ ಸ್ಥಳೀಯ ಸಂಸ್ಕೃತಿಯಿಂದ ಅವರು ದೂರವಾಗುವಂತೆ ಮಾಡಿದೆ. ಆದುದರಿಂದ ಆಧುನೀಕರಣವೂ ಪಾಶ್ಚಾತ್ಯೀಕರಣದಷ್ಟೇ ತೀವ್ರವಾದ ಶಾಪವೆನ್ನುತ್ತಾರೆ ಮಾಹಿತಿದಾರರು. ಬಹುಶ: ಉಡುಪಿ ತಾಲೂಕಿನಲ್ಲಿ ಜಾತಿಯ ಪ್ರಜ್ಞೆ ಹೆಚ್ಚಾಗಿದ್ದು, ಸಸ್ಯಹಾರಿ-ಮಾಂಸಹಾರಿ ಅಂತರ ಕಂಡುಬರುತ್ತದೆ. ಅಲ್ಲದೇ ಬ್ರಾಹ್ಮಣರು ಇಲ್ಲಿನ ಶೂದ್ರರನ್ನು ಹತ್ತಿರ ಸೇರಿಸಿಕೊಳ್ಳುವುದು ಎಂದರೆ ಮನೆಯೊಳಗೆ ಬೆರೆಸಿಕೊಳ್ಳುವುದು ಕಡಿಮೆ. ಇದರಿಂದಾಗಿ ಜಾತಿ ಪ್ರ ಜ್ಞೆ ಅಂತರ ಇತ್ಯಾದಿಗಳು ಕಾಣಿಸಿಕೊಳ್ಳುತ್ತವೆ.

ಸಲಹೆಗಳು

ಮೊಗವೀರ ಮಹಿಳೆಯರ ಕುರಿತಾದ ಈ ಅಧ್ಯಯನವು ಅತ್ಯಂತ ಸಣ್ಣ ವಿಷಯದ ಕುರಿತು ಆಳವಾದ ಮಾಹಿತಿ ನೀಡುವ ವರದಿಯಾಗಿದ್ದು ಮುಂದಿನ ಸಂಶೋಧನೆಗಳಿಗೆ ಸಾಕಷ್ಟು ಅವಕಾಶವಿದೆ. ಈ ಅಧ್ಯಯನದಲ್ಲಿ ಸಂಶೋಧಕಿ ಕಂಡುಕೊಂಡ ಕೆಲವು ಅಗತ್ಯ ಸಲಹೆಗಳನ್ನು ಈ ಕೆಳಗೆ ನೀಡಲಾಗಿದೆ.

- ❖ ಮೊಗವೀರ ಮೀನುಗಾರ ಮಹಿಳೆಯರಿಗೆ ಸಾಲ ಸೌಲಭ್ಯದ ಅವಶ್ಯಕತೆಯಿದೆ.
- ❖ ಮೊಗವೀರ ಸಮುದಾಯಕ್ಕೆ ಶೈಕ್ಷಣಿಕ ಮತ್ತು ಔದ್ಯೋಗಿಕ ರಂಗದಲ್ಲಿ ಈ ಹಿಂದೆ ನೀಡುತ್ತಿದ್ದ ಮೀಸಲಾತಿಯ ಅಗತ್ಯವಿದೆ.
- ❖ ಮೊಗವೀರ ಮೀನುಗಾರರಿಗೆ ಸಹಕಾರಿ ಕೃಷಿ ಸಾಲಗಳನ್ನು ಸಾಮಾನ್ಯ ಕೃಷಿಕರಿಗೆ ನೀಡುವ ಬಡ್ಡಿ ದರದಲ್ಲಿ ಎಂದರೆ ೩% ಯಾ ೪% ಬಡ್ಡಿಯಲ್ಲಿ ನೀಡುವ ಅಗತ್ಯವಿದೆ.
- ❖ ಮೀನುಗಾರ ಮಹಿಳೆಯರ ಮಕ್ಕಳಿಗೆ ಉಚಿತ ಶಿಕ್ಷಣದ ಅಗತ್ಯವಿದೆ.
- ❖ ಮೀನುಗಾರ ಮಹಿಳೆಯರಿಗೆ ಸಬ್ಸಿಡಿ ದರದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ನೀಡಬೇಕಾಗಿದೆ.
- ❖ ವಯೋಮಿತಿಯನ್ನು ನಿಗದಿ ಪಡಿಸಿ ಮೊಗವೀರ ಮೀನುಗಾರ ಮಹಿಳೆಯರಿಗೆ ಪಿಂಚಣಿ ಯೋಜನೆಯನ್ನು ಬೀಡಿ ಕಾರ್ಮಿಕರಂತೆಯೇ ನಿಗದಿ ಪಡಿಸುವ ಅವಶ್ಯಕತೆಯಿದೆ.
- ❖ ಮೀನು ಮಾರಾಟ ಮಾಡುವ ಮಹಿಳೆಯರಿಗೆ ಮಾರಟ ಸ್ಥಳದಲ್ಲಿ (ಮುಖ್ಯ ಮಾರುಕಟ್ಟೆಗಳನ್ನು ಹೊರತು ಪಡಿಸಿ) ವ್ಯವಸ್ಥಿತ ಮಾರುಕಟ್ಟೆ ಮತ್ತು ತ್ಯಾಜ್ಯ ವಿಲೇವಾರಿಗೆ ವ್ಯವಸ್ಥೆ ಮಾಡಬೇಕಾಗಿದೆ.
- ❖ ಮಹಿಳಾ ಸ್ವಸಹಾಯ ಸಂಘಗಳ ಅಡಿಯಲ್ಲಿ ಮೀನುಗಾರ ಮಹಿಳಾ ಮಂಡಳಕ್ಕೆ ಉಳಿತಾಯ ಮತ್ತು ಸಾಲ ಸೌಲಭ್ಯದ ಅವಕಾಶ ಮಾಡಬೇಕಾಗಿದೆ.
- ❖ ಮೀನುಗಾರಿಕಾ ಮೊಗವೀರ ಮಹಿಳೆಯರನ್ನು ಇಎಸ್‌ಐ ಸೌಲಭ್ಯದಡಿ ತರಬಹುದಾಗಿದೆ.
- ❖ ಮೀನುಗಾರಿಕೆಯನ್ನು ಸ್ವದೇಶಿ ಉದ್ಯಮವಾಗಿ ಪರಿಗಣಿಸಿ ಹೊರದೇಶಗಳಿಗೆ ರಫ್ತಾಗದಂತೆ ಎಚ್ಚರ ವಹಿಸುವ ಅಗತ್ಯವಿದೆ.
- ❖ ಸ್ಥಳೀಯ ಮೀನುಗಾರರಿಗೆ (ಲೋಕಲ್ ಬೋಟಿಂಗ್) ಮಾಡುವ ಮೀನುಗಾರರಿಗೆ ಪ್ಯಾಕೇಜ್ (ಸವಲತ್ತುಗಳನ್ನು) ನೀಡಬೇಕಿದೆ.

- ಮೀನುಗಾರರ ಮಹಿಳಾ ಮಂಡಲದ ಬೇಡಿಕೆಗಳನ್ನು ಸಮಯದಿಂದ ಸಮಯಕ್ಕೆ ಸರಕಾರ ಪರಿಗಣಿಸಬೇಕಾಗಿದೆ.
- ತಾಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಮೀನುಗಾರ ಸಂಘಟನೆಗಳ ಅಗತ್ಯವಿದೆ.
- ವಿಧವಾ ಮೀನು ಮಾರಾಟಗಾರರಿಗೆ ಮತ್ತು ಮಕ್ಕಳಿಲ್ಲದವರಿಗೆ ವಿಶೇಷ ಸವಲತ್ತುಗಳನ್ನು ನೀಡುವ ಅಗತ್ಯವಿದೆ.
- ಮೀನುಗಾರಿಕಾ ಮಹಿಳೆಯರ ಕುರಿತಾದ ಆಳವಾದ ಮತ್ತು ವ್ಯವಸ್ಥಿತ ಅಧ್ಯಯನಗಳು ನಡೆಯಬೇಕಿದೆ.
- ಉಡುಪಿ ಜಿಲ್ಲಾ ಮಹಿಳೆಯರ ಕುರಿತಾದ ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳ ದತ್ತಾಂಶ ಸಹಿತ ದಾಖಲೀಕರಣ ಇಂದಿನ ಅಗತ್ಯ.

ಮಲ್ಪೆ ಮೀನುಗಾರಿಕಾ ಬಂದರಿನ ಪ್ರವೇಶ ದ್ವಾರ



ಮಲ್ಪೆ ಮೀನುಗಾರ ಮಹಿಳೆಯರ ಸಹಕಾರಿ ಸಂಘ (ರಿ)




ಮೀನುಗಳನ್ನು ಬೋಟಿನಿಂದ ತೆಗೆಯುವ ಪ್ರಕ್ರಿಯೆ



ಮಲ್ಪೆ ಬಂದರಿನಲ್ಲಿ ಮೀನುಗಳ ಮಾರಾಟ







ಮೀನುಗಳನ್ನು ಒಣಗಿಸುವ ಪ್ರಕ್ರಿಯೆ



ಉಡುಪಿ ಮೀನು ಮಾರುಕಟ್ಟೆ



ಮಲ್ಪೆ ಬಂದರಿನಲ್ಲಿ ಮೀನು ಮಾರಾಟ



ಉಡುಪಿ ವಿಧಾನ ಸಭಾ ಕ್ಷೇತ್ರದ ಶಾಸಕರಿಂದ ಮೀನುಗಾರಿಕಾ ಬಾಕ್ಸ್‌ಗಳ ವಿತರಣೆ



ಮಲ್ಪೆ ಬಂದರಿನಲ್ಲಿ ಮೀನಗಳ ವಿಲೇವಾರಿ



ಉಡುಪಿ ವಿಧಾನ ಸಭಾ ಶಾಸಕರಿಂದ ಮೀನುಗಾರ ಮಹಿಳೆಯರಿಗೆ ಚೆಕ್‌ಗಳ ವಿತರಣೆ



ಉಡುಪಿ ತಾಲೂಕಿನ ಮೊಗವೀರ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಯ ಒಂದು ಅಧ್ಯಯನ

೧. ಹೆಸರು:

೨. ವಯಸ್ಸು: ೧. ೨೦-೩೦ ೨. ೩೧-೪೦ ೩. ೪೧-೫೦ ೪. ೫೧-೬೦

೩. ಶಿಕ್ಷಣ: ೧. ಅನಕ್ಷರಸ್ಥರು ೨. ಪ್ರಾಥಮಿಕ ೩. ಪ್ರೌಢಶಾಲೆ/ಎಸ್/ಎಲ್.ಸಿ ೪. ಪಿ.ಯು.ಸಿ ೫.ಡಿಗ್ರಿ ೬. ಉನ್ನತ ಶಿಕ್ಷಣ

೪. ಕುಟುಂಬದ ವಿವರ: ೧. ಅವಿಭಕ್ತ ಕುಟುಂಬ ೨. ವಿಭಕ್ತ ಕುಟುಂಬ

ಹೆಸರು	ವಯಸ್ಸು	ಮಾಹಿತಿದಾರ ನೊಂದಿಗೆ ಸಂಬಂಧ	ಶಿಕ್ಷಣ	ಉದ್ಯೋಗ	ಮಾಸಿಕ ಆದಾಯ	ಷರಾ

೫. ನಿಮ್ಮ ಆರಾದ್ಯ ದೈವ ಯಾವುದು?

೬. ನಿಮ್ಮ ಜಾತಿ ಸಮುದಾಯದಲ್ಲಿ ಕುಲದೇವರು ಎಂಬ ಕಲ್ಪನೆ ಇದೆಯೇ?
೧. ಹೌದು ೨.ಇಲ್ಲ

೭. ಹೌದಾದರೆ ನಿಮ್ಮ ಕುಲ ದೇವರು ಯಾರು?

೮. ಜಾತಿ ಮೀಸಲಾತಿಯ ಕುರಿತು ನಿಮಗೆ ಅರಿವಿದೆಯೇ? ೧.ಹೌದು ೨.ಇಲ್ಲ

೯. ಈವರೆಗೆ ನೀವು ಯಾವುದೇ ರೀತಿಯ ಮೀಸಲಾತಿ ಬಳಸಿಕೊಂಡಿದ್ದೀರಾ?
೧. ಹೌದು ೨.ಇಲ್ಲ

೧೦ . ಹೌದಾದರೆ ನೀವು ಯಾವ ರಂಗದಲ್ಲಿ?೧.ಶಿಕ್ಷಣ ೨. ಉದ್ಯೋಗ ೩.ರಾಜಕೀಯ

೧೧.ವೈವಾಹಿಕ ವಿವರ : ೧.ವಿವಾಹಿತೆ ೨.ಅವಿವಾಹಿತೆ ೩.ವಿಧವೆ

೧೨. ನೀವು ನಿಮ್ಮ ವಿವಾಹದಲ್ಲಿ ಯಾವುದೇ ರೀತಿಯ ವರದಕ್ಷಿಣೆ ನೀಡಿರುತ್ತೀರಾ?
೧.ಹೌದು ೨.ಇಲ್ಲ

೧೩. ಹೌದಾದರೆ ಯಾವ ರೂಪದಲ್ಲಿ? ೧.ಹಣ ೨.ಜಮೀನು ೩.ವಾಹನ ೪.ಇತರೆ
೫.ಅನ್ವಯಿಸುವುದಿಲ್ಲ

೧೪. ಯಾವ ರೀತಿಯಾದ ವಿವಾಹ ಆಗಿದ್ದೀರಿ? ೧.ಪ್ರೇಮ ವಿವಾಹ ೨.ಅಂತರ್‌ಜಾತಿ ವಿವಾಹ
೩. ಹಿರಿಯರು ವ್ಯವಸ್ಥೆ ಮಾಡಿದ ವಿವಾಹ

೧೫. ನಿಮ್ಮ ಸಮುದಾಯದಲ್ಲಿ ವಿಧವಾ ವಿವಾಹ ನಡೆಯುತ್ತದೆಯೇ? ೧.ಹೌದು ೨.ಇಲ್ಲ

೧೬. ವಿಧವಾ ವಿವಾಹಕ್ಕೆ ನಿಮ್ಮ ಸಮುದಾಯದಲ್ಲಿ ಯಾವ ರೀತಿಯಾಗಿ ಪ್ರತಿಕ್ರಿಯಿಸುತ್ತಾರೆ?
೧.ಸಮ್ಮತಿ ಇದೆ ೨.ಸಮ್ಮತಿ ಇಲ್ಲ

೧೭. ಬಳಿ ಅಥವಾ ಬರಿಯನ್ನು ಆಧಾರವಾಗಿಟ್ಟುಕೊಂಡು ವಿವಾಹ ಆಗುತ್ತೀರಾ?
೧.ಹೌದು ೨.ಇಲ್ಲ

೧೮. ನಿಮ್ಮ ಮಕ್ಕಳ ವಿವಾಹದಲ್ಲಿ ಯಾವ ಅಂಶವನ್ನು ಮುಂದಿಟ್ಟುಕೊಂಡು ವಿವಾಹ ಮಾಡಲು ಬಯಸುತ್ತೀರಿ? ೧.ವೃತ್ತಿ ೨.ವಿದ್ಯಾರ್ಹತೆ ೩.ಜಾತಿ/ಬರಿ/ ದೈಹಿಕ ಮಟ್ಟದ ಆಧಾರದಲ್ಲಿ
೪. ಇತರೆ

೧೯. ನಿಮಗೆ ಸರಕಾರಿ ಸವಲತ್ತುಗಳ ಅರಿವು ಇದೆಯೇ? ೧. ಹೌದು೨. ಇಲ್ಲ

೨೦ ಹೌದಾದರೆ ತಿಳಿದುಕೊಂಡಿರುವುದು ಹೇಗೆ?
೧.ಮನೆಯವರಿಂದ೨.ಪಂಚಾಯತ್‌ಸದಸ್ಯರಿಂದ
೩.ಸ್ಥಳೀಯ ನಾಯಕರಿಂದ ೪.ಇತರ ಮೂಲಗಳಿಂದ

೨೧. ಈವರೆಗೆ ಯಾವುದಾದರು ಸವಲತ್ತುಗಳನ್ನು ಬಳಸಿಕೊಂಡಿದ್ದಿರಾ? ೧.ಹೌದು ೨.ಇಲ್ಲ

೨೨. ಹೌದದರೆ ಬಳಸಿಕೊಂಡ ಸವಲತ್ತುಗಳ ಬಗ್ಗೆ ವಿವರ.

೨೩. ಸ್ಥಳೀಯ ಆಡಳಿತದಲ್ಲಿ ಭಾಗವಹಿಸಿದ್ದಿರಾ? ೧.ಹೌದು ೨.ಇಲ್ಲ

೨೪. ಭಾಗವಹಿಸಿದ್ದರೆ ವಿವರ ಕೊಡಿ.೧.ಗ್ರಾಮ ಪಂಚಾಯತ್ ೨.ತಾಲೂಕು ಪಂಚಾಯತ್
೩. ಜಿಲ್ಲಾ ಪಂಚಾಯತ್

೨೫. ಮಹಿಳಾ ಮಂಡಲಗಳಲ್ಲಿ ನಿಮ್ಮ ಸದಸ್ಯತ್ವ ಇದೆಯೇ?೧.ಹೌದು ೨.ಇಲ್ಲ

ಶಿಕ್ಷಣಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಗಳು:

೨೬. ನಿಮ್ಮ ಸಾಮಾಜಿಕ ಜೀವನದ ಮೇಲೆ ಶಿಕ್ಷಣ ಪ್ರಭಾವ ಬೀರಿದೆಯೇ? ೧.ಹೌದು ೨.ಇಲ್ಲ

೨೭. ನಿಮ್ಮ ಹಿರಿಯ ತಲೆಮಾರಿನವರು ಸ್ತ್ರೀಯರಿಗೆ ವಿದ್ಯಾಭ್ಯಾಸ ಕಲಿಯಲು ಅವಕಾಶ ನೀಡುತ್ತಿದ್ದರೇ?೧.ಹೌದು ೨.ಇಲ್ಲ

೨೮. ನೀವು ಸ್ತ್ರೀಯರಿಗೆ ಶಿಕ್ಷಣವನ್ನು ಪಡೆಯಲು ಅವಕಾಶ ನೀಡುತ್ತೀರಾ?೧.ಹೌದು ೨.ಇಲ್ಲ

೨೯. ನಿಮ್ಮ ಮನೆಯಲ್ಲಿ ಎಷ್ಟು ಜನ ಸ್ತ್ರೀಯರು ಸುಶಿಕ್ಷಿತರಾಗಿದ್ದಾರೆ?

೩೦. ನಿಮ್ಮ ಸಮುದಾಯದಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೈಕ್ಷಣಿಕ ಸಂಸ್ಥೆ ಇದೆಯೇ? ೧.ಹೌದು ೨.ಇಲ್ಲ

೩೧. ನಿಮ್ಮ ಮನೆಯಲ್ಲಿ ಸರಕಾರಿ ನೌಕರರು ಇದ್ದಾರೆಯೇ? ೧.ಹೌದು ೨.ಇಲ್ಲ

೩೨. ನಿಮ್ಮ ಮನೆಯಲ್ಲಿ ಮಹಿಳಾ ನೌಕರರು ಇದ್ದಾರೆಯೇ?.ಹೌದು ೨.ಇಲ್ಲ

೩೩. ನಿಮ್ಮ ಹೆತ್ತವರ ಕಾಲದಲ್ಲಿಯೂ ಮಹಿಳೆಯರು ನೌಕರಿ ಮಾಡುತ್ತಿದ್ದರೆ?೧.ಹೌದು ೨.ಇಲ್ಲ

೩೪. ನಿಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸಲು ಇಚ್ಚಿಸುತ್ತೀರಾ? ೧. ಹೌದು ೨.ಇಲ್ಲ

೩೫. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ದುಡಿಮೆಯ ಅವಶ್ಯಕತೆ ಉಂಟೇ?೧.ಹೌದು ೨.ಇಲ್ಲ

೩೬. ಶೈಕ್ಷಣಿಕ ಹಿಂದೆಗೆತ: ಪ್ರಾಥಮಿಕ ಹಂತ, ಪ್ರೌಢ ಹಂತ,ಪದವಿ ಹಂತ

೩೭. ಶೈಕ್ಷಣಿಕ ಹಿಂದೆಗೆತಕ್ಕೆ ಕಾರಣಗಳು : ಬಡತನ, ಮಕ್ಕಳಿಗೆ ಶಿಕ್ಷಣದ ಅನಾಸಕ್ತಿ, ಹೆತ್ತವರ ನಿರ್ಲಕ್ಷ, ಮಕ್ಕಳ ಶೈಕ್ಷಣಿಕ ವೈಫಲ್ಯ

೩೮.ಹೆತ್ತವರ ನಿರೀಕ್ಷೆ? ನೌಕರಿಗಾಗಿ, ಸಾಮಾಜಿಕ ಸಂಬಂಧ ಉತ್ತಮಗೊಳಿಸಲು, ಆದಾಯ ಹೆಚ್ಚಿಸಲು

೩೯. ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಅಗತ್ಯತೆ? ಎಸ್.ಎಸ್.ಎಲ್.ಸಿ., ಪ್ರೌಢ ಶಿಕ್ಷಣ, ಬಡತನ (ಶಿಕ್ಷಣವೆಂದರೆ ಖರ್ಚು), ಮನೆಕೆಲಸದಿಂದ ದೂರಾಗಿಸುವುದು.

ಆರ್ಥಿಕ ಅಂಶಗಳು:

೧. ಉದ್ಯೋಗ:

೨. ಕುಲಕಸುಬು:

೩. ಮಾಸಿಕ ಆದಾಯ:

೪. ಹೆತ್ತವರ ಉದ್ಯೋಗ:

೫. ಕುಟುಂಬದಲ್ಲಿ ಎಷ್ಟು ಜನ ಸದಸ್ಯರು ಈ ವೃತ್ತಿಯಲ್ಲಿ ತೊಡಗಿದ್ದಾರೆ?

೬. ಈ ವೃತ್ತಿಯಲ್ಲಿ ಏನಾದರೂ ಸಮಸ್ಯೆ ಎದುರಿಸುತ್ತಿದ್ದೀರಾ? ೧.ಹೌದು ೨.ಇಲ್ಲ

೭. ನಿಮ್ಮ ದೃಷ್ಟಿಯಲ್ಲಿ ಮೀನುಗಾರಿಕೆ ಲಾಭದಾಯಕ ವೃತ್ತಿಯೇ? ೧.ಹೌದು ೨.ಇಲ್ಲ

೮. ಮೀನುಗಾರಿಕೆ ನಿಂತು ಹೋದರೆ ಏನು ಮಾಡುತ್ತೀರಾ?

೯.ವೃತ್ತಿ ಮಾಡುವುದರ ಜೊತೆಗೆ ಮನೆಯನ್ನು ನಿಭಾಯಿಸುತ್ತೀರಾ?೧.ಹೌದು ೨.ಇಲ್ಲ

೧೦. ನಿಮ್ಮಲ್ಲಿ ಏನಾದರೂ ವೃತ್ತಿಗೆ ಸಂಬಂಧಪಟ್ಟಂತೆ ಸಂಘಟನೆ ಇದೆಯೇ? ೧.ಹೌದು ೨.ಇಲ್ಲ
೩.ಇದ್ದರೆ ಹೆಸರು

೧೧. ಮನೆಯ ಒಡೆತನ: ೧.ಸ್ವಂತ ೨. ಬಾಡಿಗೆ

೧೨. ಮನೆಯ ಪ್ರಕಾರ: ೧.ಗುಡಿಸಲು ೨.ಹೆಂಚು ೩.ಆರ್.ಸಿ.ಸಿ

೧೩. ನಿಮ್ಮ ಆದಾಯದಲ್ಲಿ ಉಳಿತಾಯ ಮಾಡುತ್ತಿರಾ? ೧.ಹೌದು ೨.ಇಲ್ಲ

೧೪. ಹೌದಾದರೆ ಎಲ್ಲಿ? ೧.ಬ್ಯಾಂಕ್ ೨.ಅಂಚೆ ಕಚೇರಿ
೩.ಸ್ವಸಹಾಯ ಸಂಘದ ನಿಧಿ ೪.ಇತರ

೧೫. ಸರಕಾರದಿಂದ ಏನಾದರೂ ಸಹಾಯ ಪಡೆಯಲು ಬಯಸುತ್ತೀರಾ?
೧.ಹೌದು ೨.ಇಲ್ಲ ೩.ಅಗತ್ಯವಿಲ್ಲ

೧೬. ನೀವು ಏನಾದರೂ ಸ್ವ ಉದ್ಯೋಗ ಮಾಡುತ್ತಿರಾ? ೧.ಹೌದು ೨.ಇಲ್ಲ

೧೭. ಹೌದಾದರೆ ಯಾವ ಪ್ರಕಾರದ್ದು ಉಲ್ಲೇಖಿಸಿ?

೧೮. ಯಾವುದಾದರೂ ಸ್ವಸಹಾಯ ಸಂಘಗಳಲ್ಲಿ ನಿಮ್ಮ ಸದಸ್ಯತ್ವ ಇದೆಯೇ?
೧. ಹೌದು ೨.ಇಲ್ಲ

೧೯. ನೀವು ಯಾವುದೇ ರೀತಿಯ ಸಾಲ ಪಡೆದಿರುವಿರಾ? ೧.ಹೌದು ೨.ಇಲ್ಲ

೨೦. ಪಡೆದಿದ್ದರೆ ಎಲ್ಲಿಂದ? ೧.ಬ್ಯಾಂಕ್ ೨.ಸಹಕಾರಿ ಸಂಘ ೩.ಸ್ವಸಹಾಯ ಸಂಘ ೪.ಫೈನಾನ್ಸ್ ೫.ಇತರೆ.

೨೧. ಸಾಲ ಪಡೆಯಲು ಕಾರಣ:

ಮಹಿಳೆಯರ ಸ್ಥಾನಮಾನ:

೧. ಮೊಗವೀರ ಸಮುದಾಯದಲ್ಲಿ ಮಹಿಳೆಯರ ಸ್ಥಾನಮಾನ ಯಾವ ಮಟ್ಟದಲ್ಲಿದೆ?
೧.ಪುರುಷರಿಗಿಂತ ಉನ್ನತ ಮಟ್ಟದಲ್ಲಿದೆ ೨.ಪುರಷರಷ್ಟೆ ಸಮಾನವಾಗಿದೆ ೩.ಪುರುಷರಿಗಿಂತ ಕೆಳಮಟ್ಟದಲ್ಲಿ ೪.ಇತರೆ ಮಟ್ಟದಲ್ಲಿದೆ

೨. ಕೌಟುಂಬಿಕ ವಿಚಾರದಲ್ಲಿ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮಹಿಳೆಗೆ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆಯೇ? ೧.ಹೌದು ೨.ಇಲ್ಲ

೩. ನಿಮ್ಮ ಅಭಿಪ್ರಾಯದಲ್ಲಿ ಮಹಿಳೆಯು ಆರ್ಥಿಕವಾಗಿ ಸ್ವತಂತ್ರವಾಗಿರಬೇಕೇ? ೧.ಹೌದು ೨.ಇಲ್ಲ

೪. ನಿಮ್ಮ ಕುಟುಂಬದಲ್ಲಿ ಮಹಿಳೆಯರಿಗೆ ಪಾಶ್ಚಾತೀಕರಣದ ಪ್ರಭಾವು ಅತಿಯಾದರೆ ನೀವು ಅದನ್ನು ವಿರೋಧಿಸುತ್ತೀರಾ ೧.ಹೌದು ೨.ಇಲ್ಲ

೫. ಆಧುನೀಕರಣವು ನಿಮ್ಮ ಕುಟುಂಬದ ಮಹಿಳೆಯರ ಮೇಲೆ ಪ್ರಭಾವ ಬೀರಿದೆಯಾ?೧.ಹೌದು ೨.ಇಲ್ಲ

೬. ಹೌದಾದರೆ ಹೇಗೆ?
೧. ಶೈಕ್ಷಣಿಕ ಸ್ಥಾನಮಾದಲ್ಲಿ ಅಭಿವೃದ್ಧಿ ೨. ಉಡುಗೆ ತೊಡುಗೆಯಲ್ಲಿ ಬದಲಾವಣೆ. ೩.ಸಮಾನ ಸ್ಥಾನಮಾನದ ಉದ್ದೇಶ ೪.ಮೇಲರಿಮೆ

೭. ರಾಜಕೀಯದಲ್ಲಿ ಭಾಗವಹಿಸಲು ಮಹಿಳೆಯರಿಗೆ ಮೊಗವೀರ ಸಮುದಾಯದಲ್ಲಿ ಏನಾದರೂ ವಿರೋಧಗಳಿವೆಯಾ? ೧.ಹೌದು ೨.ಇಲ್ಲ

ಇತರೆ ಪ್ರಶ್ನೆಗಳು :

1. ಸಂಪರ್ಕ ಮಾಧ್ಯಮದಿಂದ ನಿಮ್ಮ ಅಂತಸ್ತಿನಲ್ಲಿ ಬದಲಾವಣೆ ಆಗಿದೆಯಾ? ೧.ಹೌದು ೨.ಇಲ್ಲ

2. ಹೌದಾದರೆ ಯಾವ ಕ್ಷೇತ್ರದಲ್ಲಿ ಹೆಚ್ಚು ಬದಲಾವಣೆ ಆಗಿದೆ?
೧. ಆರ್ಥಿಕ ಸ್ಥಿತಿಗತಿಗಳಲ್ಲಿ ೨ ಜೀವನ ಮಾರ್ಗದಲ್ಲಿ ೩.ಭಾಷೆಯಲ್ಲಿ ೪.ಮೂಢನಂಬಿಕೆಯಲ್ಲಿ ೫.ಉಡುಗೆ ತೊಡುಗೆ

3. ಇತರೆ ಜಾತಿಯವರೊಂದಿಗೆ ನೀವು ಬೆರೆಯುತ್ತೀರಾ? ೧.ಹೌದು ೨.ಇಲ್ಲ

4. ಹೌದಾದರೆ ಎಂತಹ ಸಂದರ್ಭದಲ್ಲಿ? ೧. ದಿನನಿತ್ಯ ೨. ಯಾವಾಗಲಾದರೊಮ್ಮೆ ೩.ಸಂತೋಷ ಕೂಟಗಳಲ್ಲಿ ೪ .ದುಃಖದ ಸಮಯದಲ್ಲಿ.
5. ಇಲ್ಲವಾದರೆ ಯಾಕೆ? ೧.ಅವರು ನಿಮ್ಮೊಂದಿಗೆ ಹೊಂದಿರುವ ಕೀಳರಿಮೆ ೨.ಸಾಮಾಜಿಕ ಅಂತಸ್ತಿನ ದೃಷ್ಟಿಯಿಂದ ೩.ಇತರೆ ಕಾರಣಗಳಿಂದ.
6. ನೀವು ಇತರೆ ಜಾತಿಯವರ ಬಗ್ಗೆ ನಿಮ್ಮ ಭಾವನೆ ಏನು? ೧.ಉತ್ತಮ ಭಾವನೆ ೨.ಕೀಳು ಭಾವನೆ ೩.ಕೆಲವರ ಬಗ್ಗೆ ಉತ್ತಮ ಭಾವನೆ ಇದೆ ೪.ಗೊತ್ತಿಲ್ಲ
7. ಇತರ ಜಾತಿಯವರು ನಿಮ್ಮೊಂದಿಗೆ ಎಂತಹ ಭಾವನೆ ಹೊಂದಿದ್ದಾರೆ ?೧.ಉತ್ತಮ ಭಾವನೆ ೨.ಕೀಳು ಭಾವನೆ ೩.ಕೆಲವರ ಬಗ್ಗೆ ಉತ್ತಮ ಭಾವನೆ ಇದೆ ೪.ಗೊತ್ತಿಲ್ಲ.

****

ಪರಾಮರ್ಶನ ಗ್ರಂಥಗಳು:

೧. ಅಕ್ಷತಾ, ೨೦೧೦, " **ಎ ಸ್ಟಡಿ ಒನ್ ಸೋಶಿಯೋ ಎಕಾನಿಕ್ ಪ್ರೊಬ್ಲಮ್ಸ್ ಆಫ್ ಫಿಶ್ ವೆಂಡಿಂಗ್ ಮೊಗವೀರ ವುಮೆನ್ ಇನ್ ಉಡುಪಿ ತಾಲೂಕು**", ಎಂ.ಎಸ್.ಡಬ್ಲ್ಯೂ ಕೋರ್ಸಿನ ಮಂಗಳೂರು ವಿಶ್ವವಿದ್ಯಾನಿಲಯ ಸಲ್ಲಿಸಿದ ಸಂಶೋಧನಾ ವರದಿ.

೨. ಅರ್ಚನಾ, ೨೦೧೨,"**ಉಡುಪಿ ತಾಲೂಕಿನ ಮುಂಡಾಲ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯ ಒಂದು ಅಧ್ಯಯನ**", ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. (ಅಪ್ರಕಟಿತ ಪ್ರಬಂಧ).

೩. ಅನಿತಾ, ೨೦೧೧,"**ಎ ಸ್ಟಿ ಒನ್ ಸ್ಟೇಟಸ್ ಆಫ್ ಮೊಗವೀರ ಕಮ್ಯೂನಿಟಿ ಇನ್‌ವಾಲ್ವಿಂಗ್ ಇನ್ ಫಿಶಿಂಗ್ ಇನ್ ಮಲ್ಪೆ**",ಎಂ.ಎಸ್.ಡಬ್ಲ್ಯೂ ಕೋರ್ಸಿನ ಮಂಗಳೂರು ವಿಶ್ವವಿದ್ಯಾನಿಲಯ ಸಲ್ಲಿಸಿದ ಸಂಶೋಧನಾ ವರದಿ.

೪. ಅನೀಸ್ ಸಿರಾಜ್ ಎಸ್, "**ಉಡುಪಿ ಡಿಸ್ಟ್ರಿಕ್ಸ್**", ಕರ್ನಾಟಕ ಗಜೇಟಿಯರ್ ಡಿಪಾರ್ಟ್‌ಮೆಂಟ್, ಬೆಂಗಳೂರು.

೫. ಇಂದಿರಾ ಆರ್, "**ಮಹಿಳೆ, ಸಮಾಜ ಮತ್ತು ಸಂಸ್ಕೃತಿ**",ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೬. ಉಚ್ಚಿಲ, ಎಸ್.ಕೆ. ೨೦೧೩, "**ಎ ಸ್ಟಡಿ ಆಫ್ ಮೊಗವೀರ ಕಮ್ಯೂನಿಟಿ**", ಡಿ.ಕೆ ಮೊಗವೀರ ಮಹಾಜನ ಸಂಘ,ಉಚ್ಚಿಲ ಹಾಗೂ ಮೊಗವೀರ ಮಹಾಜನ ಸೇವಾ ಸಂಘ ಮುಂಬೈ.

೭. ಉದಯ ಕುಮಾರ ಇರ್ವತ್ತೂರು, ೨೦೦೭, "**ಉಡುಪಿ ಜಿಲ್ಲೆ, ಆಧುನೀಕರಣ, ಅಭಿವೃದ್ಧಿ ಮತ್ತು ಕೈಗಾರಿಕೆ**", ದಾಮಿನಿ ಸಾಹಿತ್ಯ, ಬೆಂಗಳೂರು.

೮. ಉದಯಕುಮಾರ್ ಹಟ್ಟಿಯಂಗಡಿ, (ಸಂ.,) ೨೦೦೮, "**ಮೊಗವೀರ ಸಿಂಚನ**", ಮೊಗವೀರ ಯುವ ಸಂಘಟನೆ(ರಿ),ಉಡುಪಿ ಜಿಲ್ಲೆ.

೯. ಎಡ್ಗರ್ ಥರ್ಸ್ಟನ್, ೨೦೦೧, "**ಕಾಸ್ಟಸ್ ಅಂಡ್ ಟ್ರೈಬ್ಸ್ ಆಫ್ ಸೌದರ್ನ್ ಇಂಡಿಯಾ, ಎಷಿಯಾನ್ ಎಜುಕೇಶನಲ್ ಸರ್ವೀಸ್**", ನ್ಯೂ ಡೆಲ್ಲಿ.

೧೦.ಗುರುರಾಜ ಭಟ್,ಪಿ. ೨೦೦೯,"**ತುಳುನಾಡು**", ಡಾ। ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ) ಉಡುಪಿ.

೧೧. ಗುಲಾಬಿ ಬಿಳಿಮಲೆ (ಸಂ), ೨೦೧೪, **" ಇನ್ನು ಸಾಕು!"**, ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಮಂಗಳೂರು.

೧೨. ಚನ್ನಮ್ಮ ಕೆ.ಸಿ., ೨೦೧೦,**" ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ"** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೧೩. ಚಂದ್ರಪೂಜಾರಿ ಎಂ., ೨೦೦೯, **" ಸಂಶೋಧನೆ ಏನು? ಏಕೆ? ಹೇಗೇ?"**,ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೧೪. ಜ್ಯೋತಿ ಶಶಿಕುಮಾರ್,೨೦೦೭, **" ಮಹಿಳಾ ಸಾಮಾಜಿಕತೆ"**, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ದೇಜಪ್ಪ ದಲ್ಲೋಡಿ ಎಂ. , ೦೧೨," ಬಿಲ್ಲವ ಸಾಂಸ್ಕೃತಿಕ ಸಂಪದ", ಪಿಎಚ್‌ಡಿ ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

೧೬. ನಿಕೇತನ, ೨೦೦೫, **" ಸ್ತ್ರೀ ದೃಷ್ಟಿ"** ರಾಶಿ ಪಬ್ಲಿಶಿಂಗ್,ಉಡುಪಿ.

೧೭. ಪುಣಿಚಿತ್ತಾಯ ವೆಂಕಟರಾಜ,೧೯೯೩, **"ಮೊಗವೀರ ಸಂಸ್ಕೃತಿಯ"**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೮. ಮೀನುಗಾರಿಕಾ ಇಲಾಖೆ, **"ಇಲಾಖಾ ಕಾರ್ಯಕ್ರಮಗಳು"**, ಉಡುಪಿ ಜಿಲ್ಲೆ.

೧೯. ಮೂರ್ತಿಶ್ವರಯ್ಯ ಬಿ.ಕಾ.,೨೦೦೮,**" ಮಹಿಳೆ ಸಮಾಜ ಮತ್ತು ಕಾನೂನು"**,ಸಪ್ನ ಬುಕ್ ಹೌಸ್, ಬೆಂಗಳೂರು.

೨೦. ಮೆಹ್ತಾ ಶಿರಿನ್, ೨೦೦೯, "ವಿಮನ್ ಅಂಡ್ ಸೋಶಿಯಲ್ ಚೇಂಜ್", ರಾವತ್ ಪಬ್ಲಿಕೇಶನ್ಸ್, ಜೈಪುರ್.

೨೧. ಶಂಕರ ರಾವ್ ಚ.ನ., ೨೦೦೪, **"ಸೋಶಿಯಲಾಜಿ ಆಫ್ ಇಂಡಿಯನ್ ಸೊಸೈಟಿ"**, ಎಸ್. ಚಂದ್ ಪಬ್ಲಿಕೇಷನ್.

೨೨. ಶಾಂತಿಪ್ರಿಯ, ೨೦೦೭,**"ರಾಣಿ ಅಬ್ಬಕ್ಕ"**, ತೇಜಸ್ ಪ್ರಕಾಶನ, ಬೆಂಗಳೂರು.

೨೩. ಶಾಲಿನಿ, ೨೦೦೯,**"ಇಂಪ್ಯಾಕ್ಟ್ ಆಫ್ ಎಜುಕೇಶನಲ್ ಒನ್ ಸೋಶಿಯಲ್ ಚೇಂಜ್ ಅಮಂಗ್ ಮೊಗವೀರ ವುಮೆನ್"**, ವಿನಾಯಕ ಮಿಷನ್ಸ್ ಯುನಿವರ್ಸಿಟಿ, ಸೇಲಂ, ತಮಿಳುನಾಡು.

೨೪. ಶಶಿಕಲ, ೨೦೧೦. **"ಮೊಗವೀರ ಸಮುದಾಯದ ಮಹಿಳೆಯರ ಶೈಕ್ಷಣಿಕ ಸಾಧನೆಗಳ ನಿರ್ಧಾರಕಗಳು:**

ಒಂದು ಸಮಾಜಶಾಸ್ತ್ರಿಯ ಅಧ್ಯಯನ" ಎಂ.ಫಿಲ್. ಪ್ರಬಂಧ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. (ಅಪ್ರಕಟಿತ ಪ್ರಬಂಧ)

೨೪. ಶ್ರೀಮತಿ, ಎಚ್.ಎಸ್., ೨೦೦೯, **" ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ"**,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨೫. ಸಬಿಹಾ ಭೂಮೀಗೌಡ, ೨೦೦೮ **"ಮಹಿಳಾ ಸಂಘಟನೆ ಹೋರಾಟ"**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೬. ಸ್ವಾಮಿ ಬಿ.ಎಸ್., ೨೦೦೯, **"ತುಳುನಾಡ ದರ್ಶನ"**, ಕಲಾ ಪ್ರಕಾಶನ, ಬೆಂಗಳೂರು.

೨೭. ಸರೋಜಾ, ಕೆ., ೨೦೦೮, **"ಮಹಿಳಾ ಆರೋಗ್ಯ ಒಂದು ಮರುಚಿಂತನೆ"**, ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. ಸುಪ್ರೀತಾ, ೨೦೧೨,**"ಸೋಶಿಯೋ-ಎಕಾನಮಿಕ್ ಕಂಡೀಷನ್ಸ್ ಅಫ್ ಖಾರ್ವಿ ಕಮ್ಯೂನಿಟಿ ಎ ಸ್ಟಡಿ ಇನ್ ಕುಂದಾಪುರ ತಾಲೂಕು"**, ಎಂ.ಎಸ್.ಡಬ್ಲ್ಯೂ ಕೋರ್ಸಿನ ಮಂಗಳೂರು ವಿಶ್ವವಿದ್ಯಾನಿಲಯ ಸಲ್ಲಿಸಿದ ಸಂಶೋಧನಾ ವರದಿ.

Websites:

www. Mogaveeracommunity.com

www.fisheriessectorinindia.com

www.udupipages.com

www.fisheries department in karnataka